ನಿಲುವಳಿ ಸೂಚನೆ

ಠಕ್ಕರ್ ವಿಚಾರಣಾ ಆಯೋಗದ ಬಗ್ಗೆ

† ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಮಾನ್ಯ ಜೆ. ಹೆಚ್. ಪಟೇಲರು ಹೇಳುವುದರಲ್ಲಿ ಅರ್ಥವಿಲ್ಲ ಅನ್ನಿಸುತ್ತದೆ. ನಿನ್ನೆ ತಮ್ಮ ಛೇಂಬರ್‌ನಲ್ಲಿ ಆದ ವಿಚಾರವನ್ನು ಹೊರಗಡೆ ಹೇಳಬೇಕಾಗಿಲ್ಲ. ನಿನ್ನೆ ಯಾವ ರೀತಿ ಸಮಾಧಾನ ಮಾಡಬೇಕು ಮತ್ತು ಹೇಗೆ ಹೌಸ್ ಅಡ್ಜರ್ನ್ ಮಾಡಬೇಕೆಂದು ತೀರ್ಮಾನ ಮಾಡಿ ಅದೇ ರೀತಿ ಅಡ್ಜರ್ನ್ ಆಯಿತು. ಇವತ್ತು ತಿರುಗಿ ಆ ವಿಷಯಕ್ಕೆ ಲೈಫ್ ಕೊಡುವುದಕ್ಕೆ ಪ್ರಯತ್ನ ಮಾಡುವುದರಲ್ಲಿ ಅರ್ಥವಿಲ್ಲ. ಮಾತು ಎತ್ತಿದರೆ ತಮಿಳ್ನಾಡು, ಆಂಧ್ರ ಕಡೆ ತೋರಿಸುತ್ತಾರೆ. ಮುಖ್ಯ ಮಂತ್ರಿಗಳೇ ಎದ್ದು ಅವಕಾಶ ಕೊಡಕೂಡದು ಎಂದು ಹೇಳಿದ್ದಾರೆ. ಇದರಲ್ಲಿ ಏನು ಹೇಳುತ್ತಿದ್ದಾರೆಂದರೆ, ''ತಮಿಳುನಾಡು ವಿಧಾನಸಭೆಯ ಘಟನೆಗಳನ್ನು ಕಾಂಗ್ರೆಸ್ ಮತ್ತು ಎಡಿಎಂಕೆ. ಸದಸ್ಯರು ಲೋಕಸಭೆಯಲ್ಲಿ ಪ್ರಸ್ತಾಪಿಸಲು ಯತ್ನಿಸಿದಾಗ ಸ್ಪೀಕರ್ ಅವಕಾಶ ಕೊಡಲಿಲ್ಲ ಈಗಲೂ ಇದಕ್ಕೆ ಅವಕಾಶ ಕೊಡಕೂಡದು ಎಂದು ಕರುಣಾನಿಧಿ ಹೇಳಿದ್ದಾರೆ.'' ಅದೇ ರೀತಿ ಆಂಧ್ರದಲ್ಲೂ ಹೇಳಿದ್ದಾರೆ, ಇದಕ್ಕೆ ಅವಕಾಶ ಕೊಡಕೂಡದು ಎಂದು. ಹೀಗಿರುವಾಗ ಮತ್ತೆ ಪ್ರಿಲಿಮಿನರಿ ಸಬ್‌ಮಿಷನ್ ಮಾಡಲಿ, ಆಮೇಲೆ ನೋಡೋಣ ಎನ್ನುವುದರಲ್ಲಿ ಅರ್ಥವಿಲ್ಲ. ಪ್ರಿಲಿಮಿನರಿ ಸಬ್‌ಮಿಷನ್ ಆಗುವಾಗ ಯಾವ ಯಾವ ತರಹ ಆಗುತ್ತದೆ ಎಂಬುದನ್ನು ವಿವರವಾಗಿ ತಮಗೆ ಹೇಳಿದ್ದೇವೆ ಹಾಗೂ ತಾವು ರಿಸ್ಕ್ ತೆಗೆದುಕೊಳ್ಳಬೇಕು ಎಂದರೆ ಅದು ತಮಗೆ ಬಿಟ್ಟಿದ್ದು.

ಶ್ರೀ ಎಸ್. ಆರ್. ಬೊಮ್ಮಾಯಿ.—ಅಧ್ಯಕ್ಷರೇ...

ಶ್ರೀ ಪಟವಾಕ್ಕಿ ರತ್ನಾಕರ್.—ದಯವಿಟ್ಟು ಕೇಳಿ.

ಶ್ರೀ ಎಸ್. ಆರ್. ಬೊಮ್ಮಾಯಿ.—ಈ ವಿಚಾರದಲ್ಲಿ ಆಂಧ್ರದಲ್ಲಿ ಕೂಡ...

(ಗೊಂದಲ)

ಅಧ್ಯಕ್ಷರು.—ನಾಗರತ್ನಮ್ಮನವರು ಮಾತನಾಡುವಾಗ ಈ ಕಡೆ ಕೇಳಿದ್ದಾರೆ. ಅದೇ ರೀತಿ ತಾವೂ ಕೇಳಿ.

ಶ್ರೀ ಎಸ್. ಆರ್. ಬೊಮ್ಮಾಯಿ.—ತಮ್ಮ ನಾಯಕರು ಎದ್ದುನಿಂತಾಗ ಈ ಕಡೆ ನಾವು ಸುಮ್ಮನೆ ಕುಳಿತಿದ್ದೆವು. ನಾವು ಎದ್ದಾಗ ನೀವು ನಾಲ್ಕಾರು ಜನ ಎದ್ದುನಿಂತರೆ ಈ ರೀತಿ ಸಭೆ ನಡೆಸುವುದು ಗೌರವವೆ ? ನಾನು ಎದ್ದು ನಿಂತಾಗ ..

ಶ್ರೀ ಆರ್. ರಾಮಯ್ಯ.— ಕನ್ನಡ ಭಾಷೆಯಲ್ಲಿ ವರದಿ ಕೊಡಿ ಎಂದು ಕೇಳುತ್ತಿದ್ದೇವೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಸಭಾಪತಿಗಳು ನನ್ನನ್ನು ಕರೆದಾಗ ನೀವು ಎದ್ದುನಿಲ್ಲುವುದು ಸತ್ಸಂಪ್ರದಾಯವೆ ?

ಶ್ರೀ ಬಿ. ಎ. ಉಮರಬ್ಬ.—ನಾವು ಮಾತನಾಡುವಾಗ ನಿಮ್ಮ ಕಡೆ ಯಾರೂ ನಿಲ್ಲದ ಹಾಗೆ ಜವಾಬ್ದಾರಿ ವಹಿಸಿಕೊಳ್ಳಿ. ಕನ್ನಡದಲ್ಲಿ ವರದಿ ಕೊಡಿ ಎಂದು ಕೇಳುತ್ತಿದ್ದೇವೆ.

ಶ್ರೀ ಎಸ್. ಆರ್. ಬೊಮ್ಮಾಯಿ. ಉಮರಬ್ಬನವರೇ, ತಾವು ಬಹಳ ದಿವಸದ ಮೇಲೆ ಸದನಕ್ಕೆ ಬಂದಿದ್ದೀರಿ. ತಡವಾಗಿ ಬಂದಿದ್ದೀರಿ. ಮಾನ್ಯ ಅಧ್ಯಕ್ಷರೇ, ಈ ವಿಚಾರದಲ್ಲಿ ನಮ್ಮ ಮನೆಯ ಕೆಲವು ನಿರ್ಣಯಗಳಿವೆ. ಹಿಂದೆ ಚೈನಾ ವಾರ್ ಆದಾಗ, ಪಾಕಿಸ್ತಾನ್ ವಾರ್ ಆದಾಗ ಈ ಮನೆಯಲ್ಲಿ ಪ್ರಿಲಿಮಿನರಿ ಸಬ್‌ಮಿಷನ್ ಮಾಡುವುದಕ್ಕೆ ಅವಕಾಶ ಕೊಟ್ಟಿದ್ದಾರೆ. ಅದರ ಬಗ್ಗೆ ರೂಲಿಂಗ್ ಕೊಟ್ಟಿದ್ದಾರೆ. ಹಿಂದೆ ನಮ್ಮ ಮನೆಯಲ್ಲಿ ನಿರ್ಣಯಗಳಾಗಿವೆ. ಜೊತೆಗೆ ರಾಷ್ಟ್ರೀಯ ಸಮಸ್ಯೆ ಬಗ್ಗೆ ಚರ್ಚೆ ಮಾಡುವುದಕ್ಕೆ ಅವಕಾಶ ಇದೆ. ಹಿಂದೆ ಇದೇರೀತಿ ವಿಚಾರದಲ್ಲಿ ಸರ್ಕಾರವೇ ಒಂದು ನಿರ್ಣಯ ತೆಗೆದುಕೊಂಡಿದೆ. ಈ ಮನೆಯಲ್ಲಿ ಮಾನ್ಯ ನಿಜಲಿಂಗಪ್ಪನವರೇ ನಿರ್ಣಯ ತಂದಿದ್ದಾರೆ. ಸದಸ್ಯರು ಚರ್ಚೆ ಮಾಡುವುದಕ್ಕೆ. ಪ್ರಿಲಿಮಿನರಿ ಸಬ್‌ಮಿಷನ್ ಮಾಡುವುದಕ್ಕೆ ಅವಕಾಶ ಕೊಟ್ಟಿದ್ದಾರೆ. ಪ್ರಿಲಿಮಿನರಿ ಸಬ್‌ಮಿಷನ್‌ಗೆ ಅವಕಾಶ ಕೊಟ್ಟು ಕನ್‌ಸೆಂಟ್ ವಿತ್‌ಡ್ರಾ ಮಾಡಿದ ಉದಾಹರಣೆ ಇವೆ. ಇದೇ ವಿಚಾರದಲ್ಲಿ ವೆಸ್ಟ್ ಬೆಂಗಾಲ್‌ನಲ್ಲಿ ಬಿಹಾರದಲ್ಲಿ ಚರ್ಚೆ ನಡೆಯುತ್ತಿದೆ. ಆಂಧ್ರದಲ್ಲಿ ಪ್ರಿಲಿಮಿನರಿ ಸಬ್‌ಮಿಷನ್‌ಗೆ ಅವಕಾಶ ಮಾಡಿಕೊಟ್ಟಿದ್ದಾರೆ. ನಿನ್ನೆ ತಮಿಳುನಾಡಿನಲ್ಲಿ ಅಲ್ಲಿನ ಮುಖ್ಯಮಂತ್ರಿಗಳು ಚರ್ಚೆ ಮಾಡಬಹುದು ಎಂದು ಹೇಳಿದ್ದಾರೆ. ರೂಲ್ಸ್ ಪ್ರಕಾರ ಬರವಣಿಗೆಯಲ್ಲಿ ಕೊಡಿ ಎಂದು ಅಲ್ಲಿ

ಸ್ಪೀಕರ್ ಹೇಳಿದ್ದಾರೆ. ತಮಿಳುನಾಡಿನಲ್ಲಿ ಅದಂಥ ಗಲಭೆ ಬಗ್ಗೆ ಪಾರ್ಲಿಮೆಂಟಿನಲ್ಲಿ ಚರ್ಚೆ ಮಾಡುವುದಕ್ಕೆ ಸಾಧ್ಯವಾದರೆ ಇಲ್ಲಿ ಏತಕ್ಕೆ ಚರ್ಚೆ ಮಾಡಬಾರದು ಎಂದು ಕರುಣಾನಿಧಿ ಕೇಳಿದ್ದಾರೆ. ಆ ಬಗ್ಗೆ ಪತ್ರಿಕೆಯಲ್ಲಿ ಸ್ಟೇಟ್‌ಮೆಂಟ್ ಬಂದಿದೆ. ಅದನ್ನು ಬೇಕಾದರೆ ಓದುತ್ತೇನೆ. ನಾನು ಸುಮ್ಮನೆ ಏನೋ ಹೇಳುವುದಿಲ್ಲ. ಇದು ಒಂದು ರಾಷ್ಟ್ರೀಯ ಭದ್ರತೆಯ ಸಮಸ್ಯೆ. ವೈಯುಕ್ತಿಕವಾದುದೇನೂ ಅಲ್ಲ. ಇದು ಪಕ್ಷದ ವಿಚಾರವೂ ಅಲ್ಲ. ಇದು ರಾಷ್ಟ್ರದ ವಿಚಾರ. ರಾಷ್ಟ್ರದ ಭದ್ರತೆ ಇಲ್ಲದೆ ಕರ್ನಾಟಕದ ಭದ್ರತೆಯೂ ಇಲ್ಲ, ಈ ಮನೆಯ ಭದ್ರತೆಯೂ ಇಲ್ಲ. ಇಂಥ ವಿಚಾರದಲ್ಲಿ ಅಡ್ಜರ್ನ್‌ಮೆಂಟ್ ಮೋಷನ್ ಕೊಟ್ಟಿದ್ದು ಪ್ರಿಲಿಮಿನರಿ ಸಬ್‌ಮಿಷನ್ ಮಾಡುವ ಮೊದಲೇ ನಿನ್ನೆ ಹೌಸ್ ಅಡ್ಜರ್ನ್ ಆಗಿದೆ. ನಿನ್ನೆ ಯಾವ ಹಂತದಲ್ಲಿ ಅಡ್ಜರ್ನ್ ಆಗಿದೆಯೋ ಅದೇ ಹಂತದಿಂದ ಇವತ್ತು ಪ್ರಾರಂಭ ಆಗಬೇಕು. ಅವರಿಗೆ ಪ್ರಿಲಿಮಿನರಿ ಸಬ್‌ಮಿಷನ್‌ಗೆ ಅವಕಾಶ ಕೊಡಿ. ಮುಂದೆ ಚರ್ಚೆಗೆ ಅನುಮತಿ ಕೊಟ್ಟರೆ ಚರ್ಚೆ ಆಗುತ್ತದೆ, ಇಲ್ಲದಿದ್ದರೆ ಇಲ್ಲ. ನಾವು ಬೇರೆ ವಿಚಾರ ಚರ್ಚೆ ಮಾಡುವುದಕ್ಕೆ ಹೆದರಿಕೊಂಡಿಲ್ಲ, ಆ ರೀತಿ ಚರ್ಚೆ ತಪ್ಪಿಸಬೇಕೆಂದಿದ್ದರೆ ರಿಪೋರ್ಟನ್ನು ಸಭೆ ಮುಂದೆ ಇಡುತ್ತಲೇ ಇರಲಿಲ್ಲ. ಆದ್ದರಿಂದ ಅವರು ಕಳುಹಿಸಿರುವ ಸೂಚನೆ ಬಗ್ಗೆ ಪ್ರಿಲಿಮಿನರಿ ಸಬ್‌ಮಿಷನ್ ಆಗಲಿ. ನಂತರ ಈ ವರದಿ ಬಗ್ಗೆ ಚರ್ಚೆ ಮಾಡೋಣ. ಯಾರು ಬೇಡ ಎಂದು ಹೇಳುತ್ತಾರೆ? ಮಾನ್ಯ ಸದಸ್ಯರಿಗೆ ಅಡ್ಜರ್ನ್‌ಮೆಂಟ್ ಮೋಷನ್ ಕೊಡುವುದಕ್ಕೆ ಹಕ್ಕಿದೆ. ಅವರು ಕೊಟ್ಟಿದ್ದಾರೆ. ಅವರಿಗೆ ಪ್ರಿಲಿಮಿನರಿ ಸಬ್‌ಮಿಷನ್ ಮಾಡತಕ್ಕ ಅವಕಾಶ ಇದೆ. ಆ ರೀತಿ ಸತ್‌ಸಂಪ್ರದಾಯ ಇದೆ. ತಾವೇ ಅಧ್ಯಕ್ಷರು ಛೇಂಬರ್‌ನಲ್ಲಿ ರಿಜೆಕ್ಟ್ ಮಾಡಿದಾಗ ಪ್ರಿಲಿಮಿನರಿ ಸಬ್‌ಮಿಷನ್ ಮಾಡುವುದು ನಮ್ಮ ಆಜನ್ಮಸಿದ್ಧವಾದ ಹಕ್ಕು ನಮಗೆ ಅವಕಾಶ ಕೊಡಲೇಬೇಕು ಎಂದು ಹೇಳಿದ್ದೀರಿ. ಮಾನ್ಯ ಸದಸ್ಯರಿಗೆ ಅವಕಾಶ ಮಾಡಿಕೊಡಿ. ಅವರು ಪ್ರಿಲಿಮಿನರಿ ಸಬ್‌ಮಿಷನ್ ಮಾಡಲಿ. ಅದರ ಮೇಲೆ ತಾವು ತಮ್ಮ ರೂಲಿಂಗ್ ಕೊಡಿ. ಅಮೇಲೆ ಈ ವಿಚಾರವನ್ನು ತೆಗೆದುಕೊಳ್ಳೋಣ.

ಶ್ರೀ ಕೆ. ಎಚ್. ಶ್ರೀನಿವಾಸ್.—ನನ್ನದೊಂದು ಕ್ರಿಯಾಲೋಪ ಇದೆ.

ಶ್ರೀ ಎಂ. ಎಸ್. ಕೃಷ್ಣನ್.—ಮಾನ್ಯ ಅಧ್ಯಕ್ಷರೆ,

ಅಧ್ಯಕ್ಷರು.—ಆಯಿತು. ಮಾನ್ಯ ಕೃಷ್ಣನ್‌ರವರೆ ಕುಳಿತುಕೊಳ್ಳಿ. ಶ್ರೀನಿವಾಸ್‌ರವರ ಪಾಯಿಂಟ್ ಆಫ್ ಆರ್ಡರ್ ಏನು ಎಂದು ಕೇಳೋಣ.

ಶ್ರೀ ಎಂ. ಎಸ್. ಕೃಷ್ಣನ್.—ಆಗಲೇ ಮಾನ್ಯ ಯಡಿಯೂರಪ್ಪನವರು ಒಂದು ವಿಷಯದ ಮೇಲೆ ಪಾಯಿಂಟ್ ಆಫ್ ಆರ್ಡರ್ ರೈಸ್ ಮಾಡಿದರು. ಆಗ ಅವರ ಪಾಯಿಂಟ್ ಆಫ್ ಆರ್ಡರ್‌ನ್ನು ಕೇಳುವುದಕ್ಕೆ ತಾವು ತಯಾರಿರಲಿಲ್ಲ. ಈಗ ಶ್ರೀನಿವಾಸ್‌ರವರು ಪಾಯಿಂಟ್ ಆಫ್ ಆರ್ಡರ್ ಎತ್ತಿದಾಗ ಅವರ ಪಾಯಿಂಟ್ ಆಫ್ ಆರ್ಡರ್‌ನ್ನು ಕೇಳುವುದಕ್ಕೆ ತಯಾರಿದ್ದೀರಿ...

ಅಧ್ಯಕ್ಷರು.—ಆಯಿತು. ಯಡಿಯೂರಪ್ಪನವರೆ ನಿಮ್ಮ ಪಾಯಿಂಟ್ ಆಫ್ ಆರ್ಡರ್ ಏನು?

ಶ್ರೀ ಬಿ. ಎಸ್. ಯಡಿಯೂರಪ್ಪ.—ನನ್ನ ಪಾಯಿಂಟ್ ಆಫ್ ಆರ್ಡರ್ ಏನೆಂದರೆ ನಾನು ತಮ್ಮಲ್ಲಿ ಪ್ರಾರ್ಥನೆ ಮಾಡುವುದೇನೆಂದರೆ, ನಾನು ೨೭ನೇ ತಾರೀಖು ತಮಗೊಂದು ನಿಲುವಳಿ ಸೂಚನೆಯನ್ನು ಕಳುಹಿಸಿಕೊಟ್ಟಿದ್ದೆ. ಅದಕ್ಕೆ ನೀವು ನನ್ನನ್ನು ಕುರಿತು ನಿಲುವಳಿ ಸೂಚನೆ ಮೇಲೆ ಚರ್ಚೆ ಮಾಡುವುದಕ್ಕೆ ಬರುವುದಿಲ್ಲ. ನೀವು ಮೊದಲೇ ನೋಟಿಸನ್ನು ಕೊಡಬೇಕಾಗಿತ್ತು, ಎಂದು ಹೇಳಿದಿರಿ. ಆ ವಿಚಾರ ಏನೆಂದರೆ, ಇಡೀ ರಾಜ್ಯದಲ್ಲಿ ೨೨ ಸಾವಿರ ಜನ ಸಹಕಾರಿ ಸಂಘಗಳಲ್ಲಿ ಕೆಲಸ ಮಾಡುತ್ತಿರತಕ್ಕಂತಹ ನೌಕರರು ಇವತ್ತು ಧರಣಿ ಕುಳಿತಿದ್ದಾರೆ. ೨೫-೩-೮೯ಕ್ಕಿಂತ ಮುಂಚಿತವಾಗಿ ಯಾವ ರೈತ ತಾನು ತೆಗೆದುಕೊಂಡ ಸಾಲಕ್ಕೆ ೭ ಪರ್ಸೆಂಟ್ ಬಡ್ಡಿಯನ್ನು ಮಾತ್ರ ಕೊಟ್ಟರೆ ಸಾಕೆಂದು ಸರ್ಕಾರ ತಿಳಿಸಿತ್ತು. ಆದರೆ ಆ ನೌಕರರು ಇವತ್ತು ಸತ್ಯಾಗ್ರಹದಲ್ಲಿ ಕುಳಿತಿರುವುದರಿಂದ ರೈತರು ಹಣವನ್ನು ತೆಗೆದುಕೊಂಡು ಹೋಗಿ ಕೊಡುವುದಕ್ಕೆ ಹೋದರೂ, ಅದನ್ನು ತೆಗೆದುಕೊಳ್ಳುವವರು ಯಾರೂ ಇಲ್ಲ. ಆದ್ದರಿಂದ ಈ ಅವಧಿಯನ್ನು ಒಂದು ತಿಂಗಳು ಮುಂದಕ್ಕೆ ಹಾಕಿ ಎಂದು ನಾನು ಸೂಚಿಸಿದ್ದೆ. ಅದನ್ನು ತಾವು ಗಮನ ಸೆಳೆಯುವ ಸೂಚನೆಯನ್ನಾಗಿ ಕನ್ವರ್ಟ್ ಮಾಡಿ ೨೯ನೇ ತಾರೀಖಿನಂದು ಅಜೆಂಡಾದಲ್ಲಿ ಸೇರಿಸಲಾಗಿತ್ತು, ಆದರೆ ನಿನ್ನೆ ದಿವಸ ಅನಿವಾರ್ಯ ಕಾರಣಗಳಿಂದಾಗಿ ಅದನ್ನು ಚರ್ಚೆಗೆ ತೆಗೆದುಕೊಳ್ಳಲಾಗಲಿಲ್ಲ. ನಿನ್ನೆ ಮತ್ತೊಂದು ಪ್ರಮುಖ ವಿಷಯದ ಬಗ್ಗೆ ನಿಲುವಳಿ ಸೂಚನೆಯನ್ನು ತಂದಿದ್ದರ ಪ್ರಯುಕ್ತ ನನ್ನ ಗಮನ ಸೆಳೆಯುವ ಸೂಚನೆಯನ್ನು ಕೈಬಿಟ್ಟಿದ್ದೀರಿ. ಇದು ಇಂತಹ ಒಂದು ಪ್ರಮುಖವಾದ ವಿಷಯವಾಗಿದ್ದರಿಂದ ಆ ಬಗ್ಗೆ ಇವತ್ತು ಮಂತ್ರಿಗಳಿಂದ ಹೇಳಿಕೆಯನ್ನಾದರೂ ಕೊಡಿಸಬೇಕು. ಈ ಒಂದು ಅವಧಿಯನ್ನು ಒಂದು ತಿಂಗಳಾದರೂ ಮುಂದುವರಿಸದಿದ್ದರೆ ರೈತರು ೧೪ ಪರ್ಸೆಂಟ್ ಬಡ್ಡಿಯನ್ನು ಕಟ್ಟಬೇಕಾಗುತ್ತದೆ. ರೈತರು ಸಾಲದ ಕಂತನ್ನು ಕಟ್ಟುವುದಕ್ಕೆ ತಯಾರಿದ್ದಾನೆ. ಆದರೆ ಆ ಹಣವನ್ನು

ತೆಗೆದುಕೊಳ್ಳುವವರು ಇಲ್ಲ. ಆದ್ದರಿಂದ ಇದರ ಬಗ್ಗೆ ಮಾನ್ಯ ಮಂತ್ರಿಗಳು ಆ ಬಗ್ಗೆ ಹೇಳಿಕೆಯನ್ನು ಕೊಡಬೇಕು. ನಂತರ ರೂಲ್ ೬೦ರ ಕೆಳಗೆ ಇರತಕ್ಕ ವಿಷಯವನ್ನು ಚರ್ಚೆಗೆ ತೆಗೆದುಕೊಳ್ಳಿ. ನಂತರ ಪ್ರಶ್ನೋತ್ತರ ವೇಳೆ ಮುಗಿದ ಮೇಲೆ ಠಕ್ಕರ್ ಆಯೋಗದ ಬಗ್ಗೆ ಚರ್ಚೆಯಾಗಲಿ. ಇದಕ್ಕೆ ದಯವಿಟ್ಟು ಆಡಳಿತ ಪಕ್ಷದ ಮುಖಂಡರು ಸಹಕಾರ ಕೊಡಬೇಕೆಂದು ನಾನು ವಿನಂತಿಮಾಡಿಕೊಳ್ಳುತ್ತೇನೆ.

ಶ್ರೀ ಆರ್. ವೆಂಕಟರಾಮಯ್ಯ.—ದಯಮಾಡಿ ಒಪ್ಪಿಕೊಳ್ಳಬೇಕು. ರೈತರಿಗೆ ಸಹಾಯ ವಾಗುವಂತಹ ವಿಚಾರ ಇದಾಗಿದೆ.

ಶ್ರೀ ಜೆ.ಎಚ್. ಪಟೇಲ್.—ನಾವೂ ರೈತರೇ ನೀವೊಬ್ಬರೇ ಅಲ್ಲ ರೈತರು.

ಶ್ರೀ ಪಂಪಾಪತಿ.—ರೈತರಿಂದ ಬಂದಿರತಕ್ಕ ಸರ್ಕಾರ ಇದು. ರೈತರಿಗಾಗಿ ಇರಬೇಕು.

ಶ್ರೀ ಜೆ.ಎಚ್. ಪಟೇಲ್.—ನಿಮಗೇ ಅಲ್ಲ ರೈತರು ಗೊತ್ತಿರುವುದು., ನಮಗೂ ಗೊತ್ತಿದ್ದಾರೆ.

ಶ್ರೀ ಪಂಪಾಪತಿ.—ಗೊತ್ತಿರುವುದನ್ನು ಹೇಳಬೇಕು, ಅದಕ್ಕಾಗಿಯೇ ಹೇಳುತ್ತಿದ್ದೇನೆ.

ಶ್ರೀ ಜೆ.ಎಚ್. ಪಟೇಲ್.—ಈ ವಿಷಯದ ಪ್ರಾಮುಖ್ಯತೆಯ ಬಗ್ಗೆ ನಮಗೆ ತಿಳುವಳಿಕೆ ಇದೆ. ಆದರೆ ಅದು ಅಜೆಂಡಾದಲ್ಲಿಲ್ಲ. ಆದ್ದರಿಂದ ಇದು ಪಾಯಿಂಟ್ ಆಫ್ ಆರ್ಡರ್ ಆಗುವುದಿಲ್ಲ. ಅಜೆಂಡಾದಲ್ಲಿ ಏನು ಬರುತ್ತದೆ ಅದರಂತೆ ಸಭೆಯ ಕಾರ್ಯಕಲಾಪಗಳು ನಡೆಯಬೇಕಾಗುತ್ತದೆ. ಅದರಲ್ಲಿ ಸೇರಿಸುವಂತಹದ್ದು ಬಿಡುವಂತಹದ್ದು ಅಧ್ಯಕ್ಷರಿಗೆ ಬಿಟ್ಟಿದ್ದು ಆದ್ದರಿಂದ ಇದು ಪಾಯಿಂಟ್ ಆಫ್ ಆರ್ಡರ್ ಆಗುವುದಿಲ್ಲ. ವಿಷಯದ ಬಗ್ಗೆ ಸರ್ಕಾರ ಸದನದಲ್ಲಿ ಇವತ್ತೇ ಹೇಳಿಕೆಯನ್ನು ಕೊಡುತ್ತದೆ.

ಅಧ್ಯಕ್ಷರು.—ಅವರು ನಿಲುವಳಿ ಸೂಚನೆಯನ್ನು ಆ ವಿಷಯದ ಬಗ್ಗೆ ಕೊಟ್ಟಿದ್ದರು. ನಾನು ಅದನ್ನು ಗಮನ ಸೆಳೆಯುವ ಸೂಚನೆಯಾಗಿ ಕನ್ವರ್ಟ್ ಮಾಡಿ ಮೊನ್ನೆ ದಿವಸವೇ ಇಟ್ಟಿದ್ದೆ, ದುರ್ದೈವ ವಶಾತ್ ಅದು ಅಪ್ಪರವರೆಗೆ ರೀಚಾಗಲಿಲ್ಲ, ಈಗ ಅದು ಲ್ಯಾಪ್ಸ್ ಆಗಿದೆ. ಇನ್ನೊಂದು ಗಮನ ಸೆಳೆಯುವ ಸೂಚನೆಯನ್ನು ಕೊಡಿ, ನಾಳೆ ಇಡುತ್ತೇನೆ, ಉತ್ತರ ಬೇಕಾದರೆ ಉತ್ತರ ಕೊಡಿಸುತ್ತೇನೆ.

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಅವರು ಸ್ಟೇಟ್‌ಮೆಂಟ್ ಕೊಡುವಾಗ ನಮ್ಮದೂ ಹಾಗೂ ಧರ್ಮಸಿಂಗ್ ಇಬ್ಬರದ್ದೂ ಗಮನ ಸೆಳೆಯುವ ಸೂಚನೆಗಳಿವೆ...

ಅಧ್ಯಕ್ಷರು.—ತಮ್ಮನ್ನು ನಾನು ಏನು ಕೇಳುತ್ತಿದ್ದೇನೆಂದರೆ, ಸಭಾ ನಾಯಕರ ಅಭಿಪ್ರಾಯವನ್ನು ತೆಗೆದುಕೊಂಡು ನಂತರ ವಿರೋಧಪಕ್ಷದ ನಾಯಕರ ಅಭಿಪ್ರಾಯವನ್ನು ತೆಗೆದುಕೊಂಡು ಸಭೆಯನ್ನು ನಡೆಸಬೇಕಾಗುತ್ತದೆ. ಬಹುಮತದ ಅಭಿಪ್ರಾಯದ ಪ್ರಕಾರ ಸಭೆಯನ್ನು ನಡೆಸಬೇಕಾಗುತ್ತದೆ. ಇಲ್ಲಿ ಸರ್ವಾನುಮತದ ಅಭಿಪ್ರಾಯದಿಂದ ಸಭೆಯನ್ನು ನಡೆಸಬೇಕಾಗುತ್ತದೆ. ಆದರೆ ಭಿನ್ನಾಭಿಪ್ರಾಯ ಬಂದಾಗ ನಾನು ಏನು ಮಾಡಲಿ ? ಮುಖ್ಯಮಂತ್ರಿಗಳು ಮೊದಲು ನಿಲುವಳಿ ಸೂಚನೆಯನ್ನು ಚರ್ಚೆಗೆ ತೆಗೆದುಕೊಳ್ಳಿ ಎಂದು ಹೇಳುತ್ತಿದ್ದಾರೆ. ವಿರೋಧಪಕ್ಷದ ನಾಯಕರು ಬೇಡ ಎಂದು ಹೇಳುತ್ತಾರೆ. ಈ ಹೊತ್ತಿನಲ್ಲಿ ನಾನು ಏನು ಮಾಡಬೇಕು ?

೧೧–೩೦ ಎ. ಎಂ.

ವಿರೋಧ ಪಕ್ಷದ ನಾಯಕರು ನಿಯಮ ೬೦ನ್ನು ಚರ್ಚೆಗೆ ತೆಗೆದುಕೊಳ್ಳಬೇಕೆಂದು ಹೇಳುತ್ತಿದ್ದಾರೆ ಆದರೆ ಸದನದ ನಾಯಕರು, ಇದು ಬೇಡ ಮಾನ್ಯ ಎಂ.ಎಸ್ ಕೃಷ್ಣನ್ ಮತ್ತು ವೆಂಕಟರಾಮಯ್ಯ ನವರು ಏನು ಅಡ್ಜರ್ನ್‌ಮೆಂಟ್ ಮೋಷನ್ ಕೊಟ್ಟಿದ್ದಾರೆ ಅದು ಇದಕ್ಕಿಂತಾ ಮಹತ್ವದಾಗಿರುವುದ ರಿಂದ ಇದನ್ನು ಮೊದಲು ತೆಗೆದುಕೊಳ್ಳಿ ಎಂದು ಹೇಳುತ್ತಿದ್ದಾರೆ. ಸದನದ ನಾಯಕರ ಅಭಿಪ್ರಾಯ ಒಂದು ಇದ್ದಾಗ ವಿರೋಧಪಕ್ಷದ ನಾಯಕರು ಇನ್ನೊಂದು ಅಭಿಪ್ರಾಯ ಇಟ್ಟಿದ್ದಾರೆ. ಇಂತಹ ಸಮಯದಲ್ಲಿ ನಾನು ಏನು ಮಾಡಬೇಕೆಂದು ನೀವು ಸ್ವಲ್ಪ ಹೇಳಿ. ನೀವು ಸಲಹೆಕೊಡಿ. ಇದು ಸಂದಿಗ್ಧ ಪರಿಸ್ಥಿತಿ ಇದೆ.

ಶ್ರೀ ಕೆ.ಹೆಚ್. ಶ್ರೀನಿವಾಸ್.—ಒಂದು ಪಾಯಿಂಟ್ ಆಫ್ ಆರ್ಡರ್ ಇದ್ದಾಗ ಅದನ್ನು ಡಿಸ್ ಪೋಸ್ ಮಾಡಿ. ಇನ್ನೊಂದರ ಬಗ್ಗೆ ತಾವು ಅಭಿಪ್ರಾಯ ಕೇಳಬೇಕು,

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಮಾನ್ಯ ಯಡಿಯೂರಪ್ಪನವರು ಏನು ವಿಷಯ ಪ್ರಸ್ತಾಪ ಮಾಡಿದ್ದಾರೆ ಅದೇ ವಿಷಯದ ಬಗ್ಗೆ ನಾನು ಹಾಗೂ ಧರ್ಮಸಿಂಗ್ ಅವರೂ ನೋಟೀಸ್ ಕೊಟ್ಟಿದ್ದೇವೆ,

ನಾನು ಮಾನ್ಯ ಮಂತ್ರಿಗಳಲ್ಲಿ ರಿಕ್ವೆಸ್ಟ್ ಮಾಡುವುದೇನೆಂದರೆ. ಅವರು ಈ ಸ್ಕೇರ್ಸಿಟಿ ಬಗ್ಗೆ ಒಂದು ಕಾಂಪ್ರಹೆನ್ಸಿವ್ ಸ್ಟೇಟ್‌ಮೆಂಟ್ ಕೊಡಲಿ. ಇವತ್ತು ಫಾದರ್ ಪ್ರಾಬ್ಲಮ್ ಇದೆ; ಇವೆಲ್ಲಾ ಸೇರಿಸಿ ಒಂದು ಉತ್ತರ ಕೊಡಲಿ. ಇವೆಲ್ಲದರ ಬಗ್ಗೆ ಸಮಗ್ರವಾದ ಸ್ಟೇಟ್‌ಮೆಂಟ್ ಕೊಡಬೇಕೆಂದು ಹೇಳುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ.—ಹಾಗೆಂದರೆ ಹಾವೂ ಸಾಯಬಾರದು, ಕೋಲೂ ಮುರಿಯಬಾರದು ಎಂದಹಾಗೆ ಆಗುತ್ತದೆ. ದಯಮಾಡಿ ಮಾನ್ಯ ಕಂದಾಯ ಮಂತ್ರಿಗಳು ನಾನು ಎತ್ತಿರುವ ವಿಷಯದ ಬಗ್ಗೆ ಉತ್ತರವನ್ನು ಕೊಡಬೇಕು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಹಾಗಿದ್ದರೆ ಅವರವರು ಅವರವರ ವಿಷಯದ ಬಗ್ಗೆ ಎಷ್ಟು ಮಾತನಾಡುತ್ತಾರೋ ಅದಕ್ಕೆ ಅವಕಾಶ ಮಾಡಿಕೊಡಿ. ಸದನದಲ್ಲಿ ಸಮಯವಿಲ್ಲದ್ದರಿಂದ ನಾನು ಹಾಗೆ ಹೇಳಿವೆ,

ಅಧ್ಯಕ್ಷರು.—ಸದನದ ನಾಯಕರು ಅಡ್ಜರ್ನ್‌ಮೆಂಟ್ ಮೋಷನ್ ತೆಗೆದುಕೊಳ್ಳಿ ಎಂದು ಹೇಳಿದ್ದಾರೆ.

† ಶ್ರೀ ಎಸ್. ಬಂಗಾರಪ್ಪ —ಮಾನ್ಯ ಅಧ್ಯಕ್ಷರೆ, ಇಲ್ಲಿ ಒಂದು ಅಡ್ಜರ್ನ್‌ಮೆಂಟ್ ಮೋಷನ್ ವಿಚಾರ ಬಂದಾಗ ಅದನ್ನು ಪ್ರಶ್ನೋತ್ತರ ವೇಳೆ ಆದಮೇಲೆ ತೆಗೆದುಕೊಳ್ಳಬೇಕೆಂದು ನಿಯಮದಲ್ಲಿ ಇರತಕ್ಕ ವಿಚಾರ ಆದರೆ ಇವತ್ತು ತಾವು ಅಜೆಂಡಾದಲ್ಲಿ ನಿಯಮ ೬೮ರ ಮೇರೆಗೆ ಅಲ್ಪಕಾಲಾವಧಿ ಚರ್ಚೆಯನ್ನು ಮೊದಲು ಇಟ್ಟು ಆ ನಂತರ ಪ್ರಶ್ನೋತ್ತರ ವೇಳೆಯನ್ನು ನಿಗದಿ ಮಾಡಿದ್ದೀರಿ, ಯಾವುದೇ ವಿಚಾರವನ್ನು ಪ್ರಶ್ನೋತ್ತರ ವೇಳೆ ಮುಗಿದಮೇಲೆ ತೆಗೆದುಕೊಳ್ಳಬೇಕೆನ್ನುವುದು ಇದೆ, ನಿನ್ನೆ ತಮ್ಮ ಕೊಠಡಿಯಲ್ಲಿ ಏನು ಚರ್ಚೆ ನಡೆಯಿತು ಎಂದು ಇಲ್ಲಿ ಹೇಳುವುದು ಒಳ್ಳೆಯದಲ್ಲ. ಎಲ್ಲಾ ವಿವರವನ್ನು ಇಲ್ಲಿ ಹೇಳುವುದು ಒಳ್ಳೆಯದಲ್ಲವೆಂದು ನಾನು ಸುಮ್ಮನಿದ್ದೇನೆ. ಅಲ್ಲಿ ಚರ್ಚೆಯಾಗತಕ್ಕ ಕಾಲದಲ್ಲಿ ಮುಖ್ಯಮಂತ್ರಿಗಳು ಇರಲಿಲ್ಲವಾದರೂ ಅವರ ಪರವಾಗಿ ಜೆ. ಹೆಚ್. ಪಾಟೀಲರು ಇದ್ದರು ಮತ್ತು ಸಂಸದೀಯ ವ್ಯವಹಾರ ಖಾತೆಯ ಮಂತ್ರಿಗಳೂ ಅಲ್ಲಿ ಇದ್ದರು. ಅಲ್ಲಿ ಈ ವಿಚಾರ ಬಂದಾಗ ಒಂದು ಮಾತನ್ನು ಹೇಳಿದರು. ಈ ಸದನದಲ್ಲಿ ನಮ್ಮ ವಿಚಾರ ಇದ್ದಾಗ ಬೇರೆ ಒಂದು ವಿಚಾರ ಈ ಸದನದ ನಿಯಮಾವಳಿ ವ್ಯಾಪ್ತಿಯ ಒಳಗೆ ಬರುತ್ತದೆಯೋ ಆ ವಿಚಾರವನ್ನು ಮಾತ್ರ ತೆಗೆದುಕೊಳ್ಳುವುದಕ್ಕೆ ಸಾಧ್ಯ, ಉಳಿದವು ಬರುವುದಿಲ್ಲ ಎಂದು ನಾವು ಪದೇ ಪದೇ ಹೇಳುತ್ತಿದ್ದೇವೆ, ೧೯೬೨ ಹಾಗೂ ೧೯೬೫ರಲ್ಲಿ ಚೈನಾ ಆಗಲಿ ಪಾಕಿಸ್ಥಾನದವರು ನಮ್ಮ ದೇಶದ ಮೇಲೆ ಎರಗಿದ ಸಮಯದಲ್ಲಿ ಈ ಸದನದಲ್ಲಿ ನಿರ್ಣಯ ಆಗಿವೆ ಎನ್ನುವ ವಿಚಾರವನ್ನು ಹೇಳಿದರು. ನಾವು ಅವನ್ನು ಹೇಳುವುದಕ್ಕೆ ಹೋಗಲಿಲ್ಲ. ಎಲ್ಲವನ್ನೂ ತೆಗೆದುಕೊಳ್ಳುವುದಕ್ಕೆ ಹೋದರೆ ತಮ್ಮ ಕೊಠಡಿಯಲ್ಲಿ ಏನು ಚರ್ಚೆಯಾಯಿತು ಅವನ್ನೆಲ್ಲಾ ಹೇಳಬೇಕಾಗುತ್ತದೆ. ಆ ದೃಷ್ಟಿಯಿಂದ ಸುಮ್ಮನಿದ್ದೇನೆ. ಸಭಾನಾಯಕರು ಅದನ್ನು ಹೇಳಿರುವುದರಿಂದ ಅನಿವಾರ್ಯವಾಗಿ ನಾವು ಪ್ರಸ್ತಾಪ ಮಾಡಬೇಕಾಗುತ್ತದೆ. ೧೯೬೨ ಹಾಗೂ ೧೯೬೫ರಲ್ಲಿ ನಮ್ಮ ರಾಷ್ಟ್ರದ ಮೇಲೆ ಧಾಳಿಯಾದಾಗ ಅದು ರಾಷ್ಟ್ರೀಯ ವಿಚಾರವಷ್ಟೇ ಅಲ್ಲದೇ ರಾಷ್ಟ್ರದ ಭದ್ರತೆಯ ದೃಷ್ಟಿ ಕೂಡಾ ಇದ್ದಾಗ ಆ ಒಂದು ಅಗ್ರೆಷನ್ ಸಮಯದಲ್ಲಿ ಒಂದು ನಿರ್ಣಯ ತೆಗೆದುಕೊಂಡದ್ದು ಇದೆ, ಆ ಸಂದರ್ಭದಲ್ಲಿ ನಾವು ನಮ್ಮ ಏಕತೆಯನ್ನು ವ್ಯಕ್ತಪಡಿಸಬೇಕು. ಆ ದೃಷ್ಟಿಯಿಂದ ಪಕ್ಷಾತೀತವಾಗಿ ಅಂದರೆ ಎಲ್ಲಾ ರಾಜಕೀಯ ಪಕ್ಷಗಳವರು ಸೇರಿ ನಿರ್ಣಯಗಳನ್ನು ಮಾಡಿ ಕಳುಹಿಸಿ ಕೊಡುತ್ತೇವೆ. ಅಂತಹ ಸಂದರ್ಭಗಳಲ್ಲಿ ಮಾಡಿ ಕಳುಹಿಸಿ ಕೊಡುತ್ತೇವೆ ಇಲ್ಲವೆಂದು ಹೇಳುವುದಿಲ್ಲ. ಅದರೆ ಈ ವಿಚಾರವನ್ನು ಚರ್ಚೆಗೆ ತೆಗೆದುಕೊಂಡರೆ ಇವತ್ತು ರಾಷ್ಟ್ರದ ದೃಷ್ಟಿಯಿಂದ ಒಂದು ವಿಚಾರವನ್ನು ಹೇಳತಕ್ಕ ಸಂದರ್ಭ ಬಂದಾಗ ಯಾರದು ಅಭ್ಯಂತರವಿಲ್ಲ, ಠಕ್ಕರ್ ವಿಚಾರಣೆ ಆಯೋಗದ ಬಗ್ಗೆ ಪ್ರಸ್ತಾಪ ಮಾಡಿದರೆ ಅದರ ಬಗ್ಗೆ ಪರ ಮತ್ತು ವಿರೋಧವಾಗಿ ಬಂದಿರತಕ್ಕ ವಿಚಾರಗಳು ಪತ್ರಿಕೆಗಳಲ್ಲಿ ಈಗಾಗಲೇ ವ್ಯಾಪಕವಾಗಿ ಬಂದಿರುವುದರಿಂದ. ತಾವು ವಿಚಾರವನ್ನು ಮಂಡನೆ ಮಾಡುವುದಕ್ಕೆ ಒಪ್ಪಿಗೆ ಕೊಟ್ಟಿದ್ದೀರಿ ಎಂದು ಅಲ್ಲ. ಠಕ್ಕರ್ ವರದಿಯನ್ನು ಟೇಬಲ್ ಮೇಲೆ ಮಂಡನೆ ಮಾಡಲಿಕ್ಕೆ ಅವಕಾಶ ಕೊಟ್ಟಿಲ್ಲ. ಅವರು ಪ್ರಸ್ತಾಪ ಮಾಡಲಿಕ್ಕೆ ಅವಕಾಶವನ್ನು ಕೇಳುತ್ತಿದ್ದಾರೆ. ಇಂತಹ ಸಂದರ್ಭಗಳಲ್ಲಿ ತಾವು ಎಷ್ಟೋ ವಿಚಾರಗಳನ್ನು ಪ್ರಸ್ತಾಪ ಮಾಡಲಿಕ್ಕೆ ನಮಗೆ ಅನುಮತಿಯನ್ನು ಕೊಟ್ಟಿದ್ದೀರಿ, ಕೊಟ್ಟಿಲ್ಲವೆಂದು ಹೇಳುವುದಿಲ್ಲ, ಆದರೆ ಇಂತಹ ಗಂಭೀರವಾಗಿರತಕ್ಕ ವಿಚಾರವನ್ನು ರಾಷ್ಟ್ರಕ್ಕೆ ಸಂಬಂಧಪಟ್ಟ ವಿಚಾರವನ್ನು ರಾಜ್ಯಗಳ ಶಾಸನಸಭೆಗಳಲ್ಲಿ ಪ್ರಸ್ತಾಪ ಮಾಡಿದರೆ ಏನಾಗುತ್ತದೆಂಬುದನ್ನು ನಮ್ಮ ವಿರೋಧ ಪಕ್ಷದ ನಾಯಕರು ಹೇಳಿದ್ದಾರೆ, ತಮಿಳುನಾಡಿನ ಮುಖ್ಯಮಂತ್ರಿಗಳಾದ ಕರುಣಾನಿಧಿಯವರು ಏನ್ನ

---

† ಈ ಚಿಹ್ನೆ ಮಾನ್ಯ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ಹೇಳಿದ್ದಾರೆ? ಇಲ್ಲಿ ಚರ್ಚೆ ಮಾಡುವುದಕ್ಕೆ ಬರುವುದಿಲ್ಲವೆನ್ನುವ ಮಾತನ್ನು ಅವರು ವ್ಯಕ್ತಪಡಿಸಿದ್ದಾರೆ. ಆಂಧ್ರಪ್ರದೇಶದಲ್ಲೂ ಕೂಡ ಇಲ್ಲಿ ಚರ್ಚೆಮಾಡುವುದಕ್ಕೆ ಬರುವುದಿಲ್ಲವೆಂದು ನಿರ್ಣಯ ಮಾಡಿದ್ದಾರೆ. ಪ್ರಿಲಿಮಿನರಿಯಾಗಿ ಸಬ್‌ಮಿಷನ್ ಮಾಡತಕ್ಕ ವಿಚಾರವಾಗಬಹುದು. ನಮ್ಮ ಪ್ರಕಾರ ತಮಿಳುನಾಡಿನಲ್ಲಿ ಅಲ್ಲಿನ ಶಾಸನಸಭೆಯಲ್ಲಿ ಪ್ರಿಲಿಮಿನರಿಯಾಗಿ ಸಬ್‌ಮಿಷನ್ ಮಾಡುವುದಕ್ಕೆ ಬರುವುದಿಲ್ಲವೆಂದು ಕರುಣಾನಿಧಿಯವರು ಹೇಳಿದ್ದಾರೆ. ಅವರನ್ನು ನೋಡಿ ನೀವು ಹಾಗೆಯೇ ಮಾಡಬೇಕೆಂದು ಹೇಳುತ್ತಿಲ್ಲ. ಆದರೆ ಗಂಭೀರತೆಯ ಆಳವನ್ನು ಪ್ರಾಮುಖ್ಯತೆಯನ್ನು ಅನುಸರಿಸಿ ಮಾಡಬೇಕೆಂದು ನಾನು ಜವಾಬ್ದಾರಿಯಿಂದ ಈ ಮಾತನ್ನು ಹೇಳುತ್ತಿದ್ದೇನೆ. ಪೂರ್ವಭಾವಿಯಾಗಿ ನಾನು ನಾಲ್ಕು ಮಾತುಗಳನ್ನು ಹೇಳುವುದಕ್ಕೆ ಅವಕಾಶವನ್ನು ಕೊಟ್ಟಿದ್ದೆ ಆದರೆ ಒಂದು ವೇಳೆ ಚರ್ಚೆ ಪ್ರಾರಂಭವಾದರೆ the moment that matter is allowed to be discussed even in the from of a preliminary submission, the entire matter becomes the subject matter of this House. ತಾವು ಇದನ್ನು ವಿಚಾರ ಮಾಡಬೇಕು. ಮಾತನಾಡತಕ್ಕ ಮಾನ್ಯಸದಸ್ಯರು ಮಾತನಾಡಬೇಕಾದರೆ ಪ್ರಧಾನಮಂತ್ರಿಗಳ ಸೆಕ್ಯೂರಿಟಿ ಅಷ್ಟಕ್ಕೆ ಸೀಮಿತಗೊಳಿಸಿ ಮಾತನಾಡುತ್ತಾರೆಂದು ಯಾವ ಗ್ಯಾರಂಟಿ? ಈ ಸದನದಲ್ಲಿ ಆ ರೀತಿಯ ಒಂದು ಗ್ಯಾರಂಟಿಗೆ ಬರಲಿಕ್ಕೆ ಸಾಧ್ಯವಿಲ್ಲ. ಮಾನ್ಯಸದಸ್ಯರು ಮಾತನಾಡುವಾಗ ಏನು ಮಿತಿಯನ್ನು ಹಾಕುತ್ತೀರಿ ಆ ಮಿತಿಯನ್ನು ದಾಟಿ ಹೋಗುತ್ತಾರೆ. ಅದನ್ನು ಕಟ್ಟಿ ನಿಲ್ಲಿಸುವುದಕ್ಕೆ ಆಗುವುದಿಲ್ಲ. ಒಬ್ಬ ಸದಸ್ಯರು ಏನಾದರೂ ಹೇಳಿದರೆ ಅದನ್ನು ತೆಗೆಸಿ ಹಾಕುತ್ತೇನೆಂದು ತಾವು ಹೇಳಬಹುದು. ಯಾವ ಮಾತನ್ನು ತೆಗೆಯುತ್ತೀರಿ ಯಾವ ಮಾತನ್ನು ಇಡಬೇಕು. ಯಾವುದನ್ನು ಬಿಡಬೇಕೆನ್ನುವುದು ಸಮಸ್ಯೆಯಾಗುತ್ತದೆ. ಅನ್‌ಪಾರ್ಲಿಮೆಂಟರಿ ಇಲ್ಲದೆ ಯಾವ ಪದಗಳು ಬರುವುದಿಲ್ಲ. ನಮ್ಮಲ್ಲಿರುವ ನಿಯಮಗಳ ಚೌಕಟ್ಟಿನಲ್ಲಿ ತೊಂದರೆಯಿದೆ. ೧೯೫೭ರಲ್ಲಿ ಮತ್ತು ೧೯೬೨ರಲ್ಲಿ ಈ ತರಹ ವಿಚಾರಗಳು ಚರ್ಚೆಯಾಗಿರಬಹುದು, ಆದರೆ ಆಗ ಇದ್ದ ಪರಿಸ್ಥಿತಿ ಬೇರೆ. ನಮ್ಮ ರಾಜ್ಯಕ್ಕೆ ಸಂಬಂಧಪಟ್ಟ ವಿಷಯವನ್ನು ಚರ್ಚೆ ಮಾಡುವುದಕ್ಕೆ ಅವಕಾಶವಿದೆ. ನಮ್ಮ ರಾಷ್ಟ್ರದ ಹಿತದೃಷ್ಟಿಯಿಂದ ನಾವು ಕೆಲಸ ಮಾಡಬೇಕಾಗಿದೆ. ಠಕ್ಕರ್ ಆಯೋಗದ ವರದಿಯನ್ನು ಪೂರ್ವಭಾವಿಯಾಗಿ ಚರ್ಚೆ ಮಾಡಲಿಕ್ಕೆ ಅವಕಾಶ ಕೊಟ್ಟರೆ, ಇವತ್ತು ನಮ್ಮ ಪಕ್ಷ ಅಲ್ಲಿ ಅಧಿಕಾರದಲ್ಲಿರಬಹುದು, ದಯಮಾಡಿ ಅದರ ಗಂಭೀರತೆಯನ್ನು ಅರ್ಥಮಾಡಿಕೊಂಡು ಅದರ ವ್ಯಾಪ್ತಿಯನ್ನು ತಿಳಿದು ಅದಕ್ಕೆ ಅವಕಾಶ ಕೊಡುವುದು ಬೇಡ. ಏಕೆಂದರೆ ಅದು ತಮ್ಮ ಹಿಡಿತಕ್ಕೆ ಸಿಗದೆ ಮುಂದೆ ಬಹಳ ಹಾದು ಹೋಗುತ್ತದೆ. ಅವಕಾಶ ಕೊಡುವುದು ಬೇಡ. ಪಕ್ಕದ ರಾಜ್ಯದ ಮುಖ್ಯ ಮಂತ್ರಿಗಳು ಹೇಳಿದ ಮಾತುಗಳನ್ನು ಇಲ್ಲಿ ನೆನಪು ಮಾಡಿಕೊಟ್ಟಿದ್ದೇನೆ, ನಿಮ್ಮ ಎದುರಿಗೆ ನಾನು ಹೇಳಿದ್ದೇನೆ. ಈಗಲೂ ಕೂಡ ಹೇಳಬೇಕಾಗಿದೆ ದಯಮಾಡಿ ಠಕ್ಕರ್ ಆಯೋಗದ ವರದಿಯ ಚರ್ಚೆ, ಅದರ ವ್ಯಾಪ್ತಿ, ಹಕ್ಕು ಮತ್ತಿತರ ವಿಚಾರಗಳ. ನಮ್ಮ ಸದನಕ್ಕೆ ಬರುವುದಿಲ್ಲ. ನೀವು ಹೇಳಬಹುದು, ಅವರು ಹೇಳುವುದು ಹೇಳಿಕೊಳ್ಳಲಿ. ಅದನ್ನು ವಜಾ ಮಾಡತಕ್ಕಂಥ ವಿಚಾರ ನನ್ನ ಹತ್ತಿರ ಇದೆಯಲ್ಲ, ನನಗೆ ಆ ಅಧಿಕಾರವನ್ನು ನೀವು ಕೊಟ್ಟಿದ್ದೀರಿ ಎಂದು ನೀವು ಹೇಳಬಹುದು. ಅಥವಾ ಅವರೂ ಹೇಳಬಹುದು. ಪೂರ್ವಭಾವಿ ವಿಚಾರ ಕೇಳಿದ ಮೇಲೆ ಅದು ಬರುವುದಿಲ್ಲವೆಂದು ಹೇಳತಕ್ಕಂಥ ಮಾತನ್ನು ಸರ್ಕಾರದ ಪರವಾಗಿ ಹೇಳಿಬಿಡಬಹುದು ಎಂದು ಸಭಾನಾಯಕರು ಅಥವಾ ಸರ್ಕಾರದ ಪರವಾಗಿ ಶ್ರೀ ಪಟೇಲರು ಮತ್ತೊಬ್ಬರು ಅನ್ನಬಹುದು ಇಲ್ಲಿ ಎಷ್ಟೋ ಕೆಲವು ವಿಚಾರಗಳು ದಾಖಲೆಗೆ ಹೋದರೆ ಪತ್ರಿಕೆಗಳ ಮೂಲಕ ಜನರ ಗಮನಕ್ಕೆ ಬಂದಾಗ ಅದರ ವ್ಯಾಪ್ತಿ ಎಲ್ಲಿಯವರೆಗೆ ನಮ್ಮನ್ನು ಸೆಳೆಯುತ್ತದೆ ಎನ್ನತಕ್ಕಂಥ ಅಂಶವನ್ನು ನೀವು ಗಮನಿಸಬೇಕೆಂದು ಈ ಸಂದರ್ಭದಲ್ಲಿ ನಾನು ನಿಮ್ಮನ್ನು ಪ್ರಾರ್ಥಿಸಿಕೊಳ್ಳುತ್ತೇನೆ. ಅದಕ್ಕಾಗಿ ಈ ಒಂದು ವಿಚಾರದ ಪ್ರಸ್ತಾಪ ಬೇಡವೆನ್ನತಕ್ಕದ್ದು. ಜೊತೆಗೆ ನಿನ್ನೆ ತಮ್ಮ ಕೊಠಡಿಯಲ್ಲಿ ನಾವು ಮಾತನಾಡಿದಾಗ ಯಾವುದೇ ಸಂದರ್ಭದಲ್ಲಿ ಚರ್ಚೆ ಮಾಡಬೇಕಾದರೆ ನಮ್ಮಿಂದ ತೀರ್ಮಾನ ಮಾಡುವುದಕ್ಕೆ ಆಗಿಲ್ಲ. We are on two parallel lines,. Parallel lines cannot meet at any point. ಎನ್ನುವ ಮಾತನ್ನು ನಾನು ತಮ್ಮ ಗಮನಕ್ಕೆ, ಸರ್ಕಾರದ ಗಮನಕ್ಕೆ ತಮ್ಮ ಕೊಠಡಿಯಲ್ಲಿ ತಂದೆ. ಎರಡು ಸಮಾನಾಂತರ ರೇಖೆಗಳು ಎಷ್ಟೇ ಪ್ರಯತ್ನ ಮಾಡಿದರೂ ಕೂಡ ಒಂದು ಕಡೆ ಸೇರುವುದಕ್ಕೆ ಆಗುವುದಿಲ್ಲ. ಇದು ಎತ್ತು ಏರಿಗೆ ಎಳೆದು ಕೋಣ ನೀರಿಗೆ ಎಳೆದರೆ ಏನು ಪ್ರಯೋಜನವಾಗುತ್ತದೆ? ಈ ದೃಷ್ಟಿಯಿಂದ ತಾವು ಐದೂಕಾಲು ಗಂಟೆಯಾಯಿತು, ಐದು ಮುಕ್ಕಾಲು, ಆರು ಗಂಟೆಯಾಯಿತು ಏನು ಮಾಡಬೇಕೆಂದು ಹೇಳಿದಾಗ, ಈ ವಿಷಯವನ್ನೇ ಪರಿಸಮಾಪ್ತಿಗೊಳಿಸೋಣ, ಸದನದ ಕಾರ್ಯಕಲಾಪಗಳನ್ನು ಮುಗಿಸೋಣ. ಅದಕ್ಕೋಸ್ಕರವಾಗಿ ಅವರು ಪ್ರಸ್ತಾಪ ಮಾಡಿದರೆ ಮಾಡುತ್ತಾರೆ, ನಾನು ಏನೂ ಮಾಡುವುದಕ್ಕಾಗುವುದಿಲ್ಲ ಎನ್ನತಕ್ಕಂಥ

ಮಾತನ್ನು ತಾವು ಹೇಳಿದಿರಿ. ಅಲ್ಲಿಗೆ ಅದು ಮುಕ್ತಾಯವಾಯಿತು. ಆದರೆ ಇವತ್ತು ಬಂದಮೇಲೆ ಪುನಃ This was again surprising to all of us sitting here this side to Know the same subject. ಬಂದಮೇಲೆ again we have gone back to the same position where we were yesterday evening. ಅದೇ ವಿಚಾರವನ್ನು ಇಂದೂ ಮುಂದುವರೆಸತಕ್ಕಂಥದ್ದು ಸರಿಯಲ್ಲ. ಇದು ಸಾಧ್ಯವೂ ಅಲ್ಲವೆಂದು ನಾನು ಬಹಳ ಕಳಕಳಿಯಿಂದ ವಿನಂತಿ ಮಾಡಿಕೊಳ್ಳುತ್ತೇನೆ. ನಿನ್ನೆ ವಿಚಾರವನ್ನು ಪ್ರಸ್ತಾಪ ಮಾಡಿದಂಥ ಶ್ರೀ ಎಂ. ಎಸ್. ಕೃಷ್ಣನ್‌ರವರು ಬಹಳ ಪ್ರಾಮಾಣಿಕವಾಗಿ ಪ್ರಯತ್ನಪಟ್ಟರು. ಆದರೆ ನಿನ್ನೆ ದಿವಸ ನಿಮ್ಮ ಕೊಠಡಿಯಲ್ಲಿ ಅದು ಸಾಧ್ಯವಲ್ಲ ಎಂದು ಅವರಿಗೆ ವಿನಂತಿ ಮಾಡಿಕೊಂಡಿದ್ದೆವು. ಈಗಲೂ ಕೂಡ ನಾನು ಅವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಈ ವಿಚಾರವನ್ನು ಪ್ರಸ್ತಾಪಿಸಲಿಕ್ಕೆ ಹೋದರೆ ಅದು ಎಲ್ಲಿಗೆ ಎಳೆದುಕೊಂಡು ಹೋಗುತ್ತದೆ ಎಂದು ಹೇಳುವುದಕ್ಕಾಗುವುದಿಲ್ಲ ಎಂದು ಕೂಡ ನಾನು ನಿನ್ನೆ ದಿವಸ ತಮ್ಮ ಗಮನಕ್ಕೆ ತಂದಿದ್ದೆ. ಆದ್ದರಿಂದ ಈ ವಿಚಾರ ನಿನ್ನೆಯೇ ಮುಕ್ತಾಯವಾಗಿದೆಯೆಂಬ ಭಾವನೆಯಲ್ಲಿ ನಾವು ಇದ್ದೇವೆ. ನಿಯಮಾವಳಿ ೬೮ರ ಪ್ರಕಾರ ಚರ್ಚೆ ಮಾಡಲು ಎಂದು ವರದಿಗಳು ಈಗ ಬಂದಿವೆ. ಅವುಗಳನ್ನು ತೆಗೆದುಕೊಂಡು ನಾವು ಈಗ ಚರ್ಚೆಯಲ್ಲಿ ಭಾಗವಹಿಸಬೇಕಾಗಿದೆ, ಇಂತಹ ಸಂದರ್ಭದಲ್ಲಿ ಪ್ರಶ್ನೋತ್ತರ ವೇಳೆಯ ನಂತರ ಈ ವಿಚಾರವನ್ನು ತೆಗೆದುಕೊಳ್ಳೋಣ ಎಂದು ತಾವು ಪದೇಪದೇ ಹೇಳುತ್ತಿದ್ದೀರಿ. ಹೀಗೆ ತಾವು ಮಾಡಿದರೆ ತಮ್ಮ ಅಜೆಂಡಾಗೆ ವ್ಯತಿರಿಕ್ತವಾಗಿ ತಾವು ರೂಲಿಂಗ್ ಕೊಟ್ಟಹಾಗೆ ಆಗುತ್ತದೆ. ಜೊತೆಗೆ ನಮ್ಮ ನಿಯಮಾವಳಿಗಳಿಗೆ ವಿರುದ್ಧವಾಗಿ ಹೋದ ಹಾಗೆ ಆಗುತ್ತದೆ. ನಾಳೆ ಅಧಿವೇಶನದ ಕೊನೆಯ ದಿನ ನಿಯಮ ೬೮ರ ಪ್ರಕಾರ ಸೊಸೈಟಿಗಳ ಅವ್ಯವಹಾರದ ಬಗ್ಗೆ ರಿಪೋರ್ಟ್ ಬಂದಿದೆ. ನಾವು ವಿವರಗಳನ್ನು ಅಭ್ಯಾಸ ಮಾಡತಕ್ಕಂಥ ಸಂದರ್ಭ ಇದೆ. ಎರಡೂ ಕಡೆ ಕುಳಿತಿರತಕ್ಕಂಥ ಸದಸ್ಯರು ಇದನ್ನು ಓದಬೇಕು ಮತ್ತು ಅಭ್ಯಾಸ ಮಾಡಬೇಕು ಮತ್ತು ಚರ್ಚೆಯಲ್ಲಿ ಭಾಗವಹಿಸಬೇಕಾಗಿದೆ. ನಾವು ಇದರ ಗಹನತೆಯನು ಅನುಸರಿಸಿ ನಿನ್ನೆಯೇ ಇದಕ್ಕೆ ಮಂಗಳ ಹಾಡಿದ್ದೇವೆ. ಆದ್ದರಿಂದ ಮಾನ್ಯ ಅಧ್ಯಕ್ಷರೇ, ಕೊನೆಯದಾಗಿ ನನ್ನ ಮಾತು ಏನೆಂದರೆ ದಯವಿಟ್ಟು ಈ ಠಕ್ಕರ್ ಆಯೋಗದ ವರದಿಯ ಪ್ರಸ್ತಾಪ ಇವತ್ತು ಬೇಡವೆಂದು ಇಷ್ಟು ಹೊತ್ತಿಗೆ ತಾವು ಹೇಳಿಬಿಡಬೇಕಾಗಿತ್ತು ಅದು ಆಗದೇ ಇರುವುದರಿಂದ ಮತ್ತೆ ಈ ವಿಚಾರ ಜೀವಂತವಾಗಿದೆ ಎನ್ನುವ ಅಭಿಪ್ರಾಯ ಬಂದಿದೆ. ಈ ವಿಚಾರ ನಿನ್ನೆಯೇ ಮುಕ್ತಾಯವಾಗಿದೆ ಎಂದು ಇದಕ್ಕೆ ಒಂದು ಅಂತಿಮ ತೆರೆಯನ್ನು ಹಾಕಿ ಮುಕ್ತಾಯ ಮಾಡಿ. ೬೮ರ ಚರ್ಚೆ ಇನ್ನೂ ಆಗಿಲ್ಲ. ಅದಕ್ಕೆ ದಯವಿಟ್ಟು ಅವಕಾಶ ಕೊಡಬೇಕು. ಇಲ್ಲದಿದ್ದರೆ ಏನಾಗುತ್ತದೆ ಎಂದರೆ ಅವರು ಬೇಕು ಎನ್ನುವುದು ನಾವು ಬೇಡವೆಂದು ಎಷ್ಟು ಸಲ ವಾದ ಮಾಡುವುದು? ಇದಕ್ಕೊಂದು ಅಂತಿಮ ತೆರೆಯನ್ನು ತಾವು ಎಳೆಯಬೇಕೆಂಬುದು ನನ್ನ ಅಭಿಪ್ರಾಯ.

(ಗೊಂದಲ)

ಶ್ರೀ ಎಂ. ಎಸ್. ಕೃಷ್ಣನ್.– ನಾನು ಒಂದು ನಿಮಿಷ ಮಾತನಾಡುತ್ತೇನೆ. ನನಗೆ ಸ್ವಲ್ಪ ಅವಕಾಶ ಮಾಡಿಕೊಡಿ.....

ಅಧ್ಯಕ್ಷರು.—ನಿಮಗೂ ಅವಕಾಶ ಕೊಡುತ್ತೇನೆ, ತಾವು ಸ್ವಲ್ಪ ಕೂಡಿ...

ಶ್ರೀ ಜೆ.ಹೆಚ್. ಪಟೇಲ್.—ನಿನ್ನೆ ತಮ್ಮ ಚೇಂಬರ್‌ನಲ್ಲಿ ನಡೆದುದನ್ನು ಮಾನ್ಯ ಸದಸ್ಯರು ಹೇಳಿದ್ದಾರೆ. ಅಲ್ಲಿ ಕೊನೆಗೆ ಏನಾಯಿತು, ಅವರು ಏನು ಮಾತನಾಡಿದ್ದಾರೆ ಎಂಬುದು ತಮಗೂ ಗೊತ್ತಿದೆ. ಮಾನ್ಯ ಬಂಗಾರಪ್ಪನವರು ಹೇಳಿದ್ದು ಸರಿ. ಆದರೆ ಒಬ್ಬರಿಗೊಬ್ಬರು ರಾಜಿ ಮಾಡಿಕೊಳ್ಳುವ ಸ್ಥಿತಿಯಲ್ಲಿ ಇಲ್ಲ. We are running on parallel lines, we cannot meet each other ಎಂದು ಹೇಳಿದ ಮೇಲೆ ಮಾನ್ಯ ವೆಂಕಟರಾಮಯ್ಯನವರು ಏನು ಹೇಳಿದರು ಕೃಷ್ಣನ್‌ನವರು ಏನು ಹೇಳಿದರು? ನಮ್ಮ ವಾದವನ್ನು ನಾವು ಇಡಲೇಬೇಕು, ನೀವು ಇವತ್ತೇ ಅಡ್ಜರ್ನ್ ಮಾಡಿ, ಏನಾದರೂ ಮಾಡಿ. ಹೌಸ್‌ನಲ್ಲಿ ತಾವು ಏನಾದರೂ ಹೇಳಿ, ನಾವು ಹೇಳಿಯೇ ಹೇಳುತ್ತೇವೆ ಎಂದರು. ಈ ಅಡ್ಜರ್ನ್‌ಮೆಂಟ್ ಮೋಷನ್ ಮೂಲಕ ಠಕ್ಕರ್ ಆಯೋಗದ ವರದಿಯಲ್ಲಿ ಬಂದಿರತಕ್ಕ ವಿಷಯಗಳನ್ನು ಏನಾದರೂ exaggergate ಮಾಡಿಯೋ ಟ್ವಿಸ್ಟ್ ಮಾಡಿಯೋ ಮಾತನಾಡಿದರೆ, ಅನಾವಶ್ಯಕ ಭಾವನೆಗಳು, ಸಂದರ್ಭಗಳು ಒದಗಿ ಬರಬಹುದು ಎಂಬ ಮಾತನ್ನು ಇವರು ಹೇಳುತ್ತಿದ್ದಾರೆ. ಠಕ್ಕರ್ ಆಯೋಗದ ವರದಿಯಲ್ಲಿ ಏನೇನು ಬರೆದಿದ್ದಾರೆ ಎಂಬ ವರದಿ ನಮ್ಮಲ್ಲಿ ಇಲ್ಲ. ಈ ಠಕ್ಕರ್ ಆಯೋಗದ ವರದಿಯಿಂದ ರಾಷ್ಟ್ರದಲ್ಲಿ ಉದ್ಭವಿಸಿರತಕ್ಕ ವಿಷಯದ ಬಗ್ಗೆ ಇಲ್ಲಿ ಚರ್ಚೆ ಮಾಡಬಹುದು. ಮಾನ್ಯ ಶ್ರೀನಿವಾಸ್‌ರವರು ಏನು ಪಾಯಿಂಟ್ ಆಫ್ ಆರ್ಡರ್ ಎತ್ತಿದ್ದಾರೆ. ಅದರ ಬಗ್ಗೆ ಏನು ನಿರ್ಣಯ ಮಾಡುತ್ತೀರಿ? He said this House has

no jurisdiction. This House had jurisdiction much beyond this Thakkar Commission and the situation arising out of that in this country. We are not discussing the merits of the Report of Thakkar Commission. We do not know about it. Let the Parliament do it. ರಾಷ್ಟ್ರದಲ್ಲಿ ಉದ್ಭವಿಸಿರತಕ್ಕ ಸ್ಥಿತಿ ಬಗ್ಗೆ ಈ ಸದನ ಯೋಚನೆ ಮಾಡಬಾರದೇ? ಇದು ಒಂದು ಪ್ರಾಮುಖ್ಯವಾದುದು. ಜೊತೆಗೆ ತಾವು ಎಷ್ಟು ಉದಾರಿಗಳು, ಸಾಮಾನ್ಯವಾಗಿ ಒಂದು ದಿನಕ್ಕೆ ಅಡ್ಜರ್ನ್‌ಮೆಂಟ್ ಮೋಷನ್, is a rare weapon to be used by the opposition. I would say nobody would put blame on anybody, or any party. Only the security of the nation and the situation arising out of this report. That is all the subject matter of adjournment motion. ಇಲ್ಲಿ ಪೋಲೀಸ್ ಕಸ್ಟಡಿಯಲ್ಲಿ ಒಬ್ಬ ಸತ್ತರೆ ಅಡ್ಜರ್ನ್‌ಮೆಂಟ್ ಮೋಷನ್ ಬರುತ್ತದೆ. ಆದರೆ, ಒಬ್ಬ ಪ್ರಧಾನಮಂತ್ರಿ ಸತ್ತರೆ, ಅಡ್ಜರ್ನ್‌ಮೆಂಟ್ ಮೋಷನ್‌ಗೆ ಬರುವುದು ಬೇಡವೇ? When the Speaker allows preliminary submission, the whole House is bound by your ruling, ನಿನ್ನೆ ಕೃಷ್ಣನ್‌ರವರು ಕೇಳಿದ್ದಾರೆ. ನೀವು ಇದಕ್ಕೆ ಏಕೆ ಚಿಂತೆ ಮಾಡುತ್ತಿದ್ದೀರಿ? ಆಕ್ಷೇಪಣೆ ಏಕೆ ಮಾಡುತ್ತೀರಿ? ಇದು ಸಬ್‌ಮಿಷನ್ ಆಗಲೀ, ಸ್ಪೀಕರ್ ಅವರು ಏನು ತೀರ್ಮಾನ ಕೊಡುತ್ತಾರೋ ಕೊಡಲಿ, ಇವತ್ತು ನಿಜವಾಗಿಯೂ ಯಾವ ವಿಷಯದ ಬಗ್ಗೆ, ಮಹತ್ತರವಾಗಿ ಈ ದೇಶದಲ್ಲಿ ಚರ್ಚೆ ನಡೆಯುತ್ತಾ ಇದೆ, ಅದನ್ನು ಈ ಸದನದಲ್ಲಿ ಹೇಳುವುದಕ್ಕೆ ಅವಕಾಶ ಇಲ್ಲ ಎಂದು ಹೇಳುವುದು ಸರಿಯಿಲ್ಲ. ಮಾನ್ಯ ವಿರೋಧಪಕ್ಷದ ನಾಯಕರಿಗೆ, ಉಪ ನಾಯಕರಿಗೆ ಇಷ್ಟೇ ವಿನಂತಿ ಮಾಡಿಕೊಳ್ಳುತ್ತೇನೆ. ಪ್ರಿಲಿಮಿನರಿ ಸಬ್‌ಮಿಷನ್ ಮಾಡಿ ಎಂದು ಸ್ಪೀಕರ್ ಹೇಳಿದ ಮೇಲೆ, if you do like this, this is neither heard of, nor we will be able to tolerate. ಸಬ್‌ಮಿಷನ್ ಮಾಡಿ ಎಂದು ತಾವು ಹೇಳಿದ ಮೇಲೆ ನಾವು ಬಿಡುವುದಿಲ್ಲ.

(ಗೊಂದಲ)

ಶ್ರೀ ಜೆ. ಹೆಚ್. ಪಟೇಲ್.—ಇದರ ಬಗ್ಗೆ ಹೆಚ್ಚು ಆವೇಶಕ್ಕೆ ಹೋಗುವುದು ಬೇಡ ಅವರು ಏನು ಅಡ್ಜರ್ನ್‌ಮೆಂಟ್ ಕಳುಹಿಸಿದ್ದಾರೆ, ಅದರ ಮೇಲೆ ಪ್ರಿಲಿಮಿನರಿ ಸಬ್‌ಮಿಷನ್‌ಗೆ ಅವಕಾಶ ಕೊಡಿ. ಅವರಿಗೆ ತಾವು ಅವಕಾಶ ಕೊಟ್ಟ ಮೇಲೆ, ನಮಗೂ ಅವಕಾಶ ಕೊಡಿ .

ಶ್ರೀ ಎಂ. ಎಸ್. ಕೃಷ್ಣನ್.—ಈಗ ಠಕ್ಕರ್ ವರದಿ ಬಗ್ಗೆ ಪ್ರಿಲಿಮಿನರಿ ಸಬ್‌ಮಿಷನ್ ಮಾಡುತ್ತಾ ಇಲ್ಲ. ಪ್ರಶ್ನೆ ಏನೆಂದರೆ, ಪ್ರಿಲಿಮಿನರಿ ಸಬ್‌ಮಿಷನ್ ಮಾಡಕೂಡದು ಎಂದು ಶ್ರೀನಿವಾಸ್‌ರವರು, ಬಂಗಾರಪ್ಪನವರು ಮತ್ತಿತರರು ಎತ್ತಿದ್ದಾರೆ. ಪ್ರಿಲಿಮಿನರಿ ಸಬ್‌ಮಿಷನ್ ಮಾಡಕೂಡದು ಎಂದು ಹೇಳುವುದಕ್ಕೆ ಈ ಮನೆಯಲ್ಲಿ ಸಮಂಜಸವಾದ ಕಾರಣಗಳು ಇಲ್ಲ ಈ ಮನೆಯಲ್ಲಿ ನನ್ನ ಅಭಿಪ್ರಾಯ ನಾನು ಹೇಳಬೇಕಾಗುತ್ತದೆ. ಆಮೇಲೆ ತಾವು ಮಾತನಾಡಿ. ನಾನು ಏತಕ್ಕೆ ಹೇಳುತ್ತೇನೆ ಎಂದರೆ, ಇವತ್ತಿನ ದಿವಸ ಪ್ರಿಲಿಮಿನರಿ ಸಬ್‌ಮಿಷನ್ ಯಾವಾಗ ಮಾಡಬೇಕು ಯಾವಾಗ ಮಾಡಕೂಡದು ಎಂಬುದನ್ನು ತೀರ್ಮಾನ ಮಾಡುವವರು ನೀವು, ಮಾಡ ಬೇಕೇ ಬೇಡವೇ ಎಂಬುದನ್ನು ತೀರ್ಮಾನ ಮಾಡುವವರು ನೀವು, ನಿನ್ನೆ ದಿವಸ ತೀರ್ಮಾನ ಮಾಡಿ ಪ್ರಿಲಿಮಿನರಿ ಸಬ್‌ಮಿಷನ್ ಮಾಡಬಹುದು ಎಂದು ಹೇಳಿದಿರಿ. ನಿನ್ನೆ ದಿವಸ ನಿಂತುಕೊಂಡು ಪ್ರಿಲಿಮಿನರಿ ಸಬ್‌ಮಿಷನ್ ಮಾಡುವುದಕ್ಕೆ ನಾನು ಪ್ರಯತ್ನಪಟ್ಟೆ. ನಮ್ಮ ಸ್ನೇಹಿತರೂ ಪ್ರಯತ್ನ ಪಟ್ಟರು. ಆದರೆ ಅವಕಾಶ ಸಿಗಲಿಲ್ಲ. ಪ್ರಿಲಿಮಿನರಿ ಸಬ್‌ಮಿಷನ್ ಮಾಡುವುದಕ್ಕೆ ಅಧಿಕಾರ ಇಲ್ಲ ಎಂದು ಹೇಳುತ್ತಿದ್ದಾರೆ. ಆದರೆ ಯಾವ ಕಾರಣದಿಂದ ಇಲ್ಲ? ಪ್ರಿಲಿಮಿನರಿ ಸಬ್‌ಮಿಷನ್ ಮಾಡು ವುದಕ್ಕೆ ಏನು ಸಬ್ಜೆಕ್ಟ್ ಇದೆ ಅದು ಈ ತರಹ ಸಬ್ಜೆಕ್ಟ್ ಆಗಿರಕೂಡದು, ಆ ಸಬ್ಜೆಕ್ಟ್ ನಮ್ಮ ವ್ಯಾಪ್ತಿಯಿಂದ ಹೊರಗಿರಬೇಕು, ಹೊರತಾಗಿರಬೇಕು ಇಂತಹ ಸಬ್ಜೆಕ್ಟ್ ಮೇಲೆ ಪ್ರಿಲಿಮಿನರಿ ಸಬ್‌ಮಿಷನ್ ಮಾಡುವುದಕ್ಕೆ ಆಗುವುದಿಲ್ಲ. ಈ ವಿಷಯ ನಮ್ಮ ವ್ಯಾಪ್ತಿಯೊಳಗೆ ಬರುತ್ತದೆ. ನಾನು ಠಕ್ಕರ್ ಕಮಿಷನ್ ರಿಪೋರ್ಟ್ ಬಗ್ಗೆ ಹೇಳುತ್ತಿಲ್ಲ. ಆದರಿಂದ ಉದ್ಭವಿಸಿರುವ ಅನೇಕ ವಿಷಯಗಳ ಬಗ್ಗೆ ಹೇಳುತ್ತೇನೆ. ಕೆಲವು ವಿಷಯಗಳನ್ನು ನಮ್ಮ ಪಟೇಲರು ಹೇಳಿದರು. ಇದು ದೇಶಕ್ಕೆಲ್ಲಾ ಸಂಬಂಧಪಟ್ಟ ವಿಷಯ. ನನಗೆ ಸಂಬಂಧಪಟ್ಟ ವಿಷಯ ಅಲ್ಲ. ನಿಮ್ಮ ಪಾರ್ಟಿಗೆ ಸಂಬಂಧಪಟ್ಟ ವಿಷಯ ಅಲ್ಲ. ನಮ್ಮ ಪಾರ್ಟಿಗೆ ಸಂಬಂಧಪಟ್ಟ ವಿಷಯ ಅಲ್ಲ. ಇದು ಪಾರ್ಟಿಗೆ

ಹೊರತಾಗಿರುವಂತಹ ವಿಷಯ. ನಮ್ಮ ದೇಶದ ಸೆಕ್ಯುರಿಟಿ ವಿಷಯವಾಗಲೀ, ನಮ್ಮ ದೇಶದ ಸಮಗ್ರತೆಯ ವಿಷಯವಾಗಲೀ, ಸಾಮ್ರಾಜ್ಯಶಾಹಿ ಶಕ್ತಿಗಳ ಪ್ರಶ್ನೆಯಾಗಲೀ ಇದರಲ್ಲಿ ಬರುತ್ತದೆಯೇ? ಪಕ್ಷದ ವಿಚಾರ ಚರ್ಚೆ ಮಾಡುವುದಕ್ಕೆ ನಾನು ತಯಾರಾಗಿಲ್ಲ. ಇದನ್ನು ಮಾತನಾಡುವುದಕ್ಕೆ ಕಾನೂನು ಇದೆಯೋ ಇಲ್ಲವೇ ಎಂದು ಒರೆಹಚ್ಚಿ ನೋಡಬೇಕಾಗುತ್ತದೆ. ಹಿಂದೆ ಯಾವುದಾದರೂ ಈ ರೀತಿ ಅವಕಾಶ ಕೊಟ್ಟಿದ್ದಾರೆಯೇ? ಯಾವುದಾದರೂ ಪ್ರಿಸಿಡೆಂಟ್ಸ್ ಇದೆಯೇ? ಹಿಂದೆ ಪ್ರಿಸಿಡೆನ್ಸ್ ಇದ್ದರೆ ಪ್ರಿಲಿಮಿನರಿ ಸಬ್‌ಮಿಷನ್ ಮಾಡುವುದಕ್ಕೆ ಅವಕಾಶ ಮಾಡಿಕೊಡಿ, ಹಿಂದೆ ಪ್ರಿಸಿಡೆನ್ಸ್ ಇಲ್ಲದೇ ಹೋದರೆ ಪ್ರಿಲಿಮಿನರಿ ಸಬ್‌ಮಿಷನ್‌ಗೆ ಅವಕಾಶ ಮಾಡಿಕೊಡಬೇಡಿ. ನನಗನ್ನಿಸುತ್ತದೆ, ಹಿಂದೆ ಅವಕಾಶ ಮಾಡಿಕೊಟ್ಟಿದ್ದಾರೆ. ಪ್ರಿಸಿಡೆಂಟ್ಸ್ ಇದೆ. ಮಾನ್ಯ ಬಂಗಾರಪ್ಪನವರು ಹೇಳುವುದು ಹಿಂದೆ ಈ ರೀತಿ ಪ್ರಿಸಿಡೆಂಟ್ಸ್ ಇಲ್ಲ ಎಂದು. ಮಾನ್ಯ ಬಂಗಾರಪ್ಪನವರು ಹಿಂದೆ ೬೨ನೇ ಇಸವಿಯಲ್ಲಿ ಚೈನೀಸ್ ಅಗ್ರೇಷನ್ ಆದಾಗ. ೧೯೬೫ರಲ್ಲಿ ಪಾಕ್ ಅಗ್ರೆಷನ್ ಆದಾಗ ಈ ತರಹ ಪ್ರಶ್ನೆ ಬರಲಿಲ್ಲ ಅಲ್ಲಿ ರೆಸಲ್ಯೂಷನ್ ಬಂತು ಎಂದು ಹೇಳಿದರು. ನಾನು ಹೇಳುವುದನ್ನು ಕೇಳಿ, ನಾನು ಬೇರೆ ಹೇಳುತ್ತಿದ್ದೇನೆ. ೧೯೬೨ರಲ್ಲಿ ಚೈನೀಸ್ ಅಗ್ರೆಷನ್ ಆದಾಗ ಮಾನ್ಯ ನಿಜಲಿಂಗಪ್ಪನವರು ರೆಸಲ್ಯೂಷನ್ ತೆಗೆದುಕೊಂಡು ಬಂದರು, ೧೯೬೫ರಲ್ಲಿ ಪಾಕ್ ಅಗ್ರೆಷನ್ ಆದಾಗ ರೆಸಲ್ಯೂಷನ್ ತೆಗೆದುಕೊಂಡು ಬಂದರು, ಚರ್ಚೆ ಮಾಡಿದೆವು ಎಂದು ಹೇಳುತ್ತಾರೆ. ೧೯೬೨ನೇ ಇಸವಿಯಲ್ಲಿ ರೆಸಲ್ಯೂಷನ್ ಬರಲಿಲ್ಲ. ನಾನು ನಮ್ಮ ಆಗಿನ ಡಿಬೇಟ್ ಓದುತ್ತೇನೆ. 'Adjournment motion regarding Chinese aggression on the border of India.' ಆಗ ಇನ್ನೂ ಅಕ್ಚ್ಯುಯಲ್ ಆಗಿ ವಾರ್ ಆಗಿರಲಿಲ್ಲ. ೧೯೬೨ನೇ ಇಸವಿಯದು ನಾನು ಹೇಳುತ್ತಾ ಇರುವುದು. ಹಾನರಬಲ್ ಮೆಂಬರ್ ಬಿ.ಕೆ. ಪುಟ್ಟರಾಮಯ್ಯನವರು ಒಂದು ಅಡ್‌ಜರ್ನ್‌ಮೆಂಟ್ ಮೋಷನ್ ತಂದರು. ಆಗ ಮಾನ್ಯ ಬಾಳಿಗಾರವರು ಸ್ಪೀಕರ್ ಆಗಿದ್ದರು, ಅವರು ಬಹಳ ಎಮಿನೇಟ್ ಸ್ಪೀಕರ್ ಅವರ ಬಗ್ಗೆ ನಾನು ಹೇಳಬೇಕಾಗಿಲ್ಲ.

ಶ್ರೀ ಎಸ್. ಬಂಗಾರಪ್ಪ.—ಹಾಗಾದರೆ ಇವರು ಎಮಿನೆಂಟ್ ಅಲ್ಲವೇ?

ಶ್ರೀ ಎಂ.ಎಸ್. ಕೃಷ್ಣನ್.—ಇವರೂ ಸಹ equally ಎಮಿನೆಂಟ್. When I say Sri Baliga was eminent. It does not mean that Sri Banakar is not an eminent Speaker. He is as eminent as Sri Baliga. ಬಿ.ಕೆ. ಪುಟ್ಟರಾಮಯ್ಯನವರು ಕೊಟ್ಟಂಥ ಅಡ್‌ಜರ್ನ್‌ಮೆಂಟ್ ಮೋಷನ್ ಏನು ಎಂದರೆ,

> "This Assembly do stand adjourned to discuss a matter of urgent public importance namely the situation arising In the conntry out of Chinese aggression on the border of India."

ಚೈನೀಸ್ ಅಗ್ರೇಷನ್ ಏನಿತ್ತು, ಆಗ ಅವರು ೩೬ ಸಹಸ್ರ ಎಕರೆ ಪ್ರದೇಶವನ್ನು ವಶಪಡಿಸಿಕೊಂಡಿದ್ದರು. ಆಗ ಇನ್ನೂ ವಾರ್ ನಡೆದಿರಲಿಲ್ಲ. ಯುದ್ಧ ನಡೆಯದಿರಬೇಕಾದರೆ, ಮುಂದೆ ಆಕ್ರಮಣ ಮಾಡುತ್ತಾರೆ ಎಂದು ಹೇಳಿ, ಇದು ದೇಶಕ್ಕೆಲ್ಲಾ ಸಂಬಂಧಪಟ್ಟ ವಿಷಯ ಇದನ್ನು ಚರ್ಚೆ ಮಾಡಬೇಕೆಂದು ಕೇಳಿಕೊಂಡರು. ಇದರ ಬಗ್ಗೆ ಮಾತನಾಡಿದ್ದಾರೆ. ವೆಂಕಟಯ್ಯನವರು ಮಾತನಾಡಿದ್ದಾರೆ, ಪುಟ್ಟರಾಮಯ್ಯನವರು ಮಾತನಾಡಿದ್ದಾರೆ, ಮುಕ್ಕಣ್ಣಪ್ಪನವರು ಮಾತನಾಡಿದ್ದಾರೆ, ಟಿ. ಸುಬ್ರಹ್ಮಣ್ಯಂ ಹೇಳಿದ್ದಾರೆ, ಟಿ.ಡಿ. ಮಾರಪ್ಪನವರು ಹೇಳಿದ್ದಾರೆ, ಹಲವಾರು ಜನ ಇದರ ಬಗ್ಗೆ ಮಾತನಾಡಿದ್ದಾರೆ. ವೈಕುಂಠ ಬಾಳಿಗಾರವರು ಏನು ಹೇಳಿದ್ದಾರೆ ಎಂದರೆ ಅವರೂ ಮಧ್ಯೆ ಎರಡು ಮೂರು ಸಲ ಇದರಲ್ಲಿ ಮಾತನಾಡಿದ್ದಾರೆ. ನೀವು ನನಗೆ ಕನ್‌ವಿನ್ಸ್ ಮಾಡಬೇಕು, ಕನ್‌ವಿನ್ಸ್ ಮಾಡಿದರೆ ಅವಕಾಶ ಮಾಡಿಕೊಡುತ್ತೇನೆ ಎಂದು ಹೇಳಿದ್ದಾರೆ. ಪ್ರಿಲಿಮಿನರಿ ಸಬ್‌ಮಿಷನ್ ಮಾಡಿ ಕನ್‌ವಿನ್ಸ್ ಮಾಡುವುದಕ್ಕೆ ಪ್ರಯತ್ನಪಟ್ಟಿದ್ದಾರೆ. ಕನ್‌ವಿನ್ಸ್ ಮಾಡುವುದಕ್ಕೆ ಪ್ರಯತ್ನ ಪಟ್ಟಮೇಲೆ ಬಾಳಿಗಾರವರು ಹೇಳಿದ್ದಾರೆ, ನಾನು ಕನ್‌ವಿನ್ಸ್ ಆಗಿಲ್ಲ, ನೀವು ಪ್ರಿಲಿಮಿನರಿ ಸಬ್‌ಮಿಷನ್ ಮಾಡಿದರೂ ನಾನು ಕನ್‌ವಿನ್ಸ್ ಮಾಡಿ ಎಂದು ಹೇಳಿದ್ದಾರೆ ಪ್ರಿಲಿಮಿನರಿ ಸಬ್ ಮಿಷನ್ ಮಾಡಿ ಕನ್ವಿನ್ಸ್ ಮಾಡಿ ಎಂದು ಹೇಳಿದ ಮೇಲೆ, ಕನ್‌ವಿನ್ಸ್ ಆಗಿಲ್ಲ. ಅಡ್‌ಜರ್ನ್‌ಮೆಂಟ್ ಮೋಷನ್‌ಗೆ ಅವಕಾಶ ಕೊಡುವುದಿಲ್ಲ ಎಂದು ಹೇಳಿದ್ದಾರೆ. ಅದೇ ಆಧಾರದಮೇಲೆ ನಾನು ತಮ್ಮನ್ನು ಕೇಳಿಕೊಳ್ಳುವುದು ಏನೆಂದರೆ, ಪ್ರಿಲಿಮಿನರಿ ಸಬ್‌ಮಿಷನ್ ಮಾಡುವುದಕ್ಕೆ ಈ ಪ್ರಿಸಿಡೆಂಟ್ಸ್ ಇವೆ, ಈ ಆಧಾರದ ಮೇಲೆ ಅವಕಾಶ

ಇದೆ, ಈ ಜ್ಯೂರಿಸ್‌ಡಿಕ್ಷನ್ ಒಳಗೆ ಕೊಡಿ ಎಂದು ನಾನು ತಮ್ಮನ್ನು ಕೇಳಿಕೊಳ್ಳುತ್ತೇನೆ. ಇಷ್ಟು ಮಾತ್ರ ಅವಕಾಶ ಮಾಡಿಕೊಡಿ. ಇನ್ನೊಂದು ಪ್ರಶ್ನೆ ಏನೆಂದರೆ ಪ್ರಿಲಿಮಿನರಿ ಸಬ್‌ಮಿಟ್ ಮಾಡುವುದಕ್ಕೆ ಅವಕಾಶ ಕೊಡುವುದು. ಇವೆರಡಕ್ಕೂ ವ್ಯತ್ಯಾಸ ಇದೆ. ಠಕ್ಕರ್ ಆಯೋಗದ ವರದಿ ಬಂದಿದೆ. ಈ ದೇಶದಲ್ಲಿ ಅಲ್ಲೋಲಕಲ್ಲೋಲವಾಗುತ್ತದೆ. ರಾಜ್ಯದಲ್ಲಿ ಅಲ್ಲೋಲಕಲ್ಲೋಲವಾಗುತ್ತದೆ ಆ ವಿಷಯ ಇಲ್ಲಿ ಪ್ರಸ್ತಾಪ ಮಾಡಿದರೆ ಎನ್ನುವ ಅನುಮಾನ ನಿಮ್ಮ ಮನಸ್ಸಿನಲ್ಲಿ ಎಂದರೆ ಕಾಂಗ್ರೆಸ್ ಸದಸ್ಯರ ಮನಸ್ಸಿನಲ್ಲಿ ಇದೆ. ಆ ರೀತಿ ಏನೂ ಇಲ್ಲ. ಇವತ್ತಿನ ದಿವಸ ಪಾಕಿಸ್ತಾನದ ಪ್ರಶ್ನೆ ಆಗಲಿ, ಚೈನಾ ದೇಶದ ಪ್ರಶ್ನೆ ಆಗಲಿ ಮಾತನಾಡುತ್ತಿಲ್ಲ. ನಾನು ಮಾತನಾಡಬೇಕೆಂದಿರುವುದು ಈ ರಾಷ್ಟ್ರದಲ್ಲಿ ರಾಷ್ಟ್ರಧ್ವಂಸ ಮಾಡುವಂತಹ ಶಕ್ತಿಗಳು ಏನಿದ್ದಾರೆ ಅವರ ಬಗ್ಗೆ.

ಶ್ರೀ ಎಸ್. ಬಂಗಾರಪ್ಪ.—ಇಲ್ಲ ಆಗುವುದಿಲ್ಲ, ಅದು ಸಾಧ್ಯವೇ ಇಲ್ಲ... ನೀವು ವಿಷಯಕ್ಕೆ ಹೋಗುತ್ತಿದ್ದೀರಿ...

(ಗೊಂದಲ)

ಶ್ರೀ ಎಂ. ಎಸ್. ಕೃಷ್ಣನ್.—ಏನು ಸ್ವಾಮಿ ಇದು...

(ಗೊಂದಲ)

ಶ್ರೀ ಎಸ್. ಬಂಗಾರಪ್ಪ.—ಇಲ್ಲ ಆಗುವುದಿಲ್ಲ...

SRI M. S. KRISHNAN.—I know, I am vegy carefully avoiding it.

(ಗೊಂದಲ)

SRI S. BANGARAPPA.—ಇಲ್ಲಿ, the stability of the country is involved...

ಶ್ರೀ ಎಂ.ಎಸ್. ಕೃಷ್ಣನ್.—ನೀವು ಸಹ ಠಕ್ಕರ್ ಎಂದು ಹೇಳುತ್ತೀರಿ ನಾನು ಅಷ್ಟು ಹೇಳುವುದು ತಪ್ಪೇ...

(ಗೊಂದಲ)

ಶ್ರೀ ಎಸ್. ಬಂಗಾರಪ್ಪ.—ಅದು ಹೇಗೆ ಬರುತ್ತದೆ. ಪತ್ರಿಕೆಗಳಲ್ಲಿ ಬಂದಿರತಕ್ಕ ವರದಿ...

(ಗೊಂದಲ)

SRI M.S. KRISHNAN.—I am an my legs. When I am on my legs, at least he should have the decency to ask me to sit down. ತಾವು ಸಹ ಅನೇಕ ವರ್ಷಗಳಿಂದ ಈ ಸದನದಲ್ಲಿ ಇದ್ದೀರಿ. ನನಗೆ ೫ ನಿಮಿಷ ಅವಕಾಶ ಕೊಡಿ ಸಾಕು.

ಶ್ರೀ ಎಸ್. ಬಂಗಾರಪ್ಪ.—ತಾವು ಲಕ್ಷ್ಮಣ ರೇಖೆ ಬಿಟ್ಟು ಹೋಗುತ್ತಿದ್ದೀರಿ.

ಶ್ರೀ ಎಂ. ಎಸ್. ಕೃಷ್ಣನ್.—ನಮಗೆ ಅದು ರಾಮನ ಗೆರೆ.

(ಗೊಂದಲ)

ಶ್ರೀ ಎಸ್. ಬಂಗಾರಪ್ಪ.—ತಾವು ಹೇಗೆ ಮಾತನಾಡುವುದಕ್ಕೆ ಬರುತ್ತದೆ ?

(ಗೊಂದಲ)

ಶ್ರೀ ಎಂ. ಎಸ್. ಕೃಷ್ಣನ್.—ನಾನು ಠಕ್ಕರೆ ಆಯೋಗದ ಬಗ್ಗೆ ಮಾತನಾಡುವುದಿಲ್ಲ. ನಾವು ನಿನ್ನೆ ಕೊಟ್ಟಿರತಕ್ಕಂಥ ನಿಲುವಳಿ ಸೂಚನೆಗೂ ಇವತ್ತು ಕೊಟ್ಟಿರತಕ್ಕಂಥ ನಿಲುವಳಿ ಸೂಚನೆಗೂ ವ್ಯತ್ಯಾಸ ಇದೆ. ನಮ್ಮ ನಿಲುವಳಿ ಸೂಚನೆಯಲ್ಲಿ ಏನಿದೆ ಅಂದರೆ ಅದು ಈ ರೀತಿ ಇದೆ.

"To discuss about the situation arising after placing the Thakkar Commission's report in both Houses of Parliament as the report has come out with startling disclosures which are fundamental in nature and affect the security of the nation and related matters of grave importance."

That is the point. The cat is out of the bag now.

ಶ್ರೀ ಎಸ್. ಬಂಗಾರಪ್ಪ.—ನಿನ್ನೆ ಕೊಟ್ಟಿದ್ದ ನಿಲುವಳಿ ಸೂಚನೆ ಪರವಾಗಿರಲಿಲ್ಲ. ಇವತ್ತು ಕೊಟ್ಟಿರುವುದರಲ್ಲಿ ಕ್ಲಿಯರ್ ಆಗಿದೆ. ಏನೇನು ಬೇಕೋ ಎಲ್ಲವನ್ನು ಪೂರ್ಣವಾಗಿ ಬರೆದಿದ್ದೀರಿ.

(ಗೊಂದಲ)

ಶ್ರೀ ಎಂ. ಎಸ್. ಕೃಷ್ಣನ್. ನಾನು ಆ ವಿಷಯಕ್ಕೆ ಹೋಗುವುದಿಲ್ಲ.

(ಗೊಂದಲ)

೧೨.೦೦ ಅಪರಾಹ್ನ

ಶ್ರೀ ಎಂ.ಎಸ್. ಕೃಷ್ಣನ್.—ನಾನು ನಿಮ್ಮ ಹಾಗೆ ಓಟು ತೆಗೆದುಕೊಂಡು ಇಲ್ಲಿಗೆ ಬಂದಿದ್ದೇನೆ.

ಶ್ರೀ ಎಸ್. ಬಂಗಾರಪ್ಪ.—ನಾವಿಬ್ಬರೇ ಅಲ್ಲ, ಎಲ್ಲರೂ ಓಟು ತೆಗೆದುಕೊಂಡು ಬಂದಿದ್ದಾರೆ.

(ಗೊಂದಲ)

ಶ್ರೀ ಆರ್. ವೆಂಕಟರಾಮಯ್ಯ.—ಮಾನ್ಯ ಅಧ್ಯಕ್ಷರೇ,

ಶ್ರೀ ಎಂ. ಎಸ್. ಕೃಷ್ಣನ್.—ಚರ್ಚೆ ಮಾಡುವುದಕ್ಕೆ ಅಡ್ಜರ್ನ್‌ಮೆಂಟ್ ಮೋಷನ್ ಕೊಡಬೇಕೆ ಬೇಡವೇ ಎಂದು ತಿಳಿದುಕೊಳ್ಳಲು ಪ್ರಿಲಿಮಿನರಿ ಸಬ್‌ಮಿಷನ್‌ಗೆ ಅವಕಾಶ ಇದೆ. ಇದು ಬಹಳ ಜರೂರಾಗಿದೆ ಹಾಗೂ ಅನೇಕ ವಿಷಯಗಳು ಇದರಲ್ಲಿ ಅಡಕವಾಗಿದೆ.

(ಗೊಂದಲ)

ಶ್ರೀ ಆರ್. ವೆಂಕಟರಾಮಯ್ಯ.—ಸನ್ಮಾನ್ಯ ಅಧ್ಯಕ್ಷರೇ, ಪ್ರಿಲಿಮಿನರಿ ಸಬ್‌ಮಿಷನ್ ಮಾಡು ವುದಕ್ಕೆ ಅವಕಾಶ ಮಾಡಿಕೊಡಬೇಕು.

(ಗೊಂದಲ)

ಅಧ್ಯಕ್ಷರು.—ಮಾನ್ಯ ಮೊಯಿಲಿಯವರು. ಮಾನ್ಯ ವೆಂಕಟರಾಮಯ್ಯನವರು. ಮಾನ್ಯ ಎಂ.ಎಸ್. ನಾರಾಯಣರಾವ್ ಅವರು ಇದರ ಬಗ್ಗೆ ಹೇಳಲಿ.

(ಗೊಂದಲ)

ಶ್ರೀ ಆರ್. ವೆಂಕಟರಾಮಯ್ಯ.—ಮಾನ್ಯ ಅಧ್ಯಕ್ಷರೇ,

(ಗೊಂದಲ)

ಅಧ್ಯಕ್ಷರು.—ಮಾನ್ಯ ಕೆ. ಹೆಚ್. ಶ್ರೀನಿವಾಸ್‌ರವರು ಏನು ಹೇಳುತ್ತಾರೋ ಕೇಳೋಣ.

ಶ್ರೀ ಕೆ.ಹೆಚ್ ಶ್ರೀನಿವಾಸ್.—ಮಾನ್ಯ ಅಧ್ಯಕ್ಷರೇ, ನಾನು ಎತ್ತಿರತಕ್ಕಂಥ ಪಾಯಿಂಟ್ ಆಫ್ ಆರ್ಡರನ್ನು ಕೇಳಿದ ಮೇಲೆ ಅದರ ಬಗ್ಗೆ ಅಭಿಪ್ರಾಯವನ್ನು ಮಾನ್ಯ ಸ್ಪೀಕರು ಹೇಳಬಹುದು. ನಾನು ಹೇಳುವುದೇನೆಂದರೆ, ಈ ಸದನದ ಜುರಿಸ್‌ಡಿಷನ್ ಏನಿದೆ, ಏನಿಲ್ಲವೆಂದಲ್ಲ ಯಾವುದೇ ಒಂದು ಪ್ರಶ್ನೆ ಬಂದಾಗ ಪಾಯಿಂಟ್ ಆಫ್ ಆರ್ಡರ್ ಎತ್ತುವುದು. ನಿಯಮಾವಳಿಗಳ ಸ್ಕೋಪ್ ಏನು, ಸದನದ ಜುರಿಸ್‌ಡಿಷನ್ ಎಂದು ಹೇಳಿ ಒಂದು ಪಾಯಿಂಟ್ ಆಫ್ ಆರ್ಡರ್‌ನಲ್ಲಿ ನಿರ್ಧಾರ ಮಾಡುವುದ ಕ್ಕಾಗುವುದಿಲ್ಲ ಅಯಾಯ ಸಂದರ್ಭದಲ್ಲಿ ನಮ್ಮ ಸದನಕ್ಕೆ ಯಾವ ರೀತಿಯ ಅಧಿಕಾರ ಇರುತ್ತದೆ, ಜುರಿಸ್‌ಡಿಷನ್ ಇದ್ದರೂ that jurisdiction is subject to the jurisdiction of the rules we have framed in that behalf. ಒಂದು ಸಂದರ್ಭ ನಮ್ಮ ರೂಲ್ಸ್‌ಗೆ ಮಿಕ್ಕಿ ಜುರಿಸ್‌ಡಿಕ್ಷನ್ ಎಕ್ಸರ್‌ಸೈಸ್ ಮಾಡಬೇಕೆಂದರೆ ನಾವೇ ರೂಲ್ಸ್ ಸಸ್ಪೆಂಡ್ ಮಾಡಿ ಮಾಡ ಬೇಕಾಗುತ್ತದೆಯೋ ಹೊರತು ರೂಲ್ ಇಟ್ಟುಕೊಂಡು ಏನೂ ಹೇಳುವುದಕ್ಕಾಗುವುದಿಲ್ಲ. ರಾಷ್ಟ್ರದ ಸಮಸ್ಯೆ ಬಗ್ಗೆ ಮಾತನಾಡುವುದಕ್ಕೆ ಅಧಿಕಾರ ಇದೆಯೋ. ಎಂಬ ಬಗ್ಗೆ ನಾನು ಮಾತನಾಡುತ್ತಿಲ್ಲ. ನೀವು ಯಾವುದೋ ಒಂದು ರೀತಿಯಲ್ಲಿ ಈ ವಿಷಯವನ್ನು ಚರ್ಚೆ ಮಾಡಬೇಕೆಂದರೆ ಅದು ಬೇರೆ ವಿಷಯ.

ಇನ್ನು ಎರಡನೆಯದು ಈ ವಿಷಯ ಅಡ್ಜರ್ನ್‌ಮೆಂಟ್ ಮೋಷನ್ ಆಗುತ್ತದೆಯೋ ಎಂಬುದು, it is a very simple question that I am putting by way of a point of order, ಇದನ್ನು ಅಡ್ಜರ್ನ್‌ಮೆಂಟ್ ಮೋಷನ್ ಆಗಿ ತರಲಿಕ್ಕೆ ಇಲ್ಲಿ ಬರುವುದಿಲ್ಲ. ಏಕೆ ಬರುವುದಿಲ್ಲ ಎಂದರೆ. ಅಡ್ಜರ್ನ್‌ಮೆಂಟ್ ಮೋಷನ್ ಎಸೆನ್ಸ್ ಏನು? ಅಡ್ಜರ್ನ್‌ಮೆಂಟ್ ಮೋಷನ್ ತರಬೇಕಾದರೆ ಎದುರುಗಡೆ ಇರುವ ಸರ್ಕಾರ ತನ್ನ ವೈಫಲ್ಯತೆಯನ್ನು ರಕ್ಷಿಸಿಕೊಳ್ಳತಕ್ಕಂಥ ಕೆಲಸವಾಗಿರಬೇಕು. Because the essence of an adjournment motion that it is going to draw the attention of the House to a matter which implies either direct or indirect failure on the part of the government. ನಾನು ಹೇಳಿದ ಅಂಶ ಇಲ್ಲದಿದ್ದರೆ ಅಡ್ಜರ್ನ್‌ಮೆಂಟ್ ಮೋಷನ್ ಆಗುವುದಿಲ್ಲ. ಅದು ರೆಸಲ್ಯೂಷನ್ ಆಗಬಹುದು, ಮತ್ತೊಂದು ಆಗಬಹುದು, ಕಾಲಿಂಗ್ ಅಟೆನ್‌ಷನ್ ಆಗಬಹುದು, ಕೊಶ್ಚನ್ ಆಗಬಹುದು, ನಿರ್ಣಯ ಆಗಬಹುದು, ಅದು ಬೇರೆ ವಿಚಾರ. ಅಡ್ಜರ್ನ್‌ಮೆಂಟ್ ಮೋಷನ್‌ಗೆ ಎಸೆನ್ಸ್ ಏನು ? ಯಾವ ಸರ್ಕಾರ ಎದುರುಗಡೆ ಕುಳಿತಿದೆಯೋ, ಆ ಸರ್ಕಾರದ ವೈಫಲ್ಯದ ಅಂಶ ಇದರೊಳಗೆ ಇರಬೇಕು ಇಲ್ಲದಿದ್ದರೆ ಬರುವುದಿಲ್ಲ.

SRI J.H. PATEL.—Not only that, it is in effect a "No Confidence Motion."

SRI K.H. SRINIVAS.—Ultimately what is the question that is put before the House? Now the house stands adjourned, that is the motion that has to be put before the house. Suppose it is unanimously carried out here, are you going to resign? Because if any adjournment motion is carried out in this house it very necessarily implies a no-confidence in the government i.e., the government which sits here and defends it. ಪ್ರಶ್ನೆ ಏನಾಗುತ್ತದೆಂದರೆ, ಈ ಮ್ಯಾಟರ್ ಬಗ್ಗೆ ಡಿಸ್ಕಸ್ ಮಾಡಬೇಕೆನ್ನುವ ಚಟ ಇದ್ದರೆ ಏನು ಬೇಕಾದರೂ ಮಾಡಿಕೊಳ್ಳಲಿ.

ಶ್ರೀ ಜೆ.ಹೆಚ್. ಪಟೇಲ್.—ಹಾಗಾದರೆ ಬಿಟ್ಟು ಬಿಡಿ.

ಶ್ರೀ ಕೆ ಹೆಚ್. ಶ್ರೀನಿವಾಸ್.—ಇದರೊಳಗೆ ಬಿಡುವುದಕ್ಕಾಗುವುದಿಲ್ಲ. ನೀವು ನಿಮ್ಮ ಬುದ್ಧಿವಂತಿಕೆಯನ್ನು ಖರ್ಚು ಮಾಡಿ ನಿಮ್ಮನ್ನು ನೀವು ಎದುರಿಸಿಕೊಳ್ಳಿ. ಈಗ ನಿಲುವಳಿ ಸೂಚನೆ ತಂದಿದ್ದಾರೆ. It is very clear. I am reading to you some paragraph from Kaul and Shakhdher.

ಅಧ್ಯಕ್ಷರು.—ಇದುವರೆಗೂ ನನ್ನ ಕಾಲಾವಧಿಯಲ್ಲಿ ಬಂದಿರುವ ನಿಲುವಳಿ ಸೂಚನೆಯನ್ನು ನನ್ನ ಚೇಂಬರಿನಲ್ಲಿ ನಾನು ರಿಜೆಕ್ಟ್ ಮಾಡಿಲ್ಲ. ಪ್ರಿಲಿಮಿನರಿ ಸಬ್‌ಮಿಷನ್‌ಗೆ ಅವಕಾಶ ಕೊಟ್ಟಿದ್ದೇನೆ.

ಶ್ರೀ ಕೆ.ಹೆಚ್. ಶ್ರೀನಿವಾಸ.—ಒಂದು ದಿವಸ ಒಂದು ನಿಲುವಳಿ ಸೂಚನೆ ಬಂದ ಮೇಲೆ ಮಾರು ದಿವಸ ಅದನ್ನು ಮತ್ತು ಚರ್ಚೆಗೆ ತೆಗೆದುಕೊಳ್ಳುವ ಸಂಪ್ರದಾಯ ಇದುವರೆಗೂ ನಾನು ಕಂಡಿಲ್ಲ.

ಶ್ರೀ ಜೆ.ಹೆಚ್, ಪಟೇಲ್.—ನೀವು ಧರಣಿ ಕುಳಿತು ಮಾರನೇ ದಿವಸವೂ ಮುಂದುವರಿಸಿರುವುದು ಉಂಟಲ್ಲ

ಅಧ್ಯಕ್ಷರು.—ನೂರಕ್ಕೆ ನೂರರಷ್ಟು ನಾನು ನಿಲುವಳಿ ಸೂಚನೆಗಳನ್ನು ನಾನು ರಿಜೆಕ್ಟ್ ಮಾಡಿರುವುದು ಉಂಟು.

ಶ್ರೀ ಎಸ್. ಬಂಗಾರಪ್ಪ.—ಹಾಗಿದ್ದರೇ, ಇದನ್ನು ಏಕೆ ನಿಮ್ಮ ಚೇಂಬರ್‌ನಲ್ಲೇ ರಿಜೆಕ್ಟ್ ಮಾಡಬಾರದಿತ್ತು ? I am posing this question to the Hon. Speaker, why did you not decide it in your chamber ?

ಅಧ್ಯಕ್ಷರು.—ನನಗೆ ಬಂದ ನಿಲುವಳಿ ಸೂಚನೆಗಳನ್ನು ಅವು ಓಪನ್ ಅಸೆಂಬ್ಲಿಯಲ್ಲಿ ಚರ್ಚೆಯಾಗಲಿ ಎಂಬ ಉದ್ದೇಶದಿಂದ ರಿಜೆಕ್ಟ್ ಮಾಡದೆ ಕೆಲವೊಮ್ಮೆ ರೂಲ್ ೬೦ಕ್ಕೆ, ಕನ್‌ವರ್ಟ್ ಮಾಡಿದ್ದೇನೆ, ಕ್ವೆಶ್ಚನ್‌ಗೂ ಕನ್‌ವರ್ಟ್ ಮಾಡಿದ್ದೇನೆ. ಅದೂ ಅಪೋಜಿಷನ್‌ವರ ಪರವಾಗಿಯೂ ಕನ್‌ವರ್ಟ್ ಮಾಡಿದ್ದೇನೆ.

ಶ್ರೀ ಜೆ.ಹೆಚ್. ಪಟೇಲ್.—ನಿಮ್ಮ ಉದಾರತೆಯನ್ನು ತಪ್ಪಾಗಿ ಅವರು ಬಳಸಿಕೊಳ್ಳುತ್ತಿದ್ದಾರೆ. ಇನ್ನು ಮೇಲಾದರೂ ರಿಜೆಕ್ಟ್ ಮಾಡಿ. ಏಕೆಂದರೆ ಅವರು ಬೆಳಗಾದರೆ ಎದಾರೂ ನಿಲುವಳಿ ಸೂಚನೆಗಳನ್ನು ತರುವ ಅಭ್ಯಾಸದವರು.

ಅಧ್ಯಕ್ಷರು.—ನನ್ನ ಉದಾರತೆಯನ್ನು ಆ ಕಡೆಯುವರು ಈ ಕಡೆಯುವರು ಎರಡೂ ಕಡೆಯುವರು ದುರುಪಯೋಗ ಮಾಡಿಕೊಂಡಿದ್ದಾರೆ. ಆಯಿತು, ಅಸೆಂಬ್ಲಿ ಹಿಸ್ಟರಿ ನೋಡಿದರೆ ಸಣ್ಣ ಪುಟ್ಟ ವಿಷಯಗಳಿಗೆಲ್ಲಾ ಅಜರ್ನ್‌ಮೆಂಟ್ ಮೋಷನ್ ತಂದಿರುವುದು ಕಾಣುತ್ತದೆ. ಬಾಳಿಗಾರವರ ಕಾಲದಲ್ಲೂ ಹಾಗಿದೆ. ಶ್ರೀನಿವಾಸ್ ಹೇಳುವುದನ್ನು ತತ್ವಶಃ ನಾನು ಒಪ್ಪಿದರೂ ಈ ಮನೆಯ ಸದಸ್ಯರೆಲ್ಲ ನಾನು ಹೇಳುವುದರ ಬಗ್ಗೆ ಆಲೋಚನೆ ಮಾಡಲಿ.

ಶ್ರೀ ಕೆ. ಹೆಚ್.ಶ್ರೀನಿವಾಸ್:—ನಾನು ಹೇಳಿದ್ದು, ನಿನ್ನೆ ದಿವಸ ನೀವು ಸಭೆ ಅಡ್ಜರ್ನ್ ಮಾಡಿ ಹೋಗಿದ್ದುದು ನೋಡಿದರೆ ನಿನ್ನೆಯೇ ಇದು ಮುಗಿದುಹೋಯಿತೆಂದು ಅಂದುಕೊಂಡಿದ್ದೆವು. ಆದರೆ ಇವತ್ತು ಬೆಳಿಗ್ಗೆ ಇವರು ಮತ್ತೆ ಇಲ್ಲಿ ಅದನ್ನೇ ಎತ್ತಿರುವುದನ್ನು ನೋಡಿದರೆ ಗವಾಕ್ಷಿಯಲ್ಲಿ ಮತ್ತೇ ಪಿಶಾಚಿ ಬಂದ ಹಾಗಾಯಿತು.

ಅಧ್ಯಕ್ಷರು.—ನಿನ್ನೆ ಎಲ್ಲಿಗೆ ನಿಲ್ಲಿಸಿದ್ದೋ ಅದು ಅಲ್ಲಿಗೆ ನಿಂತಿದೆ. ತೀರ್ಮಾನ ಕೊಟ್ಟಿಲ್ಲ ಸ್ಟೇಟಸ್ ಕೋ ಇದೆ.

SRI K. H. SRINIVAS.—The primary object of an adjournment motion is to draw the attention of the government to the matter of an urgent public importance so as to criticize the decision of Government in an urgent matter in regard to whi0h a motien of resolution wich proper notiee will be too late.

ಯಾವ ಗವರ್ನಮೆಂಟ್ ಇರುತ್ತದೆಯೋ ಆ ಗವರ್ನಮೆಂಟಿನ ಡಿಸಿಷನನ್ನು ಕ್ರಿಟಿಸೈಜ್ ಮಾಡುವುದೆ, ಅಡ್ಜರ್ನಮೆಂಟ್ ಮೋಷನ್ ತರುವ ಉದ್ದೇಶ. ಬರೀ ಅಟೆನ್ಷನ್ ಡ್ರಾ ಮಾಡುವುದಕ್ಕಾಗಿ ಅಲ್ಲ, ಅದಕ್ಕಾಗಿ ಕಾಲಿಂಗ್ ಅಟೆನ್ಷನ್ ಇದೆ. ಗವರ್ನಮೆಂಟ್ ಪಾಲಿಸಿಯನ್ನು ಪಾಯಿಂಟ್ ಔಟ್ ಮಾಡಬೇಕೆಂದೇ ಆದನ್ನು ಅಡಜರ್ನಮೆಂಟ್ ಮೋಷನ್ ತರುವುದು.

ಶ್ರೀ ಜೆ. ಹೆಚ್.ಪಟೇಲ್.—ರೂಲ್ ೬೮ ಬರೀ ಗಮನಸೆಳೆಯುವುದಕ್ಕೆ ಎಂದು ನೀವು ಹೇಳಿದ್ದಿರಿ. ಪಬ್ಲಿಕ್ ಇಂಪಾರ್ಟೆನ್ಸ್ ಬಗ್ಗೆ ಸರ್ಕಾರದ ಗಮನ ಸೆಳೆಯಲು ೫ ಪ್ರಾವಿಷನ್ ಇದೆ ಅವುಗಳ ಪೈಕಿ adjournment motion is one. If it is carried out against the government, the government resigns. In Rule 68 we may discuss for days and days. There won't be resolution and it won't affect the status of the government. That is hon adjournment motion becomes a rare weapon in the hands of the Opposition.

ಶ್ರೀ ಕೆ.ಹೆಚ್. ಶ್ರೀನಿವಾಸ್:—ನೀವು ನನ್ನ ಪಾಯಿಂಟನ್ನೇ ಸಪೋರ್ಟ್ ಮಾಡಿದಿರಿ.

SRI R. VENKTERAMAIAH.—The subject matter of an adjournment motion must have direct or indirect relation to the condict of default on the part of the government...

ಶ್ರೀ ಕೆ ಹೆಚ್ ಶ್ರೀನಿವಾಸ್;—ಇಲ್ಲಿ ಯಾವುದೋ ಗವರ್ನಮೆಂಟ್ ಬಗ್ಗೆ ಮಾತನಾಡುವುದಿಲ್ಲ. ಆ ಹೌಸಿಗೆ ಸಂಬಂಧಪಟ್ಟ ಗವರ್ನಮೆಂಟಾಗಿರಬೇಕು. ಆದರೆ ಇಲ್ಲಿ ಭಾರತ ಸರ್ಕಾರ ಈ ಮನೆಗೆ ಜವಾಬ್ದಾರರಲ್ಲ. Only this Karnataka Government is responsible to this House. Any criticism or finding fault can only be against the government which is responsible to you. Generally speaking, the subject matter of an adjournment motion must have direct

or indireot relation to the conduct or default on the part the Gövnment of India and must be in the nature of criticism ofy action o Government of India eithere for having done rsome action ııofor ahaving omitted to do some action which was urgentl necessary the umoment. The crux of the matter is, ean adjournment motit n ooı nt admissible unless there was failure on th part of the goverdsment to perform the duties enjoined by the Constitution an the law- ಯಾವ ಸರ್ಕಾರ ಇದೆ ಅದರ ಫೆಲ್ಯೂರನ್ನು ಹೇಳದೇ ಹೋದರೆ ಅಥವಾ ಇಂಪ್ಲಿಕೇಟ್ ಮಾಡದೇ ಹೋದರೆ ಅದು ನಿಲುವಳಿ ಸೂಚನೆಗಳು ಸಾಧ್ಯವೇ ಇಲ್ಲ. Where the gevernment has no obligation to interfere in a matter, the adjournment motion is out of order. This adjournment motio is very mnch out of order according to Kaul & Shakdher. Then adjournment motion cannot also be moved on matters concernin the State Government. In Lok Sabha there have been umpeten number of rulings. ಲೋಕಸಭೆಯಲ್ಲಿ ಇರುವ ಸದಸ್ಯರಿಗೆ ರಾಜ್ಯದ ಸಬ್ಜೆಕ್ಟ್ಸ್ ಸಂಬಂಧ ಪಡುವುದಿಲ್ಲವೋ ? ಅಥವಾ ನಮಗೆ ರಾಷ್ಟ್ರದ ವಿಷಯಗಳ ಬಗ್ಗೆ ಕನ್‌ಸರ್ನ್ ಇಲ್ಲವೋ ಎಂದು ನೀವು ಕೇಳಿದರೆ ಎರಡಕ್ಕೂ ಉತ್ತರ ಖಂಡಿತ ಇದೆ, ಆದರೆ ವಿಷಯದ ಬಗ್ಗೆ ಉತ್ತರಿಸಲು ಸರ್ಕಾರ ಇರಬೇಕಾಗುತ್ತದೆ. But there is another statutory body constitntionlly empowered to lookafter that also. The State Legislature has to take care of that matter. ಇವತ್ತು ಠಕ್ಕರ ವರದಿ, ಆದರಿಂದ ಉದ್ಭವವಾಗಿರುವ ಪರಿಸ್ಥಿತಿ ಮುಂತಾದುವುಗಳ ಬಗ್ಗೆ ಆಳುವ ಪಕ್ಷ ಗಂಭೀರ ಚಿಂತನೆ ನಡೆಸುತ್ತಿದೆ, ಮತ್ತು ಪ್ರಧಾನ ಮಂತ್ರಿಗಳಾಗಿದ್ದ ಇಂದಿರಗಾಂಧಿಯವರ ಬಗ್ಗೆ ಕಣ್ಣೀರು ಸುರಿಸಲು ತೊಡಗಿರುವುದನ್ನು ನೋಡಿದರೆ ನನಗೆ ಆಶ್ಚರ್ಯವಾಗುತ್ತದೆ.

ಶ್ರೀ ಎಂ. ಎಸ್. ಕೃಷ್ಣನ್.—ಸುರಿಸುವುದಕ್ಕೆ ಕಣ್ಣೀರುನಿಮಗಿಲ್ಲ. ಅದಕ್ಕೋಸ್ಕರ ನನಗೆ ದುಃಖ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಚಿಕ್ಕಮಂಗಳೂರಿನಿಂದ ಅವರು ಎಲೆಕ್ಟ್ ಆಗಿ ಬಂದಾಗ ಅದಕ್ಕೇನೇ ಪಾಪ ನೀವು ಅವರನ್ನು ಹೊರಕ್ಕೆ ಹಾಕಿದ್ದುದು.

ಶ್ರೀ ಕೆ. ಹೆಚ್. ಶ್ರೀನಿವಾಸ್.—ಬೇರೆ ಯಾವರೀತಿ ತರಬೇಕೋ ಅದನ್ನು ಯೋಚನೆ ಮಾಡಿ. ಅಡ್ಜರ್ನ್‌ಮೆಂಟ್ ಮೋಷನ್ ಎಂದು ತರುತ್ತಿದ್ದಾರೆ, ಅಡ್ಜರ್ನ್‌ಮೆಂಟ್ ಮೋಷನ್‌ಗೆ ಇದು ಸಬ್ಜೆಕ್ಟ್ ಮ್ಯಾಟರ್‌ಗೆ ಆಗಲಿಕ್ಕೆ ಸಾಧ್ಯವಿಲ್ಲ, for the simple repason that the government that is responsible for this House is not involved in this matter, and as such a subject of this teype connot be brought under adjournment motion ಯಾವುದೇ ರೀತಿಯಲ್ಲಿ ಠಕ್ಕರ್ ಕಮಿಷನ್ ಬಗ್ಗೆ ಮಾತನಾಡುವುದಕ್ಕೆ ಬಂದರೂ ಕೂಡ, ದೇವೆಗೌಡ ಅವರು ಹೇಳಿದ ಹಾಗೆ ಆ ವರದಿ ನಮ್ಮ ಕಡೆ ಇಲ್ಲದೆ ಉದ್ಭವಿಸುವುದನ್ನು ಬಂದು ಇಲ್ಲಿ ಹೇಳುವುದು ಸರಿಯಲ್ಲ, ಎಲ್ಲಿ ಉದ್ಭವಿಸಿದೆ ಇದು, ಪತ್ರಿಕೆಯಲ್ಲಿ ಬಂದುದನ್ನು ನೋಡಿಕೊಂಡು ಬಂದು ಇಲ್ಲಿ ಹೇಳಿದರೆ ಸರಿಯಾಗುವುದಿಲ್ಲ. ಈ ಸದನದಲ್ಲಿ ಅದು ಉದ್ಭವಿಸಬೇಕಾಗುತ್ತದೆ, ಜಗತ್ತಿನಲ್ಲಿ ಎಲ್ಲೋ ಒಂದು ಕಡೆ ಉದ್ಭವಿಸಿದೆ ಎಂದು ಹೇಳಿದರೆ ಆಗುವುದಿಲ್ಲ. ಕೊನೆಯ ಪಕ್ಷ ಠಕ್ಕರ್ ಕಮಿಷನ್ ವರದಿಯನ್ನು ಪ್ರಿಂಟ್ ಮಾಡಿಸಿ ಹಂಚುವುದಕ್ಕೆ ನಿಮಗೆ ಶಕ್ತಿ ಇದ್ದರೆ, ಈ ಟೇಬಲ್ ಮೇಲೆ ಇಡುವುದಕ್ಕೆ ಶಕ್ತಿ ಜ್ಯೂರಿಸ್‌ಡಿಷನ್ ಇದ್ದರೆ ಅದನ್ನು ನೋಡಿ ನಂತರ ಏನೇನು ಉದ್ಭವಿಸಿದೆ ಎಂದು ನೋಡಿ ಹೇಳಬಹುದು. ಅದು ಇಲ್ಲದೆ ಹಾಗೆ ಮಾತನಾಡುವುದಕ್ಕಾಗುವುದಿಲ್ಲ. ಒಬ್ಬೊಬ್ಬರ ತಲೆಯಲ್ಲಿ ಒಂದೊಂದನ್ನು ಇಟ್ಟುಕೊಂಡು ಅದನ್ನು ಈ ಸದನದಲ್ಲಿ ಹೇಳಬೇಕು ಅದರ ಬಗ್ಗೆ ಡಿಸ್‌ಕಸ್ ಮಾಡಬೇಕೆಂದು ಹೇಳಿದರೆ ಈ ಅಸೆಂಬ್ಲಿ ಸಂತೆಯೋ ಮೈದಾನವೋ ? This sort of argument doesn't hold water. If you are very clear about jurisdiction. ಈ ಅಡ್ಜರ್ನ್‌ಮೆಂಟ್ ಮೋಷನ್ ಅನ್ನು ಜ್ಯೂರಿಡಿಸ್‌ಡಿಕ್ಷನ್ ಒಳಗೆ ತೆಗೆದುಕೊಳ್ಳಲು ಅವಕಾಶವಿದ್ದರೆ, ಇದು ಅಡ್ಜರ್ನ್‌ಮೆಂಟ್ ಮೋಷನ್ ಆಗುತ್ತದೋ ಇಲ್ಲವೋ ? ಅನ್ನತಕ್ಕಂಥ ಅನುಮಾನವಿದ್ದರೆ ಪ್ರಿಲಿಮಿನರಿ ಸಬ್‌ಮಿಷನ್‌ಗೆ ಅವಕಾಶ ಕೊಡಬೇಕು. ಆದರೆ ಅದಕ್ಕಿಂತ ಮುಂಚೆ you haue to give a ruling on my point

of order whether such a subject where the State Government's responsibility is not involved can be brought under the scove of adjournment motion, ತಾವು ಇದರಬಗ್ಗೆ ರೂಲಿಂಗ್ ಕೊಡಬೇಕಾಗುತ್ತದೆ, ನೀವು ಕೊಡುವಂತಹ ರೂಲಿಂಗ್ ಶಾಶ್ವತವಾಗಿ ಇರುವುದರಿಂದ ಈ ಹೌಸ್ ಅನ್ನು ಅದು ಕಾಡದೇ ಇದ್ದಂತೆ ನಾವು ನೋಡಿಕೊಳ್ಳಬೇಕಾಗುತ್ತದೆ, ಹಿಂದೆ ಶ್ರೀ ಬಾಳಿಗಾರರು ಕೂಡ ರೂಲಿಂಗ್ ಅನ್ನು ಕೊಟ್ಟಿದ್ದರು, That is sometime long back, I don't remember, Mr, Baliga has insisted first convincing on the jurisidiction of the rule, ಇದು ಜ್ಯೂರಿಸ್‌ಡಿಕ್ಷನ್ ಒಳಗೆ ಬಂದು ಸದಸ್ಯರು ತಮಗೆ ಕನ್‌ವಿನ್ಸ್ ಮಾಡಿದರೆ ಪ್ರಿಲಿಮಿನರಿ ಸಬ್‌ಮಿಷನ್‌ಗೆ ಅವಕಾಶ ಕೊಡುತ್ತೇನೆ ಇಲ್ಲದಿದ್ದರೆ ಕೊಡುವುದಿಲ್ಲವೆಂದು ಹೇಳಿದ್ದಾರೆ, ಇದಕ್ಕೆ ಪ್ರಿಲಿಮಿನರಿ ಸಬ್‌ಮಿಷನ್‌ಗೆ ಅವಕಾಶ ಕೊಡಬಹುದು ಎಂದು ಹೇಳುವುದಕ್ಕೆ ಅವಕಾಶವಿಲ್ಲ- ಇದು ಪ್ರಿಲಿಮಿನರಿ ಸಬ್‌ಮಿಷನ್‌ಗೆ ಸಬ್‌ಸ್ಟ್ಯಾನ್‌ಷಿಯಲ್ ಎಂದು ಹೇಳುವುದಕ್ಕೆ ಎಂಥಾದ್ದು ಇಲ್ಲಿ ಇಲ್ಲ,

(ಗೊಂದಲ]

ಶ್ರೀ ಎಂ. ಎಸ್. ಕೃಷ್ಣನ್.—ಹಿಂದೆಬಮ್ಮೆ ಪ್ರಿಲಿಮಿನರಿ ಸಬ್‌ಮಿಷನ್‌ಗೆ ಅವಕಾಶ ಕೊಟ್ಟಿದ್ದಾರೆ. ಶ್ರೀ ಬಿ. ಕೆ. ಪುಟ್ಟರಾಮಯ್ಯನವರು ಬರೆದಿದ್ದಾರೆ ಅದನ್ನು ಶ್ರೀ ವೆಂಕಟರಾಮಯ್ಯನವರು ಓದುತ್ತಾರೆ, ಶ್ರೀ ಬಾಳಿಗಾರವರು ಕೂಟ ಹೇಳಿದ್ದಾರೆ ಅದನ್ನು......

(ಗೊಂದಲ)

ಶ್ರೀ ಕೆ. ಹೆಚ್. ಶ್ರೀನಿವಾಸ್.—ಅನಧಿಕೃತ ಪ್ರಿಲಿಮಿನರಿ-ಸಬ್‌ಮಿಷನ್ ಅದು.

(ಗೊಂದಲ)

ಶ್ರೀ ಎಂ. ಎಸ್. ಕೃಷ್ಣನ್,—ಅನಧಿಕೃತವಾಗಿ ಮಾಡುವುದಕ್ಕೆ ನೀವು ಬಿಡಲಿಲ್ಲ.

(ಗೊಂದಲ)

ಶ್ರೀ ಆರ್. ವೆಂಕಟರಾಮಯ್ಯ.—ನಾವು ನಿನ್ನೆ ಒಂದು ಅಡ್ಜನ್‌ಮೆಂಟ್ ಮೋಷನ್ ಅನ್ನು ತಂದೆವು ಮತ್ತು ಇವತ್ತು ಇನ್ನೊಂದು ಅಡ್ಜರ್ನ್‌ಮೆಂಟ್ ಮೋಷನ್ ಅನ್ನು ತಂದೆವು, ನಿನ್ನೆಯ ಅಡ್ಜನ್‌ಮೋಷನ್‌ನ ಸಬ್‌ಸ್ಟ್ಯಾನ್ಸ್ ಬೇರೆ ಇವತ್ತಿನದು ಬೇರೆ, ಅವರು ಕ್ವೆಶ್ಚನ್ ಮಾಡಿದರು ಅದಕ್ಕೋಸ್ಕರ ಅದನ್ನು ಓದುತ್ತೇನೆ, ನಾನು ತಕ್ಕರ್ ಕಮಿಷನ್ ವರದಿಯ ಬಗ್ಗೆ ಮಾತನಾಡುವುತ್ತಿಲ್ಲ,

"The Takkar Commission Report has been placed on the table of parliament, Observations made by the Commission relating to the security of the prime minister and that of the country ate of far-reaching consequences, The Commission has also observed the part played by invisible hands on the assdssination of the prime minister, And the matter under isse is of national importance pertaining th the security of the country as a whole, "

ಇದನ್ನು ನಿನ್ನೆ ಕೊಟ್ಟಿದ್ದೇವೆ,

(ಗೊಂದಲ)

ಅಧ್ಯಕ್ಷರು. ಪ್ರಿಲಿಮಿನರಿ ಸಬ್‌ಮಿಷನ್ ಹೇಳಿ.

ಅಧ್ಯಕ್ಷರು.—ವೆಂಟರಾಮಯ್ಯನವರೇ, ಶ್ರೀನಿವಾಸ್‌ರವರು ಪಾಯಿಂಟ್ ಆಫ್ ಆರ್ಡರ್ ಏನು ಹೇಳಿದ್ದಾರೆ, ಅದರ ಬಗ್ಗೆ ಮಾತ್ರ ಹೇಳಿ.

(ಗೊಂದಲ)

SRI R. VENKATARAMAIAH.—I refer to page 414 of practice and procedure of Parliement, wherein it is mentioned as under.

"The primary object of an adjournment motion is to draw the attention of the Govrnment to a matter of urgent public importance so as to criticize the decision of Government in an urgent matter in regard to which a motion or resolution with proper notice will be too late"...

Now, I quote from page 416.

"The crucial test always is as to whether the question proposed to be raised has arisen suddenly and created an emergent situation of such a character that there is *prima facie* case of urgency and the House must therefore, leave aside all other business and take up the consideration of the urgent matter at the appointed hour..."

ಅಧ್ಯಕ್ಷರು.—ಪಾಯಿಂಟ್ ಆಫ್ ಆರ್ಡರ್ ಎತ್ತಿದ್ದಾರೆ, ಅದರ ಬಗ್ಗೆ ವೆಂಕಟರಾಮಯ್ಯನವರ ಹೇಳುತ್ತಿದ್ದಾರೆ.

(ಗೊಂದಲ)

SRI K. H. SRINIVAS.—Sir, on a point of order. Sir, unless a ruling is given.

ಅಧ್ಯಕ್ಷರು.—ಶ್ರೀನಿವಾಸ್‌ರವರು ಏನು ಪಾಯಿಂಟ್ ಆಫ್ ಆರ್ಡರ್ ಎತ್ತಿದ್ದಾರೆ...I have to hear them.

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಪ್ರಿಲಿಮಿನರಿ ಸಬ್‌ಮಿಷನ್ ಮಾಡುವುದಕ್ಕೂ ಬರುವುದಿಲ್ಲ ಎನ್ನತಕ್ಕಂಥದ್ದು ಒಂದು ವಾದ ನಮ್ಮದು.

(ಗೊಂದಲ)

ಅಧ್ಯಕ್ಷರು.—ಪಾಯಿಂಟ್ ಆಫ್ ಆರ್ಡರ್ ಬಗ್ಗೆ ಕೇಳಿ.

(ಗೊಂದಲ)

SRI R. VENKATARAMAIAH.—I quote from page 418
"Ministerial responsibility.—
Generally speaking, the subject-matter of an adjournment motion must have direct or indieret relation to the conduct or default on the part of the Government of India and must be in the nature of criticism of the action of the Government of India either for having done of the Gov rnment of India either for having done some action or for having omitted to do some action..."

(ಗೊಂದಲ)

ಅಧ್ಯಕ್ಷರು.—ವೆಂಕಟರಾಮಯ್ಯನವರೇ, ಅವರೇನು ಪಾಯಿಂಟ್ ಆಫ್ ಆರ್ಡರನ್ನು ಎತ್ತಿದ್ದಾರೆ, ಅದರ ಬಗ್ಗೆ ಹೇಳಿ.

(ಗೊಂದಲ)

SRI VENKATARAMAIAH.—Sir,...

"...which was urgently necessary at the moment. An adjournment motion is not admissible unless there was failure on the part of the Government to perform the duties enjoined by the Constitution and the law. Where the Government of India has no obligation to interfere in a matter, an adjournment motion is out of order. An adjournmention motion cannot be moved also on matters where a Minister exercises discretionary powers conferred upon him by a statute".

ಇನ್ನೊಂದು ವಿಷಯ ಇಲ್ಲಿದೆ ಸ್ವಾಮಿ. ಇದು ಶ್ರೀನಿವಾಸ್‌ರವರಿಗೆ ಡೈರೆಕ್ಟ್ ಆನ್ಸರ್.

(ಗೊಂದಲ)

ಶ್ರೀ ಕೆ. ಹೆಚ್. ಶ್ರೀನಿವಾಸ್.—ಅವರು ಗೌರ್ನ್‌ಮೆಂಟ್ ಆಫ್ ಇಂಡಿಯಾ ಎಂದು ಹೇಳುತ್ತಾರೆ.

(ಗೊಂದಲ)

SRI K. H. SRINIVAS.—I have a right to demand a correct answer.

(INTERRUPTIONS)

SRI M. MALLIKARJUNA KHARGE.—I strongly object. He is taking undue advantage. ಸಂಬಂಧ ಇಲ್ಲದೇ ಇರತಕ್ಕ ವಿಷಯದ ಬಗ್ಗೆ ಪ್ರಿಲಿಮಿನರಿ ಸಬ್ಮಿಷನ್‌ಗೆ ಅವಕಾಶ ಮಾಡಿಕೊಟ್ಟಿದ್ದೀರಿ.

(INTERRUPTIONS)

ಶ್ರೀ ಆರ್. ವೆಂಕಟರಾಮಯ್ಯ.—ಇಂದಿರಾಗಾಂಧಿ ಅವರ ಹೆಸರಿನಿಂದ ಇಲ್ಲಿಗೆ ಬಂದಿದ್ದಾರೆ. ಈ ವಿಷಯವನ್ನು ಚರ್ಚೆ ಮಾಡುವಾಗ ಸಂತೋಷದಿಂದ ಒಪ್ಪಿಕೊಳ್ಳಬೇಕಾಗಿತ್ತು, ಪ್ರಿಲಿಮಿನರಿ ಸಬ್ಮಿಷನ್‌ಗೆ ಅವಕಾಶ ಕೊಡಿ.

(INTERRUPTIONS)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಕೊನೆಗೆ ನಾನು ಈ ತೀರ್ಮಾನಕ್ಕೆ ಬರಬೇಕಾಗುತ್ತದೆ.

xxx xxx xxx

SRI M. S. KRISHNAN.—Sir, I will take strong and very strong objection.

(INTERRUPTIONS)

12.30 p. m.

SRI M. S. KRISHNAN.—I take very strong objection. He has no business to say.

*ಅಧ್ಯಕ್ಷರ ಆದೇಶದ ಮೇರೆಗೆ ತೆಗೆದುಹಾಕಲಾಗಿದೆ.

(INTERRUPTIONS)

MR. SPEAKER.—Nothing will no record.

xxx xxx xxx

ಅಧ್ಯಕ್ಷರು.—ಈಗ ನಾನು ಶ್ರೀ ಯಡಿಯೂರಪ್ಪನವರನ್ನು ಕರೆದಿದ್ದೇನೆ.

(ಗೊಂದಲ)

ಅಧ್ಯಕ್ಷರು.—ರಿಕಾರ್ಡ್‌ಗೆ ಏನೂ ಹೋಗುವುದಿಲ್ಲ.

xxx xxx xxx

ಅಧ್ಯಧಕ್ಷರು.—ಸಿಪಿಎಂ, ಅವರು ಗರ್ವನಮೆಂಟ್‌ನ ಏಜೆಂಟ್ ಎಂದು ಏನು ಹೇಳಿದ್ದೀರಿ ಅದು it is not a good word. I have expunged it.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಅದರಲ್ಲಿ ಅನ್‌ಪಾಲಿಮೆಂಟರಿ ಏನಿದೆ ?

(ಗೊಂದಲ)

ಅಧ್ಯಕ್ಷರು. ತಾವು ಯಾರ ಏಜೆಂಟರೂ, ಅಲ್ಲ. ಅವರೂ ಯಾರ ಏಜೆಂಟರೂ ಅಲ್ಲ.

SRI M. MALLIKARJUNA KHARGE.—It is pre-planned......

(ಗೊಂದಲ)

ಅಧ್ಯಕ್ಷರು.—ರಿಕಾರ್ಡ್‌ಗೆ ಏನೂ ಹೋಗುವುದಿಲ್ಲ. ಮಾನ್ಯ ಯಡಿಯೂರಪ್ಪನವರು ಮಾತನಾಡಬೇಕು.

(ಗೊಂದಲ)

ಅಧ್ಯಕ್ಷರು.—ನೀವೂ ದೊಡ್ಡವರು, ಅವರೂ ದೊಡ್ಡವರು.

(ಗೊಂದಲ)

MR SPEAKER.—Nothing will go on record.

(ಗೊಂದಲ)

ಅಧ್ಯಕ್ಷರು.—ಇಂದಿರಾಗಾಂಧಿಯವರ ಕೊಲೆ ಅವರು ಮಾಡಿದರು, ಇವರು ಮಾಡಿದರು ಎನ್ನುವುದು ಏನಿದೆ ಅದನ್ನು have expunged it. ಅದರ ಬಗ್ಗೆ ನೀವೂ ಮಾತನಾಡಬೇಡಿ, ಅವರೂ ಮಾತನಾಡಬೇಡಿ.

ಶ್ರೀ ಆರ್. ವೆಂಕಟರಾಮಯ್ಯ.—ನಿಮಗೆಲ್ಲಾ ನಾನು ಉತ್ತರವನ್ನು ಹೇಳಬೇಕಾಗಿರುವುದು ಸುಮ್ಮನೆ ಇವರದು ತಕರಾರು ಕಂಪನಿ.

> "...Where the Government of India has no obligation to interfere in a matter, an adjournment motion is out of order..."

ಇದಕ್ಕಿಂತ ಇನ್ನೇನು ಬೇಕು ಸ್ವಾಮಿ.

(ಗೊಂದಲ)

ಶ್ರೀ ಆರ್. ಎನ್. ನಾಯಕ್.—ಯಾವ ರೂಲ್ಸ್ ಕೆಳಗೆ ಇದು ನಡೆಯುತ್ತಿದೆ ? ಯಾವುದನ್ನು ತಾವು ಓದುತ್ತಿರುವುದು ?

(ಗೊಂದಲ)

ಅಧ್ಯಕ್ಷರು.—ಪುಸ್ತಕ ನೋಡೀ.

(ಗೊಂದಲ)

*(Not recorded as ordered by the Chair)

ಶ್ರೀ ಪಟವರ್ಧನ್ ರತ್ನಾಕರ್.—ಪಾಯಿಂಟ್ ಆಫ್ ಆರ್ಡರ್ ಆಗಿದೆ. ಈಗ ತಾವು ರೂಲಿಂಗನ್ನು ಕೊಡಿ. ವೆಂಕಟರಾಮಯ್ಯನವರು ಇಂಟರ್‌ಪ್ರಿಟೇಷನ್ ಮಾಡುತ್ತಿದ್ದಾರೆ. ತಾವು ಮೊದಲು ರೂಲಿಂಗನ್ನು ಕೊಡಿ.

(ಗೊಂದಲ)

ಅಧ್ಯಕ್ಷರು.—ತಾವುಗಳೆಲ್ಲರೂ ಈ ರೀತಿ ಇಂಟರ್‌ಫಿಯರ್ ಮಾಡುವುದು ಸರಿಯಲ್ಲ. ದಯವಿಟ್ಟು ಕುಳಿತುಕೊಳ್ಳಿ. ವೆಂಕಟರಾಮಯ್ಯನವರಿಗೆ ನಾನು ಅವಕಾಶವನ್ನು ಕೊಟ್ಟಿದ್ದೇನೆ, ಅವರು ಹೇಳುತ್ತಾರೆ.

(ಗೊಂದಲ)

ಶ್ರೀ ಬಿ. ಎಸ್. ಯಡಿಯೂರಪ್ಪ.—ಮಾನ್ಯ ಸದಸ್ಯರಿಗೆ ಅವರವರ ಅಭಿಪ್ರಾಯಗಳನ್ನು ವ್ಯಕ್ತಪಡಿಸುವುದಕ್ಕೆ ಅವಕಾಶ ಇದೆ.

(INTERRUPTIONS)

ಶ್ರೀ ಆರ್. ಎನ್. ನಾಯಕ್.—ಕೂಗಾಡುವುದಾದರೆ ನಾವು ಕೂಗಾಡುತ್ತೇವೆ.

ಅಧ್ಯಕ್ಷರು.—ಈಗಾಗಲೇ ನಾನು ಹೇಳಿದ್ದೇನೆ. ನೀವುಗಳು ಅವಕಾಶವನ್ನು ಸರಿಯಾಗಿ ತೆಗೆದುಕೊಳ್ಳುತ್ತಿಲ್ಲ. ನಾನು ಸ್ಟ್ರಿಕ್ಟ್ ಆದರೆ ಆ ಕಡೆ ಇಬ್ಬರು ಸದಸ್ಯರು ಹೊರಹೋಗಬೇಕಾಗುತ್ತದೆ.

(INTERRUPTIONS)

SRI V. BAOOPATHI,—Mrx. Speaker Sir,

(INTERRUPTIONS)

MR. SPEAKER.—I have allowed the hon'ble Member Sri R. Venkataramaiah to speak. please do not interfere.

SRI R. VENKATARAMAIAH.—Sir, I would like to quote certain Proceedings of this House when Sri Baliga was the Speaker.

> "When I gave my thought to the adjournment motion tabled by the member I came to the conclusion that there was no responsibility of this Government involved in it. So, I told him that in my opinion that it would not be admissible. But, he said that he wanted to argue his case in the House and convince me in the House that the adjournment motion was admissible".

ಅದಕ್ಕೆ ಪುಟ್ಟರಾಮಯ್ಯನವರು ಹೇಳುತ್ತಾರೆ. ಠಕ್ಕರ್ ಕಮೀಷನ್ ಬಗ್ಗೆ...

(ಗೊಂದಲ)

ಶ್ರೀ ಆರ್. ವೆಂಕಟರಾಮಯ್ಯ.— ಶ್ರೀ ಬಿ. ಕೆ. ಪುಟ್ಟರಾಮಯ್ಯನವರು ಹೇಳುತ್ತಾರೆ. ಸ್ವಾಮಿ, ಈ ದಿವಸ ಭಾರತ ದೇಶದ ೪೦ ಸಾವಿರ ಚದರ ಮೈಲಿ ಪ್ರದೇಶವನ್ನು ಬೇರೆ ರಾಜ್ಯದವರು ಯಾವ ಕಾಲದಲ್ಲೂ ಸ್ವಾತಂತ್ರ್ಯ ಬಂದ ಮೇಲೆ ಆಕ್ರಮಣ ಮಾಡಿರುವಂತಹ ವಿಶೇಷ ಸಂದರ್ಭ ಯಾವಾಗಲೂ ಇರಲಿಲ್ಲ. ಏನೋ ಇದು ಒಂದು ಸಾರಿ ಆಕ್ರಮಣವೆಂದು ನಾವುಗಳು ಎಲ್ಲರೂ ತಿಳಿದುಕೊಂಡಿದ್ದೇವೆ. ಈ ರೀತಿ ತಿಳಿದುಕೊಂಡಿರುವ ಕಾಲಕ್ಕೆ ನಾವು ಏನು ಯೋಚನೆ ಮಾಡುತ್ತೇವೆ ಎಂದರೆ ನಮ್ಮ ಸರ್ಕಾರವಾಗಲೀ ಇಂಡಿಯಾ ನಾವಾಗಲೀ ಈ ವಿಷಯದಲ್ಲಿ ಏನೂ ಯೋಚಿಸಬೇಕಾಗಿಲ್ಲ. ಜವಾಬ್ದಾರಿ ಸರ್ಕಾರ ಇದರಲ್ಲಿ ಡಿಫೆನ್ಸ್ ಮಿನಿಸ್ಟ್ರಿಗೆ ಸಂಬಂಧಪಟ್ಟಿದ್ದೇ ವಿನಃ ನಮಗೆ ಇದರಲ್ಲಿ ಏನೂ ಸಂಬಂಧ ಇಲ್ಲವೆಂದು ಅಂದು ಕೊಂಡಿದ್ದೇವೆಂದು ಹೇಳಿದರೆ ಅದು ನಮ್ಮ ಮೂರ್ಖ ಎಂದು ಹೇಳಿದರೆ ತಪ್ಪಾಗಲಾರದು. ಅದು ಡಿಫೆನ್ಸ್ ಮಿನಿಸ್ಟ್ರಿಗೆ ಸಂಬಂಧಪಟ್ಟ ವಿಷಯ ಆಗಿರಬಹುದು, ಆದರೆ ದೇಶವನ್ನು ಡಿಫೆಂಡ್ ಮಾಡುವುದು ಕೇಂದ್ರಸರ್ಕಾರದೊಬ್ಬರದೇ ಕಾರ್ಯವಲ್ಲ. ಇಡೀ ದೇಶದ ಎಲ್ಲಾ ಪ್ರಜೆಗಳ ಕಾರ್ಯ. ಕೇವಲ ಕೇಂದ್ರ ಸರ್ಕಾರದ ಡಿಫೆನ್ಸ್ ಮಿನಿಸ್ಟ್ರಿ ಮೇಲೆ ಈ ಜವಾಬ್ದಾರಿ ವಹಿಸಿದರೆ

ಇವರು ಖಂಡಿತವಾಗಿ ಡಿಫೆಂಡ್ ಮಾಡುವುದಕ್ಕಾಗುವುದಿಲ್ಲ. ಎಂದು ಸ್ಪಷ್ಟವಾಗಿ ಹೇಳಿದ್ದಾರೆ. ಇದನ್ನು ಅನುಸರಿಸಿ ನಾನು ಹೇಳುತ್ತೇನೆ, ಸ್ಪಷ್ಟವಾಗಿ ಹೇಳುತ್ತೇನೆ. ಠಕ್ಕರ್ ಕಮೀಷನ್ ಬಗ್ಗೆ ಈ ಸದನದಲ್ಲಿ ನಾವು ಡಿಸ್ಕಸ್ ಮಾಡಬಹುದು. ಇದರಲ್ಲಿ ಏನೂ ತಪ್ಪಿಲ್ಲ. ಈಗ ದೇಶದ ಭದ್ರತೆ ಬಗ್ಗೆ ಮತ್ತು ಪ್ರಧಾನ ಮಂತ್ರಿಯವರ ಸಾವಿನ ಬಗ್ಗೆ ಡಿಸ್ಕಸ್ ಮಾಡುವಾಗ ಕಾಂಗ್ರೆಸ್ ಸ್ನೇಹಿತರು ಸಂತೋಷಪಡಬೇಕಾಗಿತ್ತು. ಇದರಲ್ಲಿ ಕೇವಲ ೭೫೦ ಪೇಜ್ ಮಾತ್ರ ಕೊಟ್ಟಿದ್ದಾರೆ. ಮಿಕ್ಕಿದ್ದು

XXX XXX XXX XXX

ಬಚ್ಚಿಟ್ಟಿದ್ದಾರೆ. ಇದು ದೇಶಕ್ಕೆ ತಿಳಿಯಬೇಕು ಎಂಬ ದೃಷ್ಟಿಯಿಂದ ಹೇಳಿದರೆ ಇವರು ಅಪೋಸ್ ಮಾಡುತ್ತಿದ್ದಾರೆ...

(ಗೊಂದಲ)

ಅಧ್ಯಕ್ಷರು.—ನತಿಂಗ್ ವಿಲ್ ಬಿ ಗೋ ಆನ್ ರೆಕಾರ್ಡ್ ಎಂದು ಹೇಳಿದ್ದೇನೆ. ಶ್ರೀ ಯಡಿಯೂರಪ್ಪನವರನ್ನು ಕರೆದಿದ್ದೇನೆ, ಅವರನ್ನು ಕರೆದ ಮೇಲೆ ಬೇರೆಯವರ ಯಾರು ನಿಂತು ಮಾತನಾಡಿದರು ಅದೆಲ್ಲವನ್ನು ಎಕ್ಸ್‌ಫಂಜ್ ಮಾಡುತ್ತೇನೆ.

(ಗೊಂದಲ)

ಶ್ರೀ ಬಿ. ಎಸ್. ಯಡಿಯೂರಪ್ಪ.—ಮಾನ್ಯ ಅಧ್ಯಕ್ಷರೆ, ನಾವು ಈ ಠಕ್ಕರ್ ಆಯೋಗದ ವರದಿ ಬಗ್ಗೆ ಚರ್ಚೆ ಮಾಡುವಂತಹ ಉದ್ದೇಶ ಏನೆಂದರೆ.........

(ಗೊಂದಲ)

ಅಧ್ಯಕ್ಷರು.—ಆಪಾದಾರದ್ದು ಆಡಿದ್ದರೆ, I will expunge it.

ಅಧ್ಯಕ್ಷರು.—ನಾನು ಯಡಿಯೂರಪ್ಪನವರನ್ನು ಕರೆದಿದ್ದೇನೆ ಅವರು ಮಾತನಾಡಬೇಕು. ಅವರು ಬಿಟ್ಟು ಯಾರು ಮಾತನಾಡಿದರೂ it will not be taken to record.

ಅಧ್ಯಕ್ಷರು.—ಯಾರು ಮಾತನಾಡಿದರೂ ರೆಕಾರ್ಡಿಗೆ ಹೋಗುವುದಿಲ್ಲ.

(ಗೊಂದಲ)

ಅಧ್ಯಕ್ಷರು.—ಈಗ ಮಾನ್ಯ ಸದಸ್ಯರಾದ ಯಡಿಯೂರಪ್ಪನವರನ್ನು ಬಿಟ್ಟು ಬೇರೆ ಸದಸ್ಯರು ಯಾರು ಏನು ಹೇಳಿದರು ಅದು ರೆಕಾರ್ಡ್‌ಗೆ ಹೋಗುವುದಿಲ್ಲ.

(ಗೊಂದಲ)

ಶ್ರೀ ಬಿ. ಎಸ್. ಯಡಿಯೂರಪ್ಪ.—ಅಧ್ಯಕ್ಷರೆ, ಇದರ ಬಗ್ಗೆ ಒಂದೆರಡು ಮಾತುಗಳನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಠಕ್ಕರ್ ಆಯೋಗದ ವರದಿ ಬಗ್ಗೆ ಇಲ್ಲಿ ಅಡ್ಜರ್ನ್‌ಮೆಂಟ್ ಮೋಷನ್ನು ಮೂವ್ ಮಾಡಿ ಪ್ರಿಲಿಮಿನರಿ ಸಬ್‌ಮಿಷನ್‌ಗೆ ತಾವು ಅವಕಾಶ ಮಾಡಿಕೊಡಬೇಕೆಂದು ನಾನು ಮಾನ್ ಕೃಷ್ಣನ್‌ರವರು, ಮಾನ್ಯ ವೆಂಕಟರಾಮಯ್ಯನವರು ವಿನಂತಿ ಮಾಡುತ್ತಿದ್ದೇವೆ. ಇದರ ಉದ್ದೇಶ ವೇನೆಂದರೆ ನಾವು ಯಾವೂ ರಾಜಕೀಯ ದೃಷ್ಟಿಕೋನ ಇಟ್ಟುಕೊಂಡು ಇದರ ಬಗ್ಗೆ ಮಾತನಾಡುವುದಿಲ್ಲ ನಾವೆಲ್ಲಾ ಪ್ರಿಲಿಮಿನರಿ ಸಬ್‌ಮಿಷನ್ ಮಾಡಿದ ಮೇಲೆ ಚರ್ಚೆ ಮಾಡಲಿಕ್ಕೆ ಅವಕಾಶವಿಲ್ಲವೆಂದು ತಾವು ರೂಲಿಂಗ್ ಕೊಡುವುದಾವರೆ ನಾವು ಮುಂದುವರಿಸುವುದಕ್ಕೆ ಇಷ್ಟಪಡುವುದಿಲ್ಲ. ಈ ಒಂದು ಠಕ್ಕರ್ ಆಯೋಗದ ವರದಿಯನ್ನು ಪಾರ್ಲಿಮೆಂಟ್‌ನಲ್ಲಿ ಇಟ್ಟಮೇಲೆ ದೇಶದ ಪ್ರತಿಯೊಬ್ಬರು ಇದರ ಬಗ್ಗೆ ಚಿಂತನೆ ಮಾಡಬೇಕಾಗುತ್ತದೆ. ಇಂತಹ ಸಂದರ್ಭದಲ್ಲಿ ಜನತಾ ಪ್ರತಿನಿಧಿಗಳಾಗಿ ಇಲ್ಲಿ ಬಂದು.........

ಶ್ರೀ ಬಿ. ಎಸ್. ಯಡಿಯೂರಪ್ಪ.—ಅಧ್ಯಕ್ಷರೆ. ಈ ಸದನದಲ್ಲಿ ಸರ್ವಾನುಮತದಿಂದ ಒಂದು ರೆಸಲ್ಯೂಷನ್ನ ಮಾಡಿ ಕಳುಹಿಸಬೇಕು ಎನ್ನುವಂತಹ ಹಿನ್ನೆಲೆಯಲ್ಲಿ ಇದನ್ನು ಪ್ರಸ್ತಾಪ ಮಾಡುತ್ತಿದ್ದೇವೆ. ನಮ್ಮ ಉದ್ದೇಶ ಏನ್ನು, ಈ ಒಂದು ಠಕ್ಕರ್ ಆಯೋಗದ ವರದಿ ಇಡೀ ದೇಶದಲ್ಲಿ ಚರ್ಚೆ ಯಾಗುತ್ತಿರುವ ಸಂದರ್ಭದಲ್ಲಿ.........

(ಗೊಂದಲ)

ಶ್ರೀ ಬಿ. ಎಸ್. ಯಡಿಯೂರಪ್ಪ.—ಅಧ್ಯಕ್ಷರೆ, ಒಂದು ಸಾರಿ ಪಾರ್ಲಿಮೆಂಟಿನಲ್ಲಿ ಈ ವರದಿಯನ್ನು ಇಟ್ಟಮೇಲೆ ಇವೊತ್ತು ನಮ್ಮ ದೇಶದ ಎಲ್ಲಾ ಅಸೆಂಬ್ಲಿಗಳಲ್ಲಿ ಚರ್ಚೆ ಮಾಡತಕ್ಕ ಅವಕಾಶ ನಮಗೆ ಬರುತ್ತದೆ. ಅಧ್ಯಕ್ಷರೆ. ತಾವು ಪ್ರಿಲಿಮಿನರಿ ಸಬ್‌ಮಿಷನ್ ಕೇಳಿದಮೇಲೆ ಈ ಅಡ್ಜರ್ನ್‌ಮೆಂಟ್ ಮೋಷನ್ ಆ ವ್ಯಾಪ್ತಿಗೆ ಬರುವುದಿಲ್ಲ ಎಂದರೆ ನಾವು ತಪ್ಪು ನಿರ್ಣಯಕ್ಕೆ ತಲೆ ಭಾಗಲಿಕ್ಕೆ ಸಿದ್ಧರಿದ್ದೇವೆ...

(ಗೊಂದಲ)

ಅಧ್ಯಕ್ಷರು.—ಮಾನ್ಯ ಯಡಿಯೂರಪ್ಪನವರು ಏನು ಹೇಳುತ್ತಾರೆ ಕೇಳೋಣ ದಯಮಾಡಿ ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಬಿ. ಎಸ್. ಯಡಿಯೂರಪ್ಪ.—ಅಧ್ಯಕ್ಷರೆ, ಇವೊತ್ತು ದೇಶದ ಒಂದು ಉನ್ನತ ಅಧಿಕಾರಿಗಳ ಕೈವಾಡವಿದೆ ಎಂದು ವರದಿಯಲ್ಲಿ ಬಂದಿರುವುದರಿಂದ ಈ ದೇಶದ ಭದ್ರತೆಗೆ ಧಕ್ಕೆ ಬರುತ್ತದೆ. ಈ ಒಂದು ದೃಷ್ಟಿಯಿಂದ ಇಲ್ಲಿ ಪ್ರಿಲಿಮಿನರಿ ಸಬ್‌ಮಿಷನ್ ಹೇಳಲಿಕ್ಕೆ ಪ್ರಯತ್ನ ಮಾಡುತ್ತಿದ್ದೇವೆ. ಕಾಂಗ್ರೆಸ್ ಸ್ನೇಹಿತರೆ ಇದರ ಬಗ್ಗೆ ಮುಂದೆ ಬಂದು ಚರ್ಚೆ ಮಾಡಲಿಕ್ಕೆ ಅವಕಾಶ ಮಾಡಿಕೊಡಬೇಕಾಗಿತ್ತು.

(ಗೊಂದಲ)

ಅಧ್ಯಕ್ಷರು.—ಈಗ ನಾನು ಯಡಿಯೂರಪ್ಪನವರನ್ನು ಮಾತನಾಡಲಿಕ್ಕೆ ಕರೆದಿದ್ದೇನೆ. ಅವರು ಏನು ಹೇಳುತ್ತಾರೆ ಕೇಳೋಣ. ಇತರೆ ಸದಸ್ಯರು ದಯಮಾಡಿ ಕುಳಿತುಕೊಳ್ಳಬೇಕು.

ಶ್ರೀ ಎಂ ಮಲ್ಲಿಕಾರ್ಜುನ ಖರ್ಗೆ.—ಅಧ್ಯಕ್ಷರೆ. ಅವರು ಪಾಯಿಂಟ್ ಆಫ್ ಆರ್ಡರ್ ರೈಸ್ ಮಾಡಿದ ಮೇಲೆ ಅವರು ಏನಾದರೂ ಹೇಳಿದ್ದರೆ ಒಪ್ಪಿಕೊಳ್ಳುತ್ತಿದ್ದೆವು. ಅವರು ಎಲ್ಲಾ ವಿಷಯವನ್ನು ಸಂಪೂರ್ಣವಾಗಿ ವಿವರಣೆ ಮಾಡಿ ಹೇಳುತ್ತಿದ್ದಾರೆ. ಯಾವ ಯಾವ ಅಧಿಕಾರಿಗಳು ಇನ್‌ವಾಲ್ವ್ ಆಗಿದ್ದಾರೆ ಎಲ್ಲವನ್ನು ಹೇಳುತ್ತಿದ್ದಾರೆ.

(ಗೊಂದಲ)

ಶ್ರೀ ಬಿ. ಎಸ್. ಯಡಿಯೂರಪ್ಪ.—ಎಲ್ಲಾ ಹೇಳುತ್ತಿಲ್ಲ. ಅಲ್ಲಿ ಅಂತಹವರಿಗೆ ಸೆಕ್ಯೂರಿಟಿ ಇಲ್ಲ ಅಂದರೆ ಈ ದೇಶದ ಜನತೆಗೆ ಸೆಕ್ಯೂರಿಟಿ ಇದೆಯೇ ? ಇಂದಿರಾ ಗಾಂಧಿಯವರ ಕೊಲೆಯ ಹಿನ್ನೆಲೆಯಲ್ಲಿ ಯಾರ ಕೈವಾಡವಿದೆ ಎಂದು ತಿಳಿಯಬೇಕಾಗುತ್ತದೆ. ಆದ್ದರಿಂದ ಠಕ್ಕರ್ ಆಯೋಗದ ವರದಿ ಬಗ್ಗೆ ಚರ್ಚೆ ಮಾಡಲಿಕ್ಕೆ ಅವಕಾಶ ಮಾಡಿಕೊಡಬೇಕು. ಅದರ ಬಗ್ಗೆ ಸರ್ವಾನುಮತದಿಂದ ರೆಸಲ್ಯೂಷನ್ ಮಾಡಿ ಕಳುಹಿಸಿಕೊಡಬೇಕು. ಪ್ರಧಾನಿಯವರ ಸುತ್ತಮುತ್ತ ಇರತಕ್ಕ ಅಧಿಕಾರಿಗಳ ಕೈವಾಡ ಇದೆ ಎಂಬ ಸಂಶಯ ನಮಗೆ ಬರುತ್ತಿದೆ. ಆದ್ದರಿಂದ ಪ್ರಿಲಿಮಿನರಿ ಸಬ್‌ಮಿಷನ್ ಮಾಡಲಿಕ್ಕೆ ತಾವು ದಯಮಾಡಿ ನಮಗೆ ಅವಕಾಶ ಮಾಡಿಕೊಡಬೇಕು ಅವಕಾಶಕೊಡಲಿಕ್ಕೆ ತಮಗೆ ಅಧಿಕಾರ ಇದೆ ಇದು ಆದ ಮೇಲೆ ನಾವು ಒಟ್ಟಿಗೆ ಒಂದು ರೆಸಲ್ಯೂಷನ್ ಮಾಡಿ ಇದರ ಬಗ್ಗೆ ತನಿಖೆ ಮಾಡಲಿಕ್ಕೆ ಕೇಂದ್ರ ಸರ್ಕಾರಕ್ಕೆ ಒತ್ತಾಯ ಮಾಡಬೇಕಾಗಿದೆ ಆದ್ದರಿಂದ ಇದರ ಬಗ್ಗೆ ಪ್ರಿಲಿಮಿನರಿ ಸಬ್‌ಮಿಷನ್‌ಗೆ ಅವಕಾಶ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ

* (ಅಧ್ಯಕ್ಷರ ಆದೇಶದ ಮೇರೆಗೆ ರೆಕಾರ್ಡ್ ಮಾಡಲಿಲ್ಲ)

ಶ್ರೀ ವೇದಾಂತ ಹೆಮ್ಮಿಗೆ.—ಸ್ವಾಮಿ. ಇದು ಯಾವರೀತಿಯ ನಾಟಕ ಎಂಬುದು ನಮಗೆ ಗೊತ್ತಾಗುತ್ತಿಲ್ಲ.........

ಅಧ್ಯಕ್ಷರು.—ನೀವು ಕುಳಿತುಕೊಳ್ಳಿ ಈಗ ಮೊದಲು ಯಡಿಯೂರಪ್ಪನವರು, ನಂತರ ಮಾನ್ಯ ನಾರಾಯಣರಾವ್‌ರವರು ನಂತರ ರಘುಪತಿಯವರು ಮಾತನಾಡುವುದಕ್ಕೆ ಕರೆದಿದ್ದೇನೆ......

(ಗೊಂದಲ)

ಅಧ್ಯಕ್ಷರು.—ನೀವು ಏನು ಮಾತನಾಡಿದರೂ ಅದು ರೆಕಾರ್ಡ್‌ಗೆ ಹೋಗುವುದಿಲ್ಲ ಎಕ್ಸೆಪ್ಟ್ ಯಡಿಯೂರಪ್ಪ, ಇನ್ನು ಯಾರು ಏನು ಮಾತನಾಡಿದರೂ ಅದು ರೆಕಾರ್ಡ್‌ಗೆ ಹೋಗುವುದಿಲ್ಲ

(ಗೊಂದಲ)

ಶ್ರೀ ಬಿ ಎಸ್ ಯಡಿಯೂರಪ್ಪ.—ಇದರಲ್ಲಿ ಇನ್ನೂ ಯಾರ ಯಾರ ದೊಡ್ಡವರ ಕೈವಾದ ಇದೆ ಎಂಬುದು ಗೊತ್ತಾಗುತ್ತದೆ ಕಾಂಗ್ರೆಸ್‌ನವರ ಹುಳುಕು ಹೊರಗೆ ಬರುತ್ತದೆಂದು ಅವರಿಗೆ ಭಯ ಇದೆ......

(ಗೊಂದಲ)

ಅಧ್ಯಕ್ಷರು.—ನಾರಾಯಣರಾವ್‌ರವರೇ ತಾವು ಮಾತನಾಡಿ. ತಮ್ಮ ನಂತರ ರಘುಪತಿಯವರು ಮಾತನಾಡುತ್ತಾರೆ.

† ಶ್ರೀ ಎಂ. ಎಸ್. ನಾರಾಯಣರಾವ್ (ಗಾಂಧಿನಗರ).—ಸನ್ಮಾನ್ಯ ಸಭಾಧ್ಯಕ್ಷರೇ. ನಿನ್ನೆಯ ದಿವಸ ತಮ್ಮ ಕೊಠಡಿಯಲ್ಲಿ ಸುಮಾರು 1 1/2 ಗಂಟೆಗಳ ಕಾಲ ಚರ್ಚೆಯಾದಮೇಲೆ ಈ ವಿಷಯಕ್ಕೆ ಅಂತಿಮವಾಗಿ ಒಂದು ತೆರೆಯನ್ನು ಎಳೆದಿದ್ದೀರೆಂದು ನಾನು ಅಂದುಕೊಂಡಿದ್ದೆ ಆದರೆ ಈ ವಿಷಯ ವನ್ನು ಪುನ: ಈಗ ಇಲ್ಲಿ ಎತ್ತಿರುವುದನ್ನು ನೋಡಿದರೆ ನನಗೆ ಬಹಳ ಆಶ್ಚರ್ಯವಾಗುತ್ತದೆ ಈಗ ಇದನ್ನು ಯಾವ ಉದ್ದೇಶದಿಂದ ಇಲ್ಲಿ ಎತ್ತಿದ್ದಾರೆ ಎನ್ನುವುದು ನನಗೆ ಅರ್ಥವಾಗುತ್ತಿಲ್ಲ ತಾವು ಈಗ ಹೇಳಿರುವಂತೆ ಮಾನ್ಯ ಸದಸ್ಯರಾದ ಕೃಷ್ಣನ್‌ರವರೂ, ಮಾನ್ಯ ಜೆ. ಹೆಚ್. ಪಟೇಲ್‌ರವರೂ ಏನು ಈ ವಿಷಯವನ್ನು ಇಲ್ಲಿ ಎತ್ತಿದ್ದಾರೆ......

(ಗೊಂದಲ)

ಅಧ್ಯಕ್ಷರು.—ಮಾನ್ಯ ನಾರಾಯಣಕುಮಾರ್‌ರವರಿಗೆ ಹೇಳಿದ್ದೇನೆ. ನಾರಾಯಣಕುಮಾರ್ ರವರೇ ನೀವು ಈ ರೀತಿ ಮಾತನಾಡುವುದು ಸರಿಯಲ್ಲ. ನಿಮ್ಮ ಮೇಲೆ ಆಕ್ಷನ್ ತೆಗೆದುಕೊಳ್ಳಬೇಕಾಗು ತ್ತದೆ ದು ಹೇಳಿದ್ದೇನೆ.

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಮಾನ್ಯ ರಮೇಶ್ ಕುಮಾರ್‌ರವರನ್ನು ಬೇರೆ ಕಡೆ ಕಳುಹಿಸಿದರೆ ಸರಿಹೋಗುತ್ತದೆ.

ಅಧ್ಯಕ್ಷರು.—ಅದೇರೀತಿ ನಿಮ್ಮ ಕಡೆಯವರಲ್ಲಿ ಕೆಲವರನ್ನು ಕಳುಹಿಸಿದರೆ ಸರಿಹೋಗುತ್ತದೆ.

ಶ್ರೀ ವೈ.ಕೆ. ರಾಮಯ್ಯ.—ಮಾನ್ಯ ಅಧ್ಯಕ್ಷರೇ......

(ಗೊಂದಲ)

ಮಹಾಸ್ವಾಮಿಯವರೇ ನಾನು ಮಾತನಾಡುತ್ತಿದ್ದೇನೆ, ನನಗೆ ಅವಕಾಶಕೊಡಿ.

ಅಧ್ಯಕ್ಷರು.—ನಾನು ನಿಮಗೆ ಮಾತನಾಡಲು ಅವಕಾಶವನ್ನು ಕೊಟ್ಟಾಗ ಕೇಳಬಹುದು.

ಅಧ್ಯಕ್ಷರು. ಮಾತನಾಡುತ್ತಿದ್ದೀರಿ ಅಂದರೆ ಅನುಮತಿ ತೆಗೆದುಕೊಂಡಿಲ್ಲ.

ಶ್ರೀ ವೈ.ಕೆ. ರಾಮಯ್ಯ.—ಪರ್ಮಿಷನ್ ಕೇಳುತ್ತಿದ್ದೇನೆ.

ಅಧ್ಯಕ್ಷರು.—ಪರ್ಮಿಷನ್ ಕೊಡಿ ಎಂದು ಕೇಳಿ. ನಿಮಗೂ ಅವಕಾಶ ಕೊಡುತ್ತೇನೆ, ಕುಳಿತು ಕೊಳ್ಳಿ. ನಾರಾಯಣರಾವ್.—ಅವರದ್ದು ಮುಗಿಯಲಿ.

ಶ್ರೀ ವೈ.ಕೆ. ರಾಮಯ್ಯ.—ಸದನದಲ್ಲಿ ಸದಸ್ಯರ ನಡವಳಿಕೆಗಳನ್ನು ನಿಯಂತ್ರಿಸುವುದಕ್ಕೆ ನೀವು ಶಕ್ತರಲ್ಲವೇ ? ಅವರು ಲಘುವಾಗಿ ಮಾತನಾಡಿದರೆ ನಾವು ಲಘುವಾಗಿ ಮಾತನಾಡುತ್ತೇವೆ.

ಅಧ್ಯಕ್ಷರು.—ಯಾರೂ ಕೂಡ ಲಘುವಾಗಿ ಮಾತನಾಡತಕ್ಕದ್ದಲ್ಲ. ಅದು ಖಂಡನೀಯ........

ಶ್ರೀ ವೈ.ಕೆ. ರಾಮಯ್ಯ.—ಅವರು ಲಘುವಾಗಿ ನಡೆದುಕೊಂಡರೆ ನಾವು ಕೂಡ ಲಘುವಾಗಿ ನಡೆದುಕೊಳ್ಳಬೇಕಾಗುತ್ತದೆ. ಅವರು ಗಂಭೀರವಾಗಿ........

(ಗೊಂದಲ)

---

† ಈ ಚಿಹ್ನೆ ಮಾನ್ಯ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ಅಧ್ಯಕ್ಷರು.—ಅವರ ಮಾತಿಗೆ ನೀವು ಹೇಳುವುದಕ್ಕೆ ಹೋಗಬೇಡಿ.

ಶ್ರೀ ವೈ.ಕೆ. ರಾಮಯ್ಯ.—ಅವರು ಹೀಗೆ ಮಾಡುವುದಾದರೆ ಮುಖ್ಯಮಂತ್ರಿಗಳು ಮಾತನಾಡುವಾಗ ತೊಂದರೆ ಕೊಡಬೇಕಾಗುತ್ತದೆ. ಅವರಿಗೆ ಗಂಭೀರವಾಗಿ ನಡೆದುಕೊಳ್ಳುವುದಕ್ಕೆ ಹೇಳಿ. ನಾವು ಗಂಭೀರವಾಗಿ ನಡೆದುಕೊಳ್ಳುತ್ತೇವೆ.

(ಗೊಂದಲ)

ಶ್ರೀ ಎಂ.ಪಿ. ಪ್ರಕಾಶ್.—ಆ ಮಾತನ್ನು ವಾಪಸ್ಸು ತೆಗೆದುಕೊಳ್ಳಿ.

(ಗೊಂದಲ)

ಅಧ್ಯಕ್ಷರು.—ಯಾರು ಏನು ಮಾತನಾಡಿದರೂ ರೆಕಾರ್ಡಿಗೆ ಹೋಗುವುದಿಲ್ಲ. ಮೊದಲು ನಾರಾಯಣರಾವ್ ಅವರದ್ದು ಮುಗಿಯಲಿ.

(ಗೊಂದಲ)

ಶ್ರೀ ವೀರಣ್ಣ.—ಕಾನೂನು ಪ್ರಕಾರ ಎಲ್ಲರೂ ಮಾತನಾಡಬೇಕು. ಯಾರೂ ಮಾತನಾಡ ಬಾರದು ಎಂದು ಹೇಳಬೇಕಾಗಿಲ್ಲ. ಅಧ್ಯಕ್ಷರು ಹೇಳಿದರೆ ಕೇಳಬೇಕೇ ಹೊರತು ಬೇರೆಯವರು ಹೆದರಿಸಿದರೆ ಹೆದರುವುದಕ್ಕೆ ತಯಾರಿಲ್ಲ. ಮುಖ್ಯಮಂತ್ರಿಗಳು ಮಾತನಾಡುವಾಗ ಗಲಾಟೆ ಮಾಡು ತ್ತೇವೆಂದರೆ, ನಾವು ಗಲಾಟೆ ಮಾಡಬೇಕಾಗುತ್ತದೆ.

ಶ್ರೀ ವೈ.ಕೆ. ರಾಮಯ್ಯ.—ಅವರು ತೊಂದರೆ ಕೊಟ್ಟರೆ ತಾವು ತೊಂದರೆ ಕೊಡುತ್ತೇವೆ.

(ಗೊಂದಲ)

ಅಧ್ಯಕ್ಷರು.—ಯಾರು ಏನು ಮಾತನಾಡಿದರೂ ರೆಕಾರ್ಡಿಗೆ ಹೋಗುವುದಿಲ್ಲ. ಈಗ ನಾರಾಯಣ ರಾವ್ ಅವರನ್ನು ಕರೆದಿದ್ದೇನೆ. ಅವರದ್ದು ಮುಗಿಯಲಿ.

ಶ್ರೀ ಎಂ.ಪಿ. ಪ್ರಕಾಶ್.—ಬೇರೆಯವರು ಮಾತನಾಡುವ ಸಂದರ್ಭದಲ್ಲಿ ತೊಂದರೆ ಮಾಡ ಬಾರದು, ಗಲಾಟೆ ಮಾಡಬಾರದು ಎಂಬುದನ್ನು ಒಪ್ಪುತ್ತೇನೆ. ಸಭಾ ನಿಯಮಾವಳಿ ಪ್ರಕಾರ ನಡೆದು ಕೊಳ್ಳತಕ್ಕದ್ದು ನಮ್ಮ ಜವಾಬ್ದಾರಿ. ಆ ಜವಾಬ್ದಾರಿಯನ್ನು ಗಮನದಲ್ಲಿಟ್ಟುಕೊಂಡು ಮಾತನಾಡು ವಾಗ ನೀವು ಈ ರೀತಿ ವರ್ತಿಸುವುದಾದರೆ, ಮುಖ್ಯಮಂತ್ರಿಗಳು ಮಾತನಾಡುವಾಗ ಪ್ರತಿಭಟಿಸು ತ್ತೇವೆಂದರೆ......

(ಗೊಂದಲ)

SRI Y. K. RAMAIAH.—We will do it, we will do it .....

(ಗೊಂದಲ)

ಶ್ರೀ ಎಂ.ಪಿ. ಪ್ರಕಾಶ್.—ನೀವು ಹೆದರಿಕೆ ಹಾಕತಕ್ಕದ್ದು ಸರಿಯಲ್ಲ......

(ಗೊಂದಲ)

ಅಧ್ಯಕ್ಷರು.—ಏನೂ ರೆಕಾರ್ಡಿಗೆ ಹೋಗುವುದಿಲ್ಲ. ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ. ನಾರಾಯಣರಾವ್ ಅವರದ್ದು ಮುಗಿಯಲಿ.

(ಗೊಂದಲ)

ಅಧ್ಯಕ್ಷರು.—ಯಾರು ಏನು ಮಾತನಾಡಿದರೂ ರೆಕಾರ್ಡಿಗೆ ಹೋಗುವುದಿಲ್ಲ ತಾವು ಕುಳಿತು ಕೊಳ್ಳಿ ರಾಮಯ್ಯನವರೆ.

ಶ್ರೀ ಎಂ.ಎಸ್. ನಾರಾಯಣರಾವ್.—ಇದರ ಬಗ್ಗೆ ಪ್ರಿಲಿಮಿನರಿ ಸಬ್‌ಮಿಷನ್ ಮಾಡಬೇಕೇ ಬೇಡವೇ ಎಂಬ ವಿಚಾರದ ಬಗ್ಗೆ ನಮ್ಮ ಅಭಿಪ್ರಾಯಗಳನ್ನು ತಾವು ಕೇಳುತ್ತಿದ್ದೀರಿ. ಇದಕ್ಕೆ ಸಂಬಂಧ ಪಟ್ಟಂತೆ ನಾನು ಕೆಲವು ವಿಷಯಗಳನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ.

ಇಲ್ಲಿ ಮೊದಲನೆಯದಾಗಿ ಹೇಳುವುದಾದರೆ, ಇಲ್ಲಿ ೩ ತರಹದ ನಿಲುವಳಿ ಸೂಚನೆಗಳು ಬರಬಹುದು. ಒಂದನೆಯದು, ಸದನದ ಮುಂದೆ ಬಂದವುಗಳಲ್ಲಿ ಕೆಲವು ಯೋಗ್ಯ ವಿಷಯಗಳೆಂದು ಕಂಡು ಬರುತ್ತವೆ. ಅವುಗಳನ್ನು ನೇರವಾಗಿ ಚರ್ಚೆಗೆ ತೆಗೆದುಕೊಳ್ಳಬಹುದು. ಎರಡನೆಯದು ಎಂದರೆ ಕೆಲವು ವಿಷಯಗಳು ಈ ನಿಲುವಳಿ ಸೂಚನೆಯ ವ್ಯಾಪ್ತಿಯಲ್ಲಿ ಬರುತ್ತವೋ, ಇಲ್ಲವೋ ಎನ್ನುವ ಅನುಮಾನ ಬರುತ್ತದೆ. ಆ ರೀತಿ ಅನುಮಾನ ಬಂದಾಗ ಅವು ನಿಲುವಳಿ ಸೂಚನೆಗಳಾಗುತ್ತವೋ ಇಲ್ಲವೋ ಎಂಬುದನ್ನು ಸದನದ ಮುಂದಿಟ್ಟು ಮಾನ್ಯ ಸದಸ್ಯರ ಅಭಿಪ್ರಾಯಗಳನ್ನು ಕೇಳಿ ಅದನ್ನು ತೀರ್ಮಾನ ಮಾಡಬಹುದು. ಇದರ ಬಗ್ಗೆ ಕೌಲ್ ಅಂಡ್ ಶಕ್ದರ್‌ನಲ್ಲಿ adjournment motion must be talked out ಎಂದು ಇದೆ. ಆದರೆ ಕೆಲವರು ಮೂರನೆಯ ತರಹದ ಅಂದರೆ ನಿಲುವಳಿ ಸೂಚನೆಯ ವ್ಯಾಪ್ತಿಯಲ್ಲಿ ಬರದೇ ಇರತಕ್ಕ ವಿಷಯಗಳನ್ನು ಈ ಸದನದ ಮುಂದೆ ತರುವುದಕ್ಕೆ ಪ್ರಯತ್ನ ಮಾಡಬಹುದು. ಮೊನ್ನೆ ಮಾನ್ಯ ಸದಸ್ಯರಾದ ಶ್ರೀನಿವಾಸ್‌ರವರು ಬಹಳ ಚೆನ್ನಾಗಿ ಹೇಳಿದ್ದಾರೆ. ಈ ಎಲ್ಲಾ ವಿಷಯಗಳನ್ನೂ ಚರ್ಚೆ ಮಾಡತಕ್ಕ ಅಧಿಕಾರ ನಮ್ಮ ಈ ಸದನಕ್ಕಿದೆ ಆದರೆ ಈ ಸದನದ ವ್ಯಾಪ್ತಿಯನ್ನು ನಾವೇ ಕುಂಠಿತ ಮಾಡಿಕೊಂಡಿದ್ದೇವೆ. ಹೇಗೆಂದರೆ, ಕೆಲವು ನಿಯಮಾವಳಿಗಳನ್ನು ನಾವೇ ಮಾಡಿಕೊಂಡಿದ್ದೇವೆ. ಕೆಲವು ವಿಷಯಗಳು ಈ ಸದನದಲ್ಲಿ ಬಂದರೆ ಏನು ಮಾಡಬಹುದು, ಸದನದ ಹೊರಗೆ ಬಂದರೆ ಏನು ಮಾಡಬಹುದು ಎಂಬುದು ಇದೆ. ಇದು ನಮ್ಮ ನಿಯಮಾವಳಿಯ ಪ್ರಕಾರ ಚರ್ಚೆ ಮಾಡುವುದಕ್ಕೆ ಆಗದಿದ್ದರೆ......

ಶ್ರೀ ಜಿ. ನಾರಾಯಣಕುಮಾರ್.—ಪಾಕಿಸ್ತಾನ್.....

(ಗೊಂದಲ)

ಅಧ್ಯಕ್ಷರು.—ಅವರು ಏನು ಹೇಳುತ್ತಾರೆಂಬುದನ್ನು ಮೊದಲು ಕೇಳಿ......

(ಗೊಂದಲ)

ಶ್ರೀ ಎಂ. ಶಿವಣ್ಣ.—ಮಾನ್ಯ ಅಧ್ಯಕ್ಷರೇ, ನಾವು ಸಮಾಧಾನದಿಂದ ಕೇಳಿಕೊಂಡು ಕುಳಿತಿದ್ದೇವೆ. ನಾರಾಯಣಕುಮಾರ್‌ರವರು ಏತಕ್ಕೆ ಹಾಗೆ ಮಾತನಾಡುತ್ತಾರೆ ? ಅವರು ಸುಮ್ಮನೆ ಕುಳಿತು ಕೊಳ್ಳುವುದಕ್ಕೆ ಹೇಳಿ.

ಅಧ್ಯಕ್ಷರು.—ನಾರಾಯಣಕುಮಾರ್‌ರವರೇ, ನಾರಾಯಣರಾವ್‌ರವರು ಎಂ.ಎ.ಎಲ್.ಎಲ್.ಬಿ, ಮಾಡಿದ್ದಾರೆ, ಕಾನೂನು ತಜ್ಞರಾಗಿದ್ದಾರೆ, ಅವರು ಮಾತನಾಡಲಿ, ನೀವು ಸುಮ್ಮನೆ ಕುಳಿತುಕೊಳ್ಳಿ.

ಶ್ರೀ ಎಂ.ಎಸ್. ನಾರಾಯಣರಾವ್.—ಯಾವುದೇ ವಿಷಯ ನಿಯಮಾವಳಿ ಚೌಕಟ್ಟಿನಲ್ಲಿ ಚರ್ಚೆ ಮಾಡುವುದಕ್ಕೆ ಆಗದೇ ಹೋದರೆ ನಿಯಮಾವಳಿಯ ಪ್ರಕಾರ ಆ ನಿಯಮಾವಳಿಯಲ್ಲಿ ಅಮಾನತ್ತಿನಲ್ಲಿಟ್ಟು ಆ ವಿಷಯವನ್ನು ಚರ್ಚೆ ಮಾಡುವ ಅಧಿಕಾರ ಈ ಸದನಕ್ಕೆ ಇದೆ. Even you have got the Residuary powers ನೀವು ಯಾವುದಕ್ಕೆ ಬೇಕಾದರೂ ಚರ್ಚೆ ಮಾಡುವುದಕ್ಕೆ ಅವಕಾಶವನ್ನು ಮಾಡಿಕೊಡಬಹುದು. ಇಲ್ಲಿ ಯಾವಾಗ ನಿಯುಕ್ತವಾಗಿ ರೂಲ್ಸ್ ಪ್ರಕಾರ ಒಂದು ನಿಲುವನ್ನು ತಂದಿದ್ದಾರೆ ಅದು ಅಡ್ಜರ್ನ್‌ಮೆಂಟ್ ಮೋಷನ್ ಪ್ರಕಾರ ಆ ಅಡ್ಜರ್ನ್‌ಮೆಂಟ್ ವ್ಯಾಪ್ತಿಯಲ್ಲಿ ಬಾರದೇಹೋದರೆ ಖಂಡಿತವಾಗಿಯೂ ಅದನ್ನು ಚರ್ಚೆ ಮಾಡುವುದಕ್ಕಾಗುವುದಿಲ್ಲ. ಚರ್ಚೆ ಮಾಡು ವುದಕ್ಕೆ ಅವಕಾಶವನ್ನು ಮಾಡಿಕೊಟ್ಟರೆ ಅದು ಒಂದು ಬ್ಯಾಡ್ ಪ್ರಿಸಿಡೆಂಟ್ ಕ್ರಿಯೇಟ್ ಮಾಡಿ ದಂತಾಗುತ್ತದೆ. ಒಂದು ನೇರವಾಗಿಲ್ಲದ ಪದ್ಧತಿಯನ್ನು ತಾವು ತಂದಂತಾಗುತ್ತದೆ. ಆದ್ದರಿಂದ ಮತ್ತೆ ಅ ಬಹುದಾದಂಥ ಅನಾವಶ್ಯಕವಾದ ವಿಷಯ ಈ ಸಭೆಯ ಮುಂದೆ ಬರಬಹುದು. ಆದ್ದರಿಂದ ತಾವು ಒಂದು ನಿಯಮಾವಳಿಯ ಪ್ರಕಾರ ಅಡ್ಜರ್ನ್‌ಮೆಂಟ್ ಮೋಷನ್ ಪ್ರಕಾರ ಬಾರದೆ ಹೋಗು ವುದರಿಂದ ತಾವು ಇದನ್ನು......

SRI J.H. PATEL.—I would like to answer this question. What you are referring to is the discussion on Adjournment Motion What we are referring to is about preliminary submission whether to accept it. That is all we are referring.

ಶ್ರೀ ಎಂ.ಎಸ್. ಸತ್ಯನಾರಾಯಣರಾವ್. ಮಾನ್ಯ ಅಧ್ಯಕ್ಷರೇ ನಾನು ಈಗಾಗಲೇ ಹೇಳಿದ ಅದನ್ನು ಮಾನ್ಯ ಸಚಿವರಾದ ಜೆ.ಹೆಚ್. ಪಟೇಲ್‌ರವರು ಕೇಳಿಲ್ಲವೆಂದು ಕಾಣುತ್ತದೆ. ಮೂರು

ರೀತಿಯಲ್ಲಿ ನಿಲುವಳಿ ಸೂಚನೆಯಲ್ಲಿ ಬರಬಹುದೆಂದು ಹೇಳಿದೆ. ಮೊದಲನೆಯದು ಒಂದು ಒಳ್ಳೆಯ ವಿಷಯದ ನಿಯಮ ವ್ಯಾಪ್ತಿಯಲ್ಲಿ ಬರತಕ್ಕಂಥದ್ದು, ಎರಡನೆಯದು ಆ ವ್ಯಾಪ್ತಿಯಲ್ಲಿ ಬರದೆ ಅನುಮಾನಾಸ್ಪದವಾಗಿರತಕ್ಕಂಥದ್ದು, ಮೂರನೆಯದು ನಿಲುವಳಿ ಸೂಚನೆಯ ವ್ಯಾಪ್ತಿಗೆ ಬಂದಿರ ತಕ್ಕಂಥ ವಿಷಯಗಳು ಈ ಮೂರನೆ ಕ್ಯಾಟಗರಿಗೆ ಸೇರಿದಂಥ ವಿಷಯಗಳು ಬಂದಾಗ ತಾವು ಏನು ಮಾಡಬೇಕೆನ್ನುವುದನ್ನು ಈಗ ಚರ್ಚೆ ಮಾಡುತ್ತಿದ್ದೇವೆ. ಇದರಲ್ಲಿ ನಿಯಮಾವಳಿಯ ಪ್ರಕಾರ ವಿಷಯ ಬಂದಾಗ ಆಗ ಎಲ್ಲಾ ವಿಷಯಗಳನ್ನು ಹೇಳಬಹುದು. ನಿಲುವಳಿ ಸೂಚನೆಗೆ ಬರುವುದರಿಂದ ಅದನ್ನು ಕೇಳಬಹುದು. ಅದು ಬಾರದೇಹೋದರೆ ರಿಜೆಕ್ಟ್ ಮಾಡಬಹುದು. ಆದರೆ ನಿಲುವಳಿ ಸೂಚನೆಯ ವ್ಯಾಪ್ತಿಯಲ್ಲಿ ಬಾರದಿರತಕ್ಕಂಥ ವಿಷಯಗಳು ಬಂದಾಗ ಅದನ್ನು ಖಂಡಿತವಾಗಿಯೂ ಪ್ರಿಲಿಮಿನರಿ ಸಬ್‌ಮಿಷನ್ ಮೇಲೆ ಅವಕಾಶವನ್ನು ಮಾಡಿಕೊಡಬೇಕೋ ಬೇಡವೋ ಎನ್ನುವುದನ್ನು ಚರ್ಚೆ ಮಾಡ ಬೇಕಾದ ಅವಶ್ಯಕತೆ ಕೂಡಾ ಇರುವುದಿಲ್ಲ. ಇದು ನನ್ನ ಅಭಿಪ್ರಾಯ. ಮೂರನೆಯದರ ವ್ಯಾಪ್ತಿಗೆ ಎರಡನೇ ಕ್ಯಾಟಗರಿಯಲ್ಲಿರತಕ್ಕಂಥ ವಿಷಯಗಳ ಮೇಲೆ.

(ಗೊಂದಲ)

ಶ್ರೀ ಎಂ. ಎಸ್. ನಾರಾಯಣರಾವ್. – ಮಾನ್ಯ ಅಧ್ಯಕ್ಷರೇ ಅವರು ಬೇರೆಯವರ ಚಿತಾವಣೆ ಯಿಂದ ಏನು ಹೇಳಿದರೂ ಕೂಡ ನಾನು ಅವರಿಗೆ ಉತ್ತರ ಕೊಡಲಿಕ್ಕೆ ತಯಾರಾಗಿಲ್ಲ. ಉತ್ತರವನ್ನು ಕೊಡುವ ಸಾಹಸಕ್ಕೂ ಹೋಗುವುದಿಲ್ಲ. ಅವರು ಮಧ್ಯೆ ಮಧ್ಯೆ ಪ್ರವೇಶ ಗಿಡುತ್ತಿರುವುದರಿಂದಣೆ ನನ್ನಿಂದ ಅವರು ಉತ್ತರ ನಿರೀಕ್ಷೆ ಮಾಡುವ ಸಾಧ್ಯತೆ ಇಲ್ಲವೆಂದು ಹೇಳುತ್ತೇನೆ.

(ಗೊಂದಲ)

ಡಾ। ಎಚ್. ಎಲ್. ತಿಮ್ಮೇಗೌಡ. – ಮಾನ್ಯ ಅಧ್ಯಕ್ಷರೇ ತಾವು ಒಬ್ಬ ಮಾನ್ಯ ಸದಸ್ಯರಿಗೆ ಮಾತ ನಾಡುವುದಕ್ಕೆ ಅವಕಾಶವನ್ನು ಮಾಡಿಕೊಟ್ಟಾಗ ಮಧ್ಯೆ ಮಧ್ಯೆ ಒಂದು ಸಲ ಅಲ್ಲ ಹಲವಾರು ಸಾರಿ ಎದ್ದು ಈ ರೀತಿ ಮಾತನಾಡುವುದು ಸರಿಯಲ್ಲ. ನೀವು ಅವರನ್ನು ಪುಲ್‌ಅಪ್ ಮಾಡಿ. ನೀವು ಅವರನ್ನು ಪುಲ್‌ಅಪ್ ಮಾಡದಿದ್ದರೆ ಮಾನ್ಯ ಸದಸ್ಯರಿಗೆ ಮಾತನಾಡಲು ಅವಕಾಶವಾಗುವುದಿಲ್ಲ.

೧.೦೦ ಪಿ. ಎಂ.

ಶ್ರೀ ಎಂ. ಎಸ್. ನಾರಯಣರಾವ್. – ಮಾನ್ಯ ಅಧ್ಯಕ್ಷರೆ, ಸುಮಾರು ೧೧ ಗಂಟೆಯಿಂದ ಎರಡು ಗಂಟೆಗಳ ಕಾಲ ಈ ಸಭೆಯಲ್ಲಿ ಅನೇಕ ನಡವಳಿಕೆಗಳು ನಡೆಯುತ್ತಿವೆ. ಆದರೆ ನಮ್ಮ ಪಕ್ಷದ ಸದಸ್ಯರು ಒಂದು ಮಾತೂ ಆಡಲಿಲ್ಲ. ಯಾರು ಏನು ಮಾತನಾಡಿದರೂ ಚಕಾರ ಏನೂ ಎತ್ತಲಿಲ್ಲ. ಆದ್ದರಿಂದ ಈಗ ನಾವು ಮಾತನಾಡುವಾಗ ಗದ್ದಲ ಮಾಡುವುದು ಸರಿಯಲ್ಲ. ಎಂದು ಹೇಳುತ್ತೇನೆ.

ಅಧ್ಯಕ್ಷರು. – ನಾರಯಣರಾವ್‌ಅವರೇ, ನೀವು ದೊಡ್ಡ ಮನಸ್ಸು ಮಾಡಿ. ನಾರಯಣಕುಮಾರ್ ಅವರು ಯಾವಾಗಲೂ ಹಾಗೆ ಮಾಡುವವರು,

(ಗೊಂದಲ)

SRI S. BANGARAPPA You are respensible for all these things. Suspend him...

ಅಧ್ಯಕ್ಷರು. – ಸಭೆ ನಡೆಯುವುದಕ್ಕೆ ಅಡತಡೆ ಮಾಡಿದರೆ ದಿವಸಕ್ಕೆ ೧೦ ಮಂದಿಯನ್ನು ಹೊರಗೆ ಹಾಕಬೇಕಾಗುತ್ತದೆ. ಈಗ ಇವರನ್ನೂ ಸುಧಾರಿಸಿಕೊಳ್ಳೋಣ. ಅವರನ್ನೂ ಸುಧಾರಿಸಿಕೊಳ್ಳೋಣ.

ಶ್ರೀ ಆರ್. ಎನ್. ನಾಯಕ್. – ತಪ್ಪು ಮಾಡಿದರೆ ಹೊರಗೆ ಹಾಕುವ ಶಕ್ತಿ ಇದೆಯಲ್ಲ ನಿಮಗೆ...

ಅಧ್ಯಕ್ಷರು. – ಅಂಥ ತಪ್ಪು ಅವರೂ ಮಾಡಿಲ್ಲ, ನೀವೂ ಮಾಡಿಲ್ಲ,

(ಗೊಂದಲ)

ಶ್ರೀ ಬಿ. ಎ. ಜೀವಿಜಯ. – ಈ ವರದಿ ಬಗ್ಗೆ ಚರ್ಚೆ ತಪ್ಪಿಸುವುದಕ್ಕೆ ಇದೆಲ್ಲಾ ಮಾಡುತ್ತಿದ್ದಾರೆ.

SRI R. V. DESHPANDE. – Sri, we are prepared for a detailed

discussion. Technically there was no necessity for the Government to lay the Report on the Table of the House. If we are really afraid of a discussion, we would not have laid it on the Table of the House. Government orders so many enquiries and it is not necessary for the Government to lay all the reports...

(ಗೊಂದಲ)

ಶ್ರೀ ಕೆ. ಎಚ್. ಶ್ರೀನಿವಾಸ್.—ಚರ್ಚೆ ಆಗಬಾರದು ಎಂದು ತಡೆದಿರುವುದು ಗೊತ್ತಾಗುವುದಿಲ್ಲವೇ ? ನಾಚಿಕೆಯಾಗಬೇಕು ನಿಮಗೆ.

ಶ್ರೀ ಕೆ. ಮಲ್ಲಪ್ಪ.—ಇದೆಲ್ಲಾ ಹಿಂದಿನ ಸರ್ಕಾರದ ಪ್ರಸಾರವೇ ಇರುವುದು. ನಮ್ಮದೇನೂ ಇಲ್ಲ ಇದರಲ್ಲಿ

(ಗೊಂದಲ)

ಶ್ರೀ ಜಿ. ಎಚ್. ಪಟೇಲ್.—ಮಾನ್ಯ ಅಧ್ಯಕ್ಷರೆ, ಶ್ರೀನಿವಾಸ್ ಅವರು ನಾಚಿಕೆಯಾಗಬೇಕು ನಿಮಗೆ ಎಂದು ಹೇಳಿದರು. ನಾಚಿಕೆ ಎಂದರೆ ಏನು ಸ್ವಾಮಿ ?

ಶ್ರೀ ಎಂ. ಎಸ್. ನಾರಯಣ ರಾವ್.—ನಾನು ತಮಗೆ ಬಹಳ ಆಭಾರಿಯಾಗಿದ್ದೇನೆ.

ಅಧ್ಯಕ್ಷರು.—ನೀವು ಬೇಗ ಮುಗಿಸಿ.

ಶ್ರೀ ಎಂ. ಎಸ್. ನಾರಯಣ ರಾವ್.—ನಾನು ಮುಗಿಸುತ್ತಿದ್ದೇನೆ. ಆದರೆ ಅವಕಾಶ ಕೊಡುತ್ತಿಲ್ಲ. ನಾನು ತಮಗೆ ಆಭಾರಿಯಾಗಿದ್ದೇನೆ. ತಾವು ನಾರಯಣ ಕುಮಾರ್ ಅವರ ಬಗ್ಗೆ ಏನು ಸರ್ಟಿಫಿಕೇಟ್ ಕೊಟ್ಟಿದ್ದೀರಿ ಅದು ನಮಗೆ ಸಾಕು. ತಮ್ಮ ಸರ್ಟಿಫಿಕೇಟ್‌ನ್ನು ಅವರು ಇಟ್ಟುಕೊಂಡಿರಲಿ. ನಾನು ಹೇಳುತ್ತಿದೆ ನಿಲುವಳಿ ಸೂಚನೆ ಕೊಟ್ಟಾಗ...

(ಗೊಂದಲ)

ಶ್ರೀ ಜಿ. ನಾರಯಣ ಕುಮಾರ್.—ಅಧ್ಯಕ್ಷರೇ...

ಅಧ್ಯಕ್ಷರು.—ಅದಕ್ಕೇ ನಿಮ್ಮಂಥವರನ್ನು ೧೦ ಸಾರಿ ಹೊರಗೆ ಹಾಕಬೇಕಾಗುತ್ತದೆ ಎಂದು ಹೇಳಿದ್ದದ್ದು

ಶ್ರೀ ಎಂ. ಎಸ್. ನಾರಯಣ ರಾವ್.—ನಿಲುವಳಿ ಸೂಚನೆ ಕೊಟ್ಟಿರುವಾಗ ಪ್ರಿಲಿಮಿನರಿ ಸಬ್‌ಮಿಷನ್ ಮಾಡುವುದಕ್ಕೆ ಅವಕಾಶ ಕೊಡಬೇಕೇ ಬೇಡವೇ ಎಂಬ ಬಗ್ಗೆ ಮಾಡುತ್ತಿದ್ದೇವೆ. ನನ್ನ ಅಭಿಪ್ರಾಯದಲ್ಲಿ ಪ್ರಿಲಿಮಿನರಿ ಸಬ್‌ಮಿಷನ್ ಮಾಡಬೇಕೇ ಬೇಡವೇ ಎಂಬ ಬಗ್ಗೆ ಚರ್ಚೆ ಮಾಡುವ ಅವಶ್ಯಕತೆ ಬರುವುದಿಲ್ಲ. ಏಕೆಂದರೆ ನಿಲುವಳಿ ಸೂಚನೆ ವ್ಯಾಪ್ತಿಯಲ್ಲಿ...

(ಗೊಂದಲ)

ಶ್ರೀ ಎಂ. ಎಸ್. ನಾರಯಣ ರಾವ್.—ಪ್ರಿಲಿಮಿನರಿ ಸಬ್‌ಮಿಷನ್ ಮಾಡುವುದಕ್ಕೆ ಅವಕಾಶ ಕೊಡಬೇಕಾದ ಅವಶ್ಯಕತೆ ಬರುವುದಿಲ್ಲ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಅಧ್ಯಕ್ಷರು.—ನೀಲಕಂಠಪ್ಪನವರೇ, ನಿಮ್ಮ ಸೀಟಿಗೆ ಹೋಗಿರಿ. ಇದೇನು ಅಸೆಂಬ್ಲಿ ಅಂದುಕೊಂಡಿದ್ದೀರೋ ಏನೆಂದುಕೊಂಡಿದ್ದೀರಿ ?

ಶ್ರೀ ಎಂ. ಎಸ್. ನಾರಯಣ ರಾವ್.—ಅಡ್ಜರ್ನ್‌ಮೆಂಟ್ ಮೋಷನನ್ನು ಸರ್ಕಾರದವರು ಮೂವ್ ಮಾಡಿಲ್ಲ. ಮಾನ್ಯ ಸದಸ್ಯರಾದ ಕೃಷ್ಣನ್ ಅವರು, ವೆಂಕಟರಾಮಯ್ಯನವರು ಮತ್ತು ಯಡಿಯೂರಪ್ಪನವರು ಮೂವ್ ಮಾಡಿದ್ದಾರೆ. ಆದರೆ ಅವರಿಗೆ ಸಾಕಷ್ಟು ಬೆಂಬಲಿಸುತ್ತಿದ್ದಾರೆ. ಈ ಒಂದು ನಿಲುವಳಿ ಸೂಚನೆಯನ್ನು ಮಾನ್ಯ ಸದಸ್ಯರಾದ ಶ್ರೀಮಾನ್ ಕೃಷ್ಣನ್ ಅವರು, ಮಾನ್ಯ ಶ್ರೀ ವೆಂಕಟರಾಮಯ್ಯನವರು ಹಾಗೂ ಶ್ರೀ ಯಡಿಯೂರಪ್ಪನವರು ಕೊಟ್ಟಿದ್ದಾರೆ. ಇದಕ್ಕೆ ಬೆಂಬಲವನ್ನು ಸರ್ಕಾರದ ಕಡೆಯಿಂದ ಕೊಡುತ್ತಿದ್ದಾರೆ ಅದು ಏಕೆ ಎಂಬುದು ನನಗೆ ಗೊತ್ತಿಲ್ಲ. ಮುಕಾಲು ಪಾಲು ಇವರಿಗೆ ಮಾಡಿ ಮೂವ್ ಮಾಡಿದ್ದಾರೋ ಏನೂ ಎಂಬುದು ನನಗೆ ಅರ್ಥವಾಗುತ್ತಿಲ್ಲ.

(ಗೊಂದಲ)

ಶ್ರೀ ಎಂ. ಎಸ್. ಕೃಷ್ಣನ್.—ಮಾನ್ಯ ಸದಸ್ಯರು ಪ್ರಾಕ್ಸಿ ಎಂಬ ಪದವನ್ನು ಬಳಕೆ ಮಾಡಿದ್ದಾರೆ. ನಾವೂ ಅವರನ್ನು ಕಾಂಗ್ರೆಸ್‌ನ ಪ್ರಾಕ್ಸಿ ಎಂದು ಹೇಳಬೇಕಾಗುತ್ತದೆ. ಅದನ್ನು ಹೇಳಿದರೆ ನಿಮಗೆ ಹೇಗೆ ಆಗುತ್ತದೆ ?

(ಗೊಂದಲ)

ಮಾನ ಮರ್ಯಾದೆ ಇರತಕ್ಕ ಜನ ನಾವು.

(ಗೊಂದಲ)

ಶ್ರೀ ಆರ್. ವೆಂಕಟರಾಮಯ್ಯ.—ಮಾನ್ಯ ನಾರಯಣರಾವ್ ಅವರು ಏನೊಂದು ವರ್ಡನ್ನು ಹೇಳಿದ್ದಾರೆ, ಅದನ್ನು ವಿತ್‌ಡ್ರಾ ಮಾಡಬೇಕು. ನಾವು ಯಾರ ಪ್ರಾಕ್ಸಿಯಲ್ಲ. ಅವರು ಆ ರೀತಿ ಏಕೆ ಹೇಳಬೇಕು ?

(ಗೊಂದಲ)

ಅಧ್ಯಕ್ಷರು.—ಇಲ್ಲಿಗೆ ಚರ್ಚೆಯನ್ನು ಮುಕ್ತಾಯ ಮಾಡೋಣ. ಮೊಯಿಲಿ ಅವರೆ ನೀವು ಏನು ಹೇಳುತ್ತೀರೋ ಹೇಳಿ. ಆಮೇಲೆ ಕಾನೂನು ಮಂತ್ರಿಯವರು ಏನು ಹೇಳುತ್ತಾರೋ ಹೇಳಲಿ.

ಶ್ರೀ ಎಂ. ರಘುಪತಿ.—ಮಾನ್ಯ ಅಧ್ಯಕ್ಷರೇ .

(ಗೊಂದಲ)

ಅಧ್ಯಕ್ಷರು.—ಮೊಯಿಲ್ಲಿಯವರನ್ನು ಕಾನೂನೂ ಮಂತ್ರಿಗಳನ್ನು ಹಾಗೂ ಮಾನ್ಯ ಜೆ. ಎಚ್. ಪಟೇಲ್ ಅವರನ್ನು ಕೇಳಿದ ಮೇಲೆ ನಾನು ನನ್ನ ರೂಲಿಂಗ್‌ನ್ನು ಕೊಡುತ್ತೇನೆ.

(ಗೊಂದಲ)

ಶ್ರೀ ಆರ್. ವೆಂಕಟರಾಮಯ್ಯ.—ಮಾನ್ಯ ಅಧ್ಯಕ್ಷರೆ...

(ಗೊಂದಲ)

ಅಧ್ಯಕ್ಷರು.— ಮೊಯಿಲಿಯವರನ್ನು, ಜೆ. ಎಚ್. ಪಟೇಲ್‌ರವರನ್ನು ಹಾಗೂ ಕಾನೂನ ಮಂತ್ರಿಗಳನ್ನು ಕೇಳಿದ ಮೇಲೆ ನಾನು ನನ್ನ ರೂಲಿಂಗ್‌ನ್ನು ಕೊಡುತ್ತೇನೆ.

ಶ್ರೀ ಆರ್. ವೆಂಕಟರಾಮಯ್ಯ.—ಆ ವರ್ಡ್ ಏನು ಉಪಯೋಗಿಸಿದ್ದಾರೆ, ಅದನ್ನು ಅವರು ವಿತ್‌ಡ್ರಾ ಮಾಡಬೇಕು. ಪ್ರಾಕ್ಸಿ ಅನ್ನುವ ಪದವನ್ನು ಉಪಯೋಗಿಸಿದ್ದಾರೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ತಾವೂ ಕೂಡಾ ಪ್ರಾಕ್ಸಿ ಅಲ್ಲ ಎಂದು ಹೇಳಿಕೆ ಕೊಟ್ಟುಬಿಡಿ. ಇಲ್ಲ ಸಾಧನೆ ಮಾಡಿ ತೋರಿಸಿ.

(ಗೊಂದಲ)

ಅಧ್ಯಕ್ಷರು.—ಇಲ್ಲಿರುವಂತಹವರು ೪ ಕೋಟಿ ಜನರ ಪ್ರತಿನಿಧಿಗಳು. ಯಾರೂ ಪ್ರಾಕ್ಸಿಗಳಲ್ಲ. ಘನತೆ–ಗೌರವ ತರತಕ್ಕಂತಹದಲ್ಲ. ಅಂತಹ ಭಾಷೆಯನ್ನು ಆಡಬಾರದು.

ಶ್ರೀ ಆರ್. ವೆಂಕಟರಾಮಯ್ಯ.—ಅದನ್ನು ಎಕ್ಸ್‌ಪಂಜ್ ಮಾಡಿ.

MR. SPEAKER.—I will expunge such words.

(ಗೊಂದಲ)

ಶ್ರೀ ಎಂ. ಎಸ್. ನಾರಯಣ ರಾವ್.—ಮಾನ್ಯ ಅಧ್ಯಕ್ಷರೆ...

SRI M. S. KRISHAN.—It is not in good taste.

(Interruptions)

ಶ್ರೀ ಕೆ. ಬಿ. ಮಲ್ಲಪ್ಪ.—ಮಾನ್ಯ ಅಧ್ಯಕ್ಷರೆ,

ಶ್ರೀ ಬಿ. ಎಸ್. ಬಾಗಲಕೋಟೆ.—ಅವರು ಸೀನಿಯರ್ ಮೆಂಬರ್ ಇದ್ದಾರೆ. ಅವರಿಗೆ ಸ್ವಲ್ಪ ಅವಕಾಶ ಕೊಡಿ.

ಅಧ್ಯಕ್ಷರು.—ಇಲ್ಲ ಆಗುವುದಿಲ್ಲ, ಇಲ್ಲಿ ಮಾನ್ಯ ಮುಖ್ಯಮಂತ್ರಿಗಳೆ ಇದ್ದಾರೆ. ಜೆ. ಎಚ್. ಪಟೇಲ್‌ರವರು ಇದ್ದಾರೆ. ಕಾನೂನು ಮಂತ್ರಿಗಳು ಇದ್ದಾರೆ. ದಯಮಾಡಿ ಕುಳಿತುಕೊಳ್ಳಿ.

(ಗೊಂದಲ)

ಈ ರೀತಿ ಯಾದರೆ ಸಭೆಯನ್ನು ನಡೆಸುವುದು ಕಷ್ಟವಾಗುತ್ತದೆ. ನೀವು ಸಹಕಾರ ಕೊಡದಿದ್ದರೆ ನಾನು ಸಭೆಯನ್ನು ಮುಂದೂಡಬೇಕಾಗುತ್ತದೆಂದು ಸ್ಪಷ್ಟವಾಗಿ ಹೇಳುತ್ತಿದ್ದೇನೆ. ಇದರ ಬಗ್ಗೆ ನಾರಯಣರಾವ್ ಅವರು, ಮೊಯಿಲಿಯವರು, ಜೆ.ಎಚ್ ಪಟೇಲ್ ರವರು, ಕಾನೂನು ಮಂತ್ರಿಗಳು, ಹಾಗೂ ಮುಖ್ಯ ಮಂತ್ರಿಗಳು ಏನೂ ಹೇಳುತ್ತಾರೋ ಕೇಳೋಣ . ಇವತ್ತು ಮುಂಜಾನೆ 9 ಗಂಟೆಯಿಂದಲೂ ಇದೇ ಆಗಿದೆ. ತಾವೆಲ್ಲರೂ ಕುಳಿತುಕೊಳ್ಳಿ.

ಶ್ರೀ ಕೆ. ಬಿ. ಮಲ್ಲಪ್ಪ. —ನನ್ನಗೊಂದು ಪಾಯಿಂಟ್ ಆಫ್ ಆರ್ಡರ್.

ಅಧ್ಯಕ್ಷರು.—ಪಾಯಿಂಟ್ ಆಫ್ ಆರ್ಡರ್ ಈಗಾಗಲೇ ಕಾಂಗ್ರೆಸ್‌ನವರು 6 ಮಂದಿ ಮಾತ ನಾಡಿದ್ದಾರೆ. ಮಾನ್ಯ ಮೊಯಿಲಿಯವರು ಕೂಡಾ ಮಾತನಾಡುತ್ತಾರೆ.

(ಗೊಂದಲ)

ಶ್ರೀ ಕೆ. ಬಿ. ಮಲ್ಲಪ್ಪ.—ಮಾನ್ಯ ಅಧ್ಯಕ್ಷರೇ, ಠಕರ್ ಅಯೋಗದ ಬಗ್ಗೆ ಶ್ರೀಮಾನ್ ಎಂ.ಎಸ್.ಕೃಷ್ಣನ್ ಅವರು ವೆಂಕಟರಾಮಯ್ಯನವರು ಮತ್ತು ಯಡಿಯೂರಪ್ಪನವರು ನಿಳುವಳಿ ಸೂಚನೆ ಬಗ್ಗೆ ಒಂದು ನೋಟೀಸ್ ಕೊಟ್ಟು ಅದರ ಬಗ್ಗೆ ಚರ್ಚೆ ಮಾಡಬೇಕೆಂದು ಇರುವುದರಿಂದ ಪ್ರಿಲಿಮರಿ ಸಬ್‌ಮಿಷನ್‌ಗೆ ಅವಕಾಶ ಕೊಡಬೇಕೆಂದು ಹೇಳುವ ವಾದದಲ್ಲಿ ನಮ್ಮ ಈ ಬಗ್ಗೆ ನಾನಾ...

(ಗೊಂದಲ)

ಶ್ರೀ ಕೆ, ಬಿ. ಮಲ್ಲಪ್ಪ.—ಸ್ವಲ್ಪ ಸುಮ್ಮನೆ ಇರಿ ಸ್ವಾಮಿ ಈ ವಾದವನ್ನು ಮೂರು ವಿಧವಾಗಿ ವಿಗಂಡನೆ ಮಾಡಿದರು. ವಿಚಾರವನ್ನು ವಿಗಂಡನೆ ಮಾಡಿ ಇನು ನಮ್ಮ ಡಿಸ್ಕಷನ್‌ಗೆ ಬರುತ್ತದೆಯೇ ಅಥವಾ ಬಂದರೆ ಸದಸ್ಯರನ್ನು ಕೇಳಿ ಅದಕ್ಕೆ ಅಭಿಪ್ರಾಯವನ್ನು ತೆಗೆದುಕೊಂಡು ಅದಕ್ಕೆ ಅವಕಾಶ ಕೊಡತಕ್ಕದ್ದು ಎರಡು ವಿಷಯಗಳು ಹಾಗೂ ಹಾಗೆ ಬರತಕ್ಕದ್ದು ಇಲ್ಲ ಅಂತಹದ್ದನ್ನು ತರುವುದರ ಬಗ್ಗೆ ಪ್ರಿಲಿಮ್ನರಿ ಸಬ್‌ಮಿಷನ್ ಮಾಡುವುದಿಲ್ಲ ಎಂದು ಹೇಳುವ ಸಂದರ್ಭದಲ್ಲಿ ಅವರು ಮಾತನಾಡಿದರು. ಅವರು ಬಹಳ ಚೆನ್ನಾಗಿ ಮಾತನಾಡತಕ್ಕ ಸಂದರ್ಭದಲ್ಲಿ ಒಂದು ಏನು ಹೇಳಿದರು ಎಂದರೆ ಅವರು ವೆಂಕಟರಾಮಯ್ಯನವರು ಮತ್ತು ಕೃಷ್ಣನ್ ಹಾಗೂ ಯಡಿಯೂರಪ್ಪನವರು ಯಾರಿದ್ದಾರೆ ಅವರನ್ನು ಈ ನಮ್ಮ ಜನತಾ ದಳದವರು ಏನಾದರೂ ಪ್ರಾಕ್ಷಿಯಾಗಿ ಮಾಡಿದ್ದಾರೆಂದು ಏನು ಸೂಚಿಸಿದರು ಅವರು ಈ ಸದನ ಕಳೆದ ನಂತರ ಬಹುತೇಕ...

(ಗೊಂದಲ)

ಯಾವುದೇ ಸಂದರ್ಭದಲ್ಲಿ ಕೂಡಾ ನಾವು ಯಾವ ರೀತಿ ಇರಬೇಕು ಯಾವುದು ಒಳ್ಳೆಯದು ಹಾಗೂ ಕೆಟ್ಟದ್ದು ಎಂದು ಬಂದು ಮಾತನಾಡತಕ್ಕದ್ದು ಯೋಗ್ಯವಾಗಿರುತ್ತದೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

† ಶ್ರೀ ವೇದಾಂತ ಹೆಮ್ಮಿಗೆ.—ಮಾನ್ಯ ಅಧ್ಯಕ್ಷರೇ, ಸಾರ್ವಜನಿಕ ಮಹತ್ವಕ್ಕೆ ಸಂಬಂಧಪಟ್ಟ ವಿಷಯದ ಬಗ್ಗೆ ಏನು ನಿಲುವಳಿ ಸೂಚನೆಯನ್ನು ಈ ಸಭೆಯಲ್ಲಿ ತರಲಾಗಿದೆ ಇದು ಈ ಸದನದ ವ್ಯಾಪ್ತಿಗೆ ಬರುವುದಿಲ್ಲ. ಇದರ ಪ್ರಿಲಿಮ್ನರಿ ಸಬ್‌ಮಿಷನ್‌ಗೇ ಅವಕಾಶ ಕೊಡಬಾರದು ಎಂದು ಮಾನ್ಯ ಕೆ ಹೆಚ್. ಶ್ರೀನಿವಾಸ್ ಅವರು ಕ್ರಿಯಾಲೋಪವನ್ನು ಎತ್ತಿದ್ದಾರೆ, ಸಾರ್ವಜನಿಕ ಮಹತ್ವದ ವಿಷಯ ಎಂದರೆ ಬೆಂಗಳೂರಿಗೆ ಸೇರಿದ್ದೇ, ಕರ್ನಾಟಕಕ್ಕೆ ಸೇರಿದ್ದೇ ಅಥವಾ ಇಡೀ ದೇಶಕ್ಕೆ ಸೇರಿದ್ದೇ? ಸಾರ್ವಜನಿಕ ಮಹತ್ವದ್ದು ಎಂದರೆ......(ಗೊಂದಲ)......ಬರೀ ಕರ್ನಾಟಕದವರಿ ಸೇರಿದ್ದೇ, ಅಥವಾ

† ಈ ಚಿಹ್ನೆ ಮಾನ್ಯ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ಬೆಂಗಳೂರು ನಗರದವರಿಗೆ ಸೇರಿದ್ದೇ ಅಥವಾ ಇಡೀ ದೇಶಕ್ಕೆ ಸೇರಿದವರದ್ದೇ? ಇದು ಮೂಲಭೂತ ವಾದ ಪ್ರಶ್ನೆ. ಸಾರ್ವಜನಿಕ ಮಹತ್ವದ್ದು ಎಂದರೆ it pertaine to the integrity of the country and it pertains to the interest of the country. ಬಾಳಿಗಾರವರು ಅಧ್ಯಕ್ಷರಾಗಿದ್ದಾಗ ಚೈನಾದವರು ನಮ್ಮ ದೇಶದ ಮೇಲೆ ಆಕ್ರಮಣ ಮಾಡಿದಾಗ ಇದೇ ಸಮಯದಲ್ಲಿ ಈ ಸದನದಲ್ಲೂ ಒಂದು ನಿಲುವಳಿ ಸೂಚನೆಯನ್ನು ತಂದರು. ಯಾರು ಇಲ್ಲಿ ನಿಲುವಳಿ ಸೂಚನೆಯನ್ನು ತಂದಿದ್ದಾರೆ ಅವರಿಗೆ ಮಾತನಾಡಲಿಕ್ಕೆ ಅವಕಾಶ ಕೊಡುತ್ತೀರೋ ಅಥವಾ ಎಲ್ಲರಿಗೂ ಪ್ರಿಲಿಮಿನರಿ ಸಬ್‌ಮಿಷನ್ ಮಾಡಲಿಕ್ಕೆ ಅವಕಾಶ ಕೊಡುತ್ತೀರೋ? ಯಾರು ನಿಲುವಳಿ ಸೂಚನೆಯನ್ನು ತಂದಿದ್ದಾರೆ? So the point of order raised by MR. Srinivas is not in order. I request you to rule out that point of order.

ಶ್ರೀ ಎಂ. ಎಸ್. ನಾರಾಯಣರಾವ್.—ನಾನು ಇನ್ನೂ ನನ್ನ ಭಾಷಣವನ್ನು ಮುಗಿಸಿಲ್ಲ. ನಾನು ಈಗತಾನೇ ಹೇಳುತ್ತಿದ್ದೆ, ಈವೊಂದು ವಿಷಯವನ್ನು ಚರ್ಚೆ ಮಾಡಬಾರದೆಂದು ನಾನು ಹೇಳುತ್ತಿಲ್ಲ. ಯಾವ ರೀತಿ ತಂದಿದ್ದಾರೆ ಆ ರೀತಿಯಲ್ಲಿ ಚರ್ಚೆ ಮಾಡುವುದಕ್ಕೆ ಆಗುವುದಿಲ್ಲ. ನಮ್ಮ ರೂಲ್ಸ್‌ನ್ನು ಸಸ್ಪೆಂಡ್ ಮಾಡಿ ಸರ್ಕಾರದವರು ಧೈರ್ಯವಿದ್ದರೆ ಓಪನ್ ತರಲಿ ಚರ್ಚೆ ಮಾಡೋಣ. ಯಾವುದು ಆಗುವುದಿಲ್ಲವೋ ಅದನ್ನು ತಂದು ತಮ್ಮ ಕೈಯಲ್ಲಿ ಬ್ಯಾಡ್ ಪ್ರಿಸಿಡೆಂಟ್ ಕ್ರಿಯೇಟ್ ಮಾಡುವುದು ಬೇಡ. ನಮ್ಮ ಪಕ್ಷದವರು ನಿಯಮ ೯೮ರ ಪ್ರಕಾರ ತಂದಿರುವ ವಿಷಯವನ್ನು ಚರ್ಚೆ ಮಾಡುವುದಕ್ಕೆ ಅವಕಾಶ ಮಾಡಿಕೊಡಬಾರದು ಅದನ್ನು ಹೇಗಾದರೂ ಮಾಡಿ ಮುಂದಕ್ಕೆ ಹಾಕಬೇಕೆನ್ನುವ ಉದ್ದೇಶದಿಂದ ಈ ನಿಲುವಳಿ ಸೂಚನೆ ಬಂದಿದೆಯೇ ಹೊರತು ಬೇರೆ ವಿಧದಿಂದ ಇಲ್ಲವೆಂದು ಹೇಳುವುದಕ್ಕೆ ಇಚ್ಛೆಪಡುತ್ತೇನೆ.

SRI K. H. SRINIVAS.—Unfortunately, no chief Minister has taken a decision of this type. We had thought he had taken a bold decision. He had risen in our estimation yesterday.

ಶ್ರೀ ಎಂ. ಎಸ್. ನಾರಾಯಣರಾವ್.—ಕೊನೆಯದಾಗಿ ನಾನು ತಮ್ಮಲ್ಲಿ ಪ್ರಾರ್ಥನೆ ಮಾಡಿಕೊಳ್ಳುವುದು, ಏನು ಅಜೆಂಡಾ ಇದೆ ಅದರ ಪ್ರಕಾರ ರೂಲ್ಸ್ ೬೮ ಅದನ್ನು ಮೊದಲು ತೆಗೆದುಕೊಂಡು ಅದನ್ನು ಚರ್ಚೆ ಮಾಡಬೇಕೆಂದು ತಮ್ಮನ್ನು ಒತ್ತಾಯ ಮಾಡುತ್ತಿದ್ದೇನೆ.

(ಗೊಂದಲ)

½ ಶ್ರೀ ಎಂ. ವೀರಪ್ಪಮೊಯಿಲಿ.—ಸನ್ಮಾನ್ಯ ಅಧ್ಯಕ್ಷರೇ, ಈಗ ಏನೊಂದು ವಿಶಿಷ್ಟ ಪರಿಸ್ಥಿತಿಯಲ್ಲಿ ನಮ್ಮ ಸದನ ಇದೆ, ಬೆಳಿಗ್ಗೆ ೧೧ಗಂಟೆಯಿಂದ ಏನು ನಡೆಯುತ್ತಿದೆ ಎಂಬುದನ್ನು ನಾನು ಅಬ್ಸರ್ವ್ ಮಾಡುತ್ತಿದ್ದೇನೆ. ಆದರೆ ನನ್ನ ಶಾಸಕ ಜೀವನದ ಇತಿಹಾಸದಲ್ಲಿ ಇಂತಹ ಒಂದು ನಿಲುವಳಿ ಸೂಚನೆಯು ಬಂದು, ಅದನ್ನು ಎತ್ತಲಿಕ್ಕೆ ಪ್ರಯತ್ನಪಟ್ಟು ಸದನ ಅಡ್ಜರ್ನ್ ಆಗಿ ಆದಾದಮೇಲೆ ಅದೇ ವಿಚಾರದ ಬಗ್ಗೆ ಇವತ್ತು ಒಂದು ನಿಲುವಳಿ ಸೂಚನೆಯನ್ನು ಎತ್ತಲಿಕ್ಕೆ ಅನುಮತಿ ಕೊಟ್ಟ ಪ್ರಸಂಗ ಬಹುಶಃ ಕರ್ನಾಟಕ ವಿಧಾನಸಭೆಯ ಇತಿಹಾಸದಲ್ಲಿ ಮೊದಲು ಆಗಿಲ್ಲವೆಂದು ನಾನು ಖಂಡಿತವಾಗಿಯು ಹೇಳುತ್ತೇನೆ. Please show another instance, and I will agree. ತಾವು ಹೇಳಿದ್ದನ್ನು ನಾನು ಒಪ್ಪುತ್ತೇನೆ. ನಿಲುವಳಿ ಸೂಚನೆಯನ್ನು ನಿನ್ನೆ ಅವರು ಕೊಟ್ಟಿದ್ದಾರೆ. ಅದರ ಅಡ್ಮಿಸಬಿಲಿಟಿಯ ಬಗ್ಗೆ ನಿನ್ನೆ ಆಕ್ಷೇಪಣೆಯನ್ನು ಎತ್ತಿದ್ದಾರೆ. ನಾನು ಎತ್ತಿದ್ದೇನೆ, ಮಾನ್ಯ ಶ್ರೀನಿವಾಸ್‌ರವರು ಎತ್ತಿದ್ದಾರೆ. ಈ ಬಗ್ಗೆ ಬಿರುಸಿನ ಚರ್ಚೆಯಾಗಿದೆ. ತಾವು ತಮ್ಮ ಕೊಠಡಿಗೆ ನಮ್ಮನ್ನು ಕರೆದಿದ್ದೀರಿ, ಅಲ್ಲಿ ಆದ ತೀರ್ಮಾನವನ್ನು ಮಾತ್ರ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಈ ಸದನಕ್ಕೆ ಎಷ್ಟು ಪಾವಿತ್ರತೆ ಇದೆಯೋ ಎಷ್ಟು ಪ್ರಾಮುಖ್ಯತೆ ಇದೆಯೋ ಅಷ್ಟೇ ಪ್ರಾಮುಖ್ಯತೆ ಮತ್ತು ಪಾವಿತ್ರತೆ ತಮ್ಮ ಛೇಂಬರಿಗೆ ಇದೆ. You are the presiding deity of this House. ಇಲ್ಲಿ ನಾವು ನಿಮಗೆ ಎಷ್ಟು ಗೌರವ ಕೊಡುತ್ತೇವೆ ಅಷ್ಟೇ ಗೌರವವನ್ನು ತಮ್ಮ ಮಾತಿಗೆ ತಮ್ಮ ಛೇಂಬರಿನಲ್ಲಿ ಕೊಡಬೇಕಾಗುತ್ತದೆ. ಅಲ್ಲಿ ಏನು ಚರ್ಚೆಯಾಯಿತು? ಕೊನೆಗೆ ತೀರ್ಮಾನ ಆದದ್ದು ಏನು? ಸನ್ಮಾನ್ಯ ಮುಖ್ಯ ಮಂತ್ರಿಗಳು ಇರಲಿಲ್ಲ. ಎದೆ ಮುಟ್ಟಿಕೊಂಡು ಮಾನ್ಯ ಕಂದಾಯ ಮಂತ್ರಿಗಳು ಹೇಳಬೇಕು. ಶ್ರೀ ಲಕ್ಷ್ಮೀಸಾಗರ್ ಅವರು ಎದೆ ಮುಟ್ಟಿ ಹೇಳಬೇಕು. ನಿಮ್ಮ ಆತ್ಮಸಾಕ್ಷಿಯಾಗಿ ಹೇಳಬೇಕು. ತಾವು ಇರಲಿಲ್ಲ. ದಯಮಾಡಿ......

ಶ್ರೀ ಎಸ್. ಆರ್. ಬೊಮ್ಮಾಯಿ. – ಆತ್ಮಸಾಕ್ಷಿ ಶ್ರೀ ಪಟೇಲರಿಗೆ ಎಷ್ಟು ಇದೆಯೋ, ನಿಮಗೂ ಅಷ್ಟೇ ಇದೆಯೋ?

ಶ್ರೀ ಎಂ. ವೀರಪ್ಪ ಮೊಯಿಲಿ.—ಖಂಡಿತ ಇದೆ. ನನ್ನ ಆತ್ಮಸಾಕ್ಷಿಯಾಗಿ ನಾನು ಹೇಳುತ್ತಿದ್ದೇನೆ ಕೊನೆಗೆ ಏನು ಆಯಿತು? ನಮ್ಮ ಶ್ರೀ ಕೃಷ್ಣನ್ ಅವರು ಹೇಳಿದರು. ಹಿರಿಯ ಸದಸ್ಯರಾದಂಥ ಶ್ರೀ ಬಂಗಾರಪ್ಪನವರು ಹೇಳಿದರು. We are running on parallel lines. ಎಂದು ನಾನು ಕೈಜೋಡಿಸಿ ಪ್ರಾರ್ಥನೆ ಮಾಡುತ್ತೇನೆ. ನಮ್ಮ ಕರ್ನಾಟಕದ ವಿಧಾನಸಭೆ ತಮಿಳುನಾಡಿನ ವಿಧಾನಸಭೆ ಆಗಬಾರದು. ಬಿಹಾರ್ ವಿಧಾನಸಭೆ ಆಗಬಾರದು. ಕರ್ನಾಟಕದ್ದೇ ಆದಂಥ ಒಂದು ಸಂಸ್ಕೃತಿ ಇದೆ. ನಮ್ಮದು ಒಂದು ಪರಂಪರೆ ಇದೆ. ನಮ್ಮದೇ ಆದಂಥ ಒಳ್ಳೆಯ ವ್ಯಕ್ತಿತ್ವ ಇದೆ. ಆದ್ದರಿಂದ ಗೌರವಯುತವಾಗಿ ನಾವು ವಿಚಾರಗಳನ್ನು ನಡೆಸಿಕೊಂಡು ಹೋಗೋಣ ಮತ್ತು ಇವೊತ್ತು ಯಾವ ಒಂದು ಕಮಿಷನ್ ವರದಿಯನ್ನು ಇಲ್ಲಿ ಎತ್ತಬೇಕೆಂದು ಮತ್ತು ಅದರಿಂದ ಉದ್ಭವವಾಗಿರು ವಂಥ ವಿಚಾರಗಳನ್ನು ಎತ್ತಬೇಕೆಂದು ಹೇಳಿ ನಮ್ಮ ಸನ್ಮಿತ್ರರು ಹೊರಟಿದ್ದಾರೆ. ಅದನ್ನು ಲೋಕಸಭೆ ಯಲ್ಲಿ ಹಾಜರು ಮಾಡುವ ಮೊದಲು ಅಥವಾ ಹಾಜರು ಮಾಡಿದ ನಂತರ ಇದರ ಬಗ್ಗೆ ಪುಂಖಾನು ಪುಂಖವಾಗಿ ಸಾಕಷ್ಟು ವಿವಾದ ಎದ್ದಿದೆ. Just like an aggression by external country. a situation where people are one to face it. ಇದರ ಬಗ್ಗೆ ಸಾಕಷ್ಟು ಬಣ್ಣ, ಸಾಕಷ್ಟು ಕಲರಿಂಗ್ ಎದ್ದು ಇದು ವಾದವಿವಾದ ಆಗಿದೆ. ಇದರಲ್ಲಿ ನ್ಯಾಶನಲ್ ಕಾನ್ಸೆನ್ಸಸ್ ಎಲ್ಲಿದೆ? ನ್ಯಾಶನಲ್ ಕಾನ್ಸೆನ್ಸಸ್ ಇಲ್ಲದೇ ಇರತಕ್ಕಂಥ ವಿಚಾರವನ್ನು ಎತ್ತಿ ಮಾತನಾಡ ತಕ್ಕಂಥಾದ್ದು ಒಂದು ಸಬ್ಜೆಕ್ಟ್ ಇದು. ಇದರ ಬಗ್ಗೆ ಇಲ್ಲಿ ವರದಿ ಇಲ್ಲ. ಸಂಪೂರ್ಣವಾದಂಥ ವರದಿ ಕೊಟ್ಟಿಲ್ಲವೆಂದು ಲೋಕಸಭೆಯಲ್ಲಿ ವಾದ ಇದೆ. ಸಂಪೂರ್ಣವಾದ ವರದಿಯನ್ನು ಕೊಟ್ಟಿದೆ ಎಂದು ಮತ್ತೊಂದು ವಾದ ಇದೆ. This is highly a sensitive issue. It may have international repercussions or national repercussions. ಇಂಥಾದ್ದರಲ್ಲಿ ಎರಡು–ಮೂರು ಜನ ಡೆಲ್ಲಿಗೂ ಕೂಡ ಹೋಗಿದ್ದರು. ಇನ್ನೂ ಕೂಡ ಇದರ ಬಗ್ಗೆ ಫಾಲೋ ಆಫ್ ಆ್ಯಕ್ಷನ್ ತೆಗೆದುಕೊಳ್ಳಬೇಕು. ಸ್ಪೆಶಲ್ ಇನ್ವೆಸ್ಟಿಗೇಶನ್ ಟೀಮ್ ಎಂದು headed by Anandaram, that team's term has also been extended. And it is still investigating and some more accused may be arraigned. ಇದು ಯಾವ ಡೈಮನ್‌ಶನ್‌ಗೆ ಹೋಗುತ್ತದೆ ಎಂಬುದು ನಮಗೆ ಗೊತ್ತಿಲ್ಲ. ಆ ಬಗ್ಗೆ ಕಾಂಗ್ರೆಸ್ ಪರವಾಗಿ ನಾವು ಉತ್ತರ ಕೊಡುವುದಕ್ಕೆ ಆಗುವುದಿಲ್ಲ. ಅವರೂ ಕೊಡಲಿಕ್ಕೆ ಆಗುವುದಿಲ್ಲ. ಯಾರೂ ಇದರ ಬಗ್ಗೆ ಉತ್ತರ ಕೊಡುವುದಕ್ಕೆ ಆಗುವುದಿಲ್ಲ. ಇಂತಹ ಒಂದು ರಾಷ್ಟ್ರೀಯ ಸೂಕ್ಷ್ಮವಾದಂಥ ವಿಚಾರ ವನ್ನು ಇಲ್ಲಿ ತರುವಲ್ಲಿ ರಾಜಕೀಯ ಉದ್ದೇಶ ಇದೆಯೋ? ಅಥವಾ ದೇಶದ ಸಮಗ್ರತೆ ಅಥವಾ ಭದ್ರತೆಯ ವಿಷಯ ಇದರಲ್ಲಿ ಏನಿದೆ? ಇದರಿಂದ ಏನು ಸಾಧಿಸಿದಂತೆ ಆಗುತ್ತದೆ? We cannot give any reply. Still Lok Sabha is seized of this matter. Lok Sabha has not concluded this issue. Investigations haue not been concluded- Full report has not yet come. ಎಂದು ಹೇಳಿ ಆ ವಾದ ಅಲ್ಲಿ ಬರುತ್ತಿದೆ. ಮತ್ತೆ ಇದನ್ನು ವಿಶ್ಲೇಷಣೆಯನ್ನು ಮಾಡುವ ಮೊದಲು ಒಂದನ್ನು ನಾನು ವಿನಂತಿ ಮಾಡಿಕೊಳ್ಳುವುದೇನೆಂದರೆ ಏನು ಈಗ ಚರ್ಚೆ ಮಾಡುತ್ತಿದ್ದೇವೆ ಅಥವಾ ನಿಲುವಳಿ ಸೂಚನೆ ತರಲಾಗಿದೆ ಅದು it is bound to be divided into three parts.

The question is ಇದರಲ್ಲಿ *prima fadie* ಏನಾದರೂ ನಿಯಮಗಳ ಪ್ರಕಾರ ಇದೆಯೇ? ಇದ್ದರೆ you will allow them to raise the issue. Suppose you feel that it is not at all admissible, you can reject it in your chamber itself. This is not an admissibility issue, not even the question of maintainability. If it is the question of maintainability, ಪ್ರಿಲಿಮಿನರಿ ಪ್ರಸ್ತಾಪ ಮಾಡುವುದಕ್ಕೆ ಅವಕಾಶ ಕೊಡಬೇಕು, if it is a borderline case. ಅಥವಾ maintainability ಬಗ್ಗೆ ಸ್ವಲ್ಪ ಅನುಮಾನ ಇದ್ದರೆ, I can understand. First you have to see the question of admissibility, then the question of maintainability. Last part is the question of *prima facie* case where an adjournment motion can be allowed to be discussed. Wherein case of maintainability, you allow them to

state or brief the case, to convince you. That will be the preliminary stage. So far as the question of the area of admissibility concerned: you can reject it outright at the chamber. ನಾವು ಇದನ್ನು ಕನ್‌ವಿನ್ಸ್ ಮಾಡುವುದಕ್ಕೆ ಇಲ್ಲಿ ನಿಂತಿದ್ದೇವೆ. ಮಾನ್ಯ ಶ್ರೀನಿವಾಸ್‌ರವರು ಮತ್ತು ಮಾನ್ಯ ಖರ್ಗೆಯವರೂ ಇದನ್ನೇ ಹೇಳುತ್ತಾ ಇದ್ದಾರೆ. It is a question of admissibility. ಇದರ ಬಗ್ಗೆ ತಮಗೆ ಕೌಲ್ ಅಂಡ್ ಷಕ್ಧರ್ ಹೇಳುವ ಮೊದಲು, ಅಡ್ಮಿಸಿಬಿಲಿಟಿ ಮೇಲೆ, ೧೯೬೨ನೇ ಇಸವಿಯಲ್ಲಿ, There is a Precedent laid down by Sri Vaikuta Baliga. The precedent laid down is with regard to the admissibility and it is not on maintainability. ಈ ವಿಚಾರ ಬಂದಾಗ ಒಂದೇ ಒಂದು ಪ್ಯಾರಾಗ್ರಾಫ್ ಓದಿ, ಉತ್ತರ ಕೊಡುವುದಲ್ಲ, ಕೊನೆಗೆ ಅಧ್ಯಕ್ಷರು ಏನು ರೂಲಿಂಗ್ ಕೊಟ್ಟಿದ್ದಾರೆ, that too an issue which had national consensus, with regard to facing the Chinese Aggression. There is a clear ruling. That is binding because this is the ruling of this House, and a ruling laid down under the provisions of the Rules of Procedure. I don't think we can cross this rule, which has been held as a rule for more than $2\frac{1}{2}$ decades. You are now presiding over the subject. Is it to over-rule that rule which has been accepted as a consensus rule governing the relationship with regard to adjournment motion? Are you to disturb it? ...that well accepted, and well laid down rule of the Speaker, was not disturbed so far. None of the Speakers who came thereafter or none of the Houses came thereafter have chosen to disturb this rule. Whether that rule is correct or not, are we to discuss it? Once a rule is laid down, I do not think there is only scope for further argument. I will read out his ruling.

> "I will deal with the point of order raised by the Hon. Member Sri Puttaramaiah. This adjornment motion was given to me on the first day, that is on opening day. As far as the fact is concerned whether it is of recent occurrence or not. I am of the opinion that it is of recent occurrence which was given on the first day of the Session. I have heard Sri Puttaramaiah with keen interect. I can only say that he has missed the bus and he has not advanced any argument which will go in his favour so far as the admissibility is concerned."

Hence is not the question of maintainability, nor the question o prima facie. Further it he says

> "There is one more argument he could have put before this House. Some of the hon. members might know that there was a discussion about the India China border in the Bengal Assembly though that was not on adjournment motion but on a resolution. Whether a question should be raised on a resolution or adjourment motion is for the Members to decide and he may raise it as he likes."

1-30 P M.

But I have to deal to-day with the adjournment motion. i have looked into the costitutionai position. I have come to the conclusion that this Government has absolutely no authority or no constitutional power in this respect. It may be that the Minister for Law might have talked about it on many platforms and referred to it. But, it is not his constitutional responsibility That has to be clearly under stood. I make it clear to that in the Mea of Sri Puttaramaiah that though there might be congent arguments I must be guided by the constitntional position."

The Speaker has to be guided not only by the rules governing the House, but should be guiden even under the constitutional provision, which is governing this House. That Is the over-riding vmbrella under which we have got to take shelter and conduct the greatest pillars of democracy and one of such pillars of the democracy is this House. Oe cannot ignore it Sri Kadidal Manjappa was a Minister then. He says.—

"It is a policy matter and the policy with regard to our relationship with China h s to be determind by the Central Government and not by the State gov rnment and not by the State Government"

"MR SPAKER.—The duties and responsibilities of an Indian are something different from the constitutional Position of State Government. Even thought it is a very important question which has againsted the mind of every patriotic India........."

Yes, I do not find fault with him. It must have aginsted your mind or any patriotic citizen.

".........I am constrainted to say that this Adjournment motion is not admissible"

You may be patriotic. Yes, You may feel in your own area. We do not find fault with you. You may feel that it is a matter in which you are agitat d. The Chief Minis r may be agitated, We are also agitated over this We h ve lost our own mother. But, still we are governed to work under the Constitution, Under the constitutional provision, and under the rules governing this Hous , I am constrained to say that the Adjournment Motion is not admissible, and Maintainable, It is not admissible. That is the word, because there is a lot of difference between the word maintainability, prima facie and the admissibility. This is the eonnotation of the word which has been used in the parliamentary connotation. We cannot give our own meaning for the concept of admissibility. on the concept of maintanability, on the concept

of prima facie case for an Adjournment Motion. This is a Bible as far as this House is concerned. This is the Bible, the Khuran and the Gita. This has got to govern the relations of this House. Are we to question this ruling and re-open Bandora's box when everything will have to be discussed and thrashed out, Then it cannot be a democracy. It can be a mobocracy where everything can be brought under any subject, under any rule and the rule has to be inteipreted with the absolute concept for which the rule has been enunciated. I will regarad this as the mose important document which has maintained the decorum. and the sanctiitcy of the proceedings of Karnataka Assembly. I do not want you or anyone of us to indulge, interfere or transgress the sanctified line which has been drawn by the well accepted precedents laid down by the then Speaker in this House, It does not open for an interpretation. either by Sri Venkataramaiah or Sri Krishanan when it comes to this. ಈ ಕೆಲವು ವಿಚಾರಗಳನ್ನು ನಾನು ಹೇಳಿದ್ದುದು ಮಾತ್ರವಲ್ಲದೆ, ಇನ್ನೂ ಕೆಲವು ವಿಚಾರಗಳನ್ನು ಹೇಳುತ್ತೇನೆ. ತಾವು ದಯಮಾಡಿ ಕೇಳಬೇಕು. On Page 420 in the last pagraph of the book written by Kaul and Shakdher, it is said that it should have a factual basis. What does it say ? It says as fallows :

> " The mover of a motion must be ready with all the facts before he makes the motion."

The mover of the motion must be ready with all the facts before he makes the motion. They must makes the motion. They must make availabe the Thakkar Commission report, and all other facts before he moves the motion. This motion rests upon Thakkar Commission report which is presnted before the Lok Sabha. ಅಲ್ಲಿಯೇ ಪೂರ್ತಿ ಇದನ್ನು ಇಟ್ಟಿಲ್ಲ. Firstly that report is not in the custody of anyone of the member except some paper cuttings or the newspaper. Secondly It is again disputed by your own national leader that the report is not complete. Only a few part of the report is presented. So, we are not in possession o the full facts or the movers of the Adjournment Motion or the Adjournment Motion. This is a basic ingredient, a predominant ingredient of an Adjournment Motion before you allow it raise. How can you deal with the partial fact, a fact alleged to be distorted according to us, and according to their own version. Even no less than a person like the ex-Chief Minister, who is a Member of this House, Sri Ramakrishna Hegde, has said that the report has been distorted. Are we going to discuss about that alleged distorted report on the floor of this House ? Are we going to do that ? We will be doing certain things which is perverse to the facts. When we are discussing basically on the inference which is drawn by them, that it is a distorted report, and a twisted report, are we going to base our discussion on that ? ಅಂತಹ ತಾವು ಇಲ್ಲಿ ಅವಕಾಶ ಮಾಡಿ ಕೊಡುತ್ತೀರಾ?

Further it says :

"Where the information is within the personal knowledge of a membber, it may be presumed as having factual basis if confiimed by him on the floor of the House."

Another point is mentioned in page 421, written by Kaul and Shakdher. Every page speaks about this. Every page, every sentence in this commentary of Kaul and Shakdher will go against the movers of this Adjournment Motion. Every sentence of Kaul and Shakdher speaks about this if at all we have some respect, some faith fo- the commentary which is well accepted by everyone with regard to the commentary of Kaul and Shakdher. In page 421 it is said :

"An adjournment motion does not lie when facts are in dispute or before they are available."
Is it not a predominant point again ?

"When Government dispute the facts stated in the notice of the adjournmend motion, the speaker accepts the Government version of facts."

An adjournment motion does not lie when facts are in dispute. Facts are in dispute even according to them. Facts are in dispute even according to us, because press would not have come out wlthout proper details, with full complements. It would not have dealt with the proper perspective and the dimen? sion of the whole probblem, and the whole gamut of tee situation. Are we to discuss about those disputed facts here and draw our own argument saying that it is in the intrest of the integrity of the nation ? Rather we are giving a big blow to the integrity of the nation by discuss in on a matte, a national sensitive matter like this. Speaking on disputed facts where are we leading our country ? Where are we leading our country like this ? Give some sanctity for the country. Do you want the country to survive or demolish. Are we to throw open this platform for giving a blow to the national intergrity ? The sympathy should not wash away the sense of national duty which is cast upon all of us. It is not mainly cast on either Congress party all of us shold be the custodians of this national duty. Some restraint will have to be used so that the country's sovereingty and the intergrity can be upheld. Everybody i interested to know the truth, the mystery will have to be unraveled. This is the intention of everyone of us. We are more intrested because our mother has been killed, we are more interested to know. Let it be done by Lok Sabha otherwise by such discussion unravelling the history is it your intention as national party the Janata Dal, is it your intention I am asking my brothern here of the Communist Parties.

SRI M. RAGHUPATHY.—We are first to protect the national integration but it is not safe in their hands, they are unfit to rule this country, It is a matter of shame...

(Interruption)

SRI M. VEERAPPA MOILY.—Then, the other question is when adjournment motion is tabled in chamber the Chair has to apply its mind and see whether there is any ministerial responsibility of the Government governing the State. ಇದರ ಬಗ್ಗೆ ಸಾಕಷ್ಟು ನನ್ನ ಮಿತ್ರರಾದಂಥ ಶ್ರೀನಿವಾಸ್‌ರವರು ತಮಗೆ ಹೇಳಿದ್ದಾರೆ. In page 418 of the Kaul & Shakder it has been clearly defined. An adjournment motion concerning the State Government is inadmissible when it is raised or moved in the Loka Sabha or Rajya Sabha. Same analogy will hold good. Notice of an adjournment motion relating to a State subject has, therefore, to be accompanied by a statement showing how the responsibility of the Government of India has not been discharged. This is what is stated in Kaul &Shakder. Now, I would like to know, is there any statement which is enclosed by the mover of the adjournment motion where the responsibility of the State Government has been fixed. I would like to see that. Is there any statement enclosed by the movers of the adjourment motion saying that there is an element of State's responsiblity as far as this motion is concerned...

ಶ್ರೀ ಎಂ. ಎಸ್. ಕೃಷ್ಣನ್.—ಅವಕಾಶ ಕೊಟ್ಟಿದ್ದರೆ ಅದನ್ನೆಲ್ಲಾ ಮಾಡಬಹುದಾಗಿತ್ತು. ನಾವು ಪ್ರಿಲಿಮಿನರಿ ಸಬ್‌ಮಿಷನ್ ಏನು ಮಾಡುತ್ತೇವೆಂದು ತಿಳಿದುಕೊಂಡು ಇದನ್ನು ಮಾತನಾಡುತ್ತಿದ್ದಾರೆ.

SRI M. VEERAPPA MOILY.—Notice of adjournment motion unacompanied by a statement saying that there is responsibility of the State Government it cannot be admitted at all...

It is not a point of area to be convinced, it is not the area where you might have convinced. It is an area of part and parcel of the document itself. In the absence of that I don't think you can admit it. Even in the earlier paragraph it is said.

> "Generally speaking the subject-matter of an adjournment motion must have direct or indirect relation to the conduca of default on the part of the Government of India and must be in the nature of criticim of the action of the Government of India either for having done some action or for having omitted to do some action which was urgenlly necessary at the moment. An adjournment motion is not admissible unless there was failure on the part of the Government to perform the duties enjoined by the Constitution and the law

Where is the duty enjoined by the Constitution and the law on this State Government. So, on this count you cannot admit the motion Sir, there is one more matter. This matter came up yesterday. It was raised yesterday. How can we review it. A matter already discussed by the House cannot be revived during the same session by way of on adjournment motion. So, if the movers of the adjournment motion or the present Government really concerned about unrivalling the mystery instead of trying to put an iron curtain in the name of this discussion please leave this to the Lok Sabha, to say something, Let us not discuss this matters ಇದರ ಮೇಲೆ ಚರ್ಚೆಗೆ ಅವಕಾಶ ಕೊಟ್ಟು ಇಂದಿರಾಗಾಂಧಿಯವರನ್ನು ಒಂದು ಸಲ ಅಲ್ಲ, ಸಾವಿರಾರು ಸಲ ಕೊಲ್ಲುವ ಪ್ರಯತ್ನ ಮಾಡಬೇಡಿ ಅಂಥ ಕೆಟ್ಟ ಸಂಪ್ರದಾಯ ಹಾಕದಿರುವ ಪವಿತ್ರ ಕೆಲಸ ತಾವು ಮಾಡಬೇಕೆಂದು ಕೈಜೋಡಿಸಿ ಕೇಳಿಕೊಳ್ಳುತ್ತೇನೆ

(ಗೊಂದಲ)

ಶ್ರೀ ಎಂ. ವೀರಪ್ಪ ಮೊಯಿಲಿ.—ದಯವಿಟ್ಟು ಆ ಕೆಲಸ ಮಾಡಬೇಡಿ.

ಶ್ರೀ ಎಸ್. ಆರ್. ಬೊಮ್ಮಾಯಿ.—ಇಷ್ಟು ಹೊತ್ತೂ ಗಂಭೀರವಾಗಿ ಮಾತಡಿದ್ದೀರಿ.

ಶ್ರೀ ಎಂ. ವೀರಪ್ಪವೊಯಿಲಿ.—ಅವಕಾಶ ಕೊಡಬೇಕೆಂದು ತಾವು ಹೇಳಿರಲಿಲ್ಲ.

(ಗೊಂದಲ)

ಶ್ರೀ ಎಸ್. ಆರ್. ಬೊಮ್ಮಾಯಿ. —Let us not mix up politics. Don't try to take the debate to a lower level .....

SRI M. VEERAPPA MOILY.—I am appealing please under your Leadership of this House. Please don't demoralise this House. Don't take this bottom rock level the tradition which has been laid down. No Leader has supported this sort of matter concerning Parliament. No Speaker, no leade of the House has supported for this. is unprecedented, unwarranted, it is unconstitutional and we are inviting a mobceracy in this House by allowing a motion like this. ಅಧ್ಯಕ್ಷರೆ, ದಯಮಾಡಿ ಇದನ್ನು ತಡೆಯಿರಿ.

SRI M. S. KRISHNAN.—Sir, my friend Sri Moily has said the notice of adjournment motion tabled by me was not in order saying some document is not attached. I will just read the relevant portion from Kaul & Shakder. It says :

> "Notice of an adjournment motion is given by Members on the presciibed from, copies of which are made available to them through the parlimentary Notice Office. In his notice of a motion for an adjournment of the business of the House, a member has to state the definite matter which he wants the House to Consider. He must confine the subject matter of the notice within the limits laid down by the Rules and be breif and clear about it. A notice which is vague or contains lengthy arguments which are in the nature of a discussion is disallowed on that very ground".

So, all these things we have applied in that and it is in order. It has been given in the manner prescribed and the motion is preffectly in order. I appeal to the Chair to consider the adjuornment motion presented and as regards argument advanced by Mr. Moily I would only say I disagree with his view point.

ಪ್ರೊ ಎ. ಲಕ್ಷ್ಮೀಸಾಗರ್.—ಸನ್ಮಾನ್ಯ ಅಧ್ಯಕ್ಷರೆ, ಈ ಘಟನೆ ಬಗ್ಗೆ ಆ ಕಡೆಯ ನನ್ನ ಸ್ನೇಹಿತರು ಈ ವಿಷಯದ ಮೇಲೆ ಪ್ರಸ್ತಾಪ ಮಾಡಿರುವಂತೆ ನಿನ್ನೆಗೂ ಇವತ್ತಿಗೂ ವ್ಯತ್ಯಾಸ ಏನೆಂದರೆ ನಿನ್ನೆ ಈ ಪ್ರಸ್ತಾಪ ಮಾಡುವುದಕ್ಕೆ ಆಗುವುದಿಲ್ಲ ಎಂದು ಹೇಳಿದವರು ಇವತ್ತು ಪೂರ್ವ ಭಾವಿಯಾಗಿ ಪ್ರಸ್ತಾಪ ಮಾಡುವುದಕ್ಕೆ ಯೋಗ್ಯವಾದ ವಿಚಾರವೆಂದು ಸೀಮಿತವಾಗಿಯಾದರೂ ಒಪ್ಪಿ ಕೊಂಡಿದ್ದಕ್ಕೆ ಅವರಿಗೆ ಧನ್ಯವಾದಗಳು. ಆದರೆ ಶ್ರೀ ಮೊಯಿಲಿಯವರು ಏನು ಮಾಡಿದರು ಎಂದರೆ ಇದು ಪೂರ್ವಭಾವಿಯಾಗಿ ಸಬ್‌ಮಿಷನ್ ಕೂಡ ಹೇಳಿಬಿಟ್ಟಿದ್ದಾರೆ ಆ ಮೂಲಕ ಒಂದು ಹೆಜ್ಜೆ ಮುಂದೆ ಹೋಗಿದ್ದಾರೆ. ತಾವು ಅವಕಾಶ ಕೊಟ್ಟ ಮೇಲೆ.

ಶ್ರೀ ಎಸ್. ಬಂಗಾರಪ್ಪ.—ಇಲ್ಲಿಲ್ಲ.

ಪ್ರೊ ಎ. ಲಕ್ಷ್ಮೀಸಾಗರ್.—ಅದರಲ್ಲಿ ಮುಖ್ಯವಾದ ವಿಚಾರವೆಂದರೆ ಸಾಮಾನ್ಯವಾಗಿ ನಿಲುವಳಿ ಸೂಚನೆ ತಂದಾಗ ಅದಕ್ಕೆ ಸರ್ಕಾರದ ಹೊಣೆ ಇರಬೇಕು. ಸರ್ಕಾರ ಉತ್ತರಬದ್ಧವಾಗಿರಬೇಕು, ಪ್ರಸ್ತಾಪಿತವಾಗುವ ವಿಷಯ ಸರ್ಕಾರದ ಅಧಿಕಾರ ವ್ಯಾಪ್ತಿಯೊಳಗೆ ಬರಬೇಕು ಅಂತಹ ವಿಷಯಗಳನ್ನು ಮಾತ್ರ ಪ್ರಸ್ತಾಪ ಮಾಡಬೇಕು. ನಿಜ. ಮೇಲ್ನೋಟಕ್ಕೆ ಇದು ನಿಜ ಆದರೆ ಇಲ್ಲಿ ಪ್ರಸ್ತಾಪ ಮಾಡಲು ಹೊರಟಿರುವಂಥ ವಿಚಾರ ಏನು ? ಬರೀ ಈ ರಾಜ್ಯದ ವಿಷಯಗಳನ್ನು ಕುರಿತು ಪ್ರಸ್ತಾಪ ಮಾಡು ಮಾಡುವುದಕ್ಕೆ ಹೊರಟಿಲ್ಲ. ಈ ದೇಶದಲ್ಲಿ ಒಂದು ಘಟನೆಯಾಗಿದೆ. ಅದರಲ್ಲಿ ಮೇಲ್ನೋಟಕ್ಕೆ ಕಾಣಿಸಿಕೊಂಡಿರುವ ಜನ ಬಿಟ್ಟು ಕಾಣದೇ ಇರುವ ಜನರ ಪಾತ್ರ ಇದೆ, ಅದನ್ನು ಮುಚ್ಚುತಕ್ಕಂಥ ಪ್ರಯತ್ನ ಅತ್ಯಂತ ಮೇಲ್ಮಟ್ಟದ ಪ್ರದೇಶದಲ್ಲಿ ನಡೆದಿದೆ. ಠಕ್ಕರ್ ಕಮಿಷನ್ ರಿಪೋರ್ಟ್ ಪ್ರಕಾರವೆ. ಒಬ್ಬ ವ್ಯಕ್ತಿ who hs facilitated in the commission of assassination of Mrs. Indira Gandhi is going about like free man, lik great manf

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಅವನು ಯಾರು ? ಗೊತ್ತಿದೆಯೋ, ಹೇಳಿ. ಮೊಯ್ಲಿ ಯವರು ಪಾಯಿಂಟ್ ಆಫ್ ಆರ್ಡರ್ ಬಗ್ಗೆ ಹೇಳಿ ಎಂದರೆ ಬೇರೇನೋ ಹೇಳುತ್ತಿರಲಿಲ್ಲ.

(ಗೊಂದಲ)

ಪ್ರೊ ಎ. ಲಕ್ಷ್ಮೀಸಾಗರ್.—ಅವರು ಹೇಳುತ್ತಿದ್ದಾಗ ನಾನು ಅಡ್ಡಿ ಬರಲಿಲ್ಲ.

(ಗೊಂದಲ)

ಅಧ್ಯಕ್ಷರು.—ಅವರು ಏನು ಹೇಳುತ್ತಾರೋ ಕೇಳಿ.

ಪ್ರೊ ಎ. ಲಕ್ಷ್ಮೀಸಾಗರ್.—ಸಾಮಾನ್ಯ ಸಮಯದಲ್ಲಿ ಬರುವ.... .

(ಗೊಂದಲ)

ಅಧ್ಯಕ್ಷರು.—ಮೊಯ್ಲಿಯವರು ಮಾತನಾಡುವಾಗ ಒಬ್ಬರೂ ಆ ಕಡೆಯವರು ಅಡ್ಡಿ ಬರಲಿಲ್ಲ. ಈಗೇಕೆ ನೀವು ಮಾತಾಡುತ್ತಿದ್ದೀರಿ.

(ಗೊಂದಲ)

ಅಧ್ಯಕ್ಷರು.—ಅವರು ಹೇಳುವುದನ್ನು ಕೇಳಿ. ನಾನು ಆ ಕಡೆಯವರಿಗೂ ಈ ಕಡೆಯವರಿಗೂ ಹೇಳುತ್ತೇನೆ.

ಪ್ರೊ ಎ. ಲಕ್ಷ್ಮೀಸಾಗರ್.—ಸಾಮಾನ್ಯ ಸಮಯದಲ್ಲಿ ತೆಗೆದುಕೊಳ್ಳತಕ್ಕಂತಹ ನಿಲುವಳಿ ಸೂಚನೆಯೂ ಇದೆ ಅಸಾಮಾನ್ಯ ಸಮಯದಲ್ಲಿ ತೆಗೆದುಕೊಳ್ಳತಕ್ಕಂತಹ, ಬರತಕ್ಕಂತಹ ನಿಲುವಳಿ ಸೂಚನೆಯೂ ಕೂಡ ಈ ಸಭೆಯಲ್ಲಿ ಬಂದು ಚರ್ಚೆಯಾಗಿವೆ.

ಶ್ರೀ ಪಿ. ಎಸ್. ರಾಣಿ.—ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು......

(ಗೊಂದಲ)

ಶ್ರೀ ಜಿ. ಎಸ್. ಶಿವನಂಜಪ್ಪ.—ಮಾನ್ಯ ಅಧ್ಯಕ್ಷರೆ,......

(ಗೊಂದಲ)

ಅಧ್ಯಕ್ಷರು.—ಮಾನ್ಯ ಉಪನಾಯಕರೇ, ತಾವು ತಮ್ಮ ಜನರಿಗೆ ಹೇಳಬೇಕು.

(ಗೊಂದಲ)

ಅಧ್ಯಕ್ಷರು.—ತಮಗೆ ಹೇಳುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದೇನೆ. ಈಗ ಅವರು ಮಾತನಾಡಲು ನಿಂತಿದ್ದಾರೆ. ಅವರು ಕಾನೂನು ಮಂತ್ರಿಗಳಾಗಿದ್ದಾರೆ, ಕಾನೂನು ಬಲ್ಲವರಾಗಿದ್ದಾರೆ ನಾನು ಅವರಿಗೆ ಅವಕಾಶ ಕೊಟ್ಟಿದ್ದೇನೆ.

(ಗೊಂದಲ)

ಪ್ರೊ॥ ಎ. ಲಕ್ಷ್ಮೀಸಾಗರ್.—ಸಾಮಾನ್ಯ ಸಮಯದಲ್ಲಿ ತೆಗೆದುಕೊಳ್ಳತಕ್ಕಂತಹ ನಿಲುವಳಿ ಸೂಚನೆಗಳೂ ಇವೆ ಅದರ ಬಗ್ಗೆ ನಾನು ಪ್ರಸ್ತಾಪ ಮಾಡುವುದಿಲ್ಲ. ಅಸಾಮಾನ್ಯವಾದಂತಹ ಸನ್ನಿವೇಶದಲ್ಲಿ ನಾವು ಇವತ್ತು ಇದ್ದೇವೆ. ಎರಡು ಘಟನೆಗಳ ಬಗ್ಗೆ ಒಂದೆ ಈ ಮನೆಯ ಅಧಿಕಾರ ವ್ಯಾಪ್ತಿಗೆ ಸೇರದೇ ಇರತಕ್ಕಂತಹ ವಿಚಾರಗಳು ಅದು ಆದರೂ ಕೂಡ ಅಂದರೆ ಚೈನಾ, ಪಾಕಿಸ್ತಾನದಲ್ಲಿ ಯುದ್ಧ ನಡೆಯುತ್ತಿದ್ದಾಗ, ಈ ರಾಜ್ಯ ಸರ್ಕಾರಕ್ಕಾ ಅವಕ್ಕೂ ಏನೂ ಸಂಬಂಧವಿಲ್ಲದಿದ್ದರೂ ಕೂಡ ಈ ಸಭೆಯ ಗಮನವನ್ನು ಸೆಳೆಯುವುದಕ್ಕೋಸ್ಕರ. ಗಮನವನ್ನು ಸೆಳೆಯುವುದರ ಮುಖಾಂತರ ನಮ್ಮ ರಾಜ್ಯದ ಜನರ ಗಮನವನ್ನು ಸೆಳೆಯುವುದಕ್ಕೋಸ್ಕರ ಈ ಸಭೆಯಲ್ಲಿ ಅದು ಪ್ರಸ್ತಾಪವಾಗಿ ಒಂದು ಗೊತ್ತುವಳಿಯನ್ನು ಈ ಸಭೆಯಲ್ಲಿ ಪಾಸ್ ಮಾಡಿ ಕಳುಹಿಸತಕ್ಕಂಥಾದ್ದು ಇದೆ. ಈ ಎರಡು ಉದಾಹರಣೆಗಳು ಇವೆ. ಆಗ ಹೊರಗಿನ ಶತ್ರುಗಳು ನಮ್ಮ ದೇಶದ ಮೇಲೆ ದಂಡೆತ್ತಿ ಬಂದಂತಹ ಸಮಯದಲ್ಲಿ ಆದಂತಹ ಚರ್ಚೆ ಅದು. ಆದರೆ ಈಗ ಇಲ್ಲಿ ಉದ್ಭವವಾಗಿರತಕ್ಕಂತಹ ಪರಿಸ್ಥಿತಿ ಏನೆಂದರೆ ಮನೆ ಒಳಗಿನ ಕಳ್ಳ ದೇಶಕ್ಕೆ ದ್ರೋಹ ಹೆಚ್ಚು ಮಾಡುತ್ತಾನೆ. ಹೊರಗಿನ ಕಳ್ಳನನ್ನು ಎದುರಿಸಬಹುದು ಆದರೆ ಮನೆ ಒಳಗೆ ಇರತಕ್ಕಂತಹ ಶತ್ರು ಈ ದೇಶದ ಭದ್ರತೆಗೆ ಕಳಂಕವನ್ನು ತರತಕ್ಕಂತಹ, ಕುತ್ತನು ತರತಕ್ಕಂತಹ ಪರಿಸ್ಥಿತಿ ಈ ಠಕ್ಕರ್ ವರದಿಯಲ್ಲಿ ಪ್ರಕಟಿತವಾಗಿದೆ. ಅದನ್ನು ಮುಚ್ಚಿಡತಕ್ಕಂತಹ ಪ್ರಯತ್ನ ಈ ದೇಶದಲ್ಲಿ ನಡೆಯುತ್ತಿದೆ. ಇದನ್ನು ನೋಡಿಕೊಂಡು ನಾವು ಬಾಯಿ ಮುಚ್ಚಿಕೊಂಡು ಇರುವುದಕ್ಕಾಗುವುದಿಲ್ಲ.

(ಗೊಂದಲ)

(ಕಾಂಗ್ರೆಸ್ ಸದಸ್ಯರು ಸಭಾಧ್ಯಕ್ಷರ ಪೀಠದ ಮುಂದಿರುವ ಆವರಣಕ್ಕೆ ಬಂದು ಮಾತನಾಡತೊಡಗಿದರು.)

ಅಧ್ಯಕ್ಷರು.—ತಾವು ತಮ್ಮ ಸ್ಥಳಗಳಿಗೆ ಹೋಗಿ ಕುಳಿತುಕೊಳ್ಳಿ.

(ಗೊಂದಲ)

ಪ್ರೊ॥ ಎ. ಲಕ್ಷ್ಮೀಸಾಗರ್.—ಇಂತಹ ಅಸಾಮಾನ್ಯವಾದ ವಿಚಾರದಲ್ಲಿ ನಾವು ಕಣ್ಣು ಮುಚ್ಚಿಕೊಂಡು ಸುಮ್ಮನೆ ಇರುವುದಕ್ಕಾಗುವುದಿಲ್ಲ. ಇದಕ್ಕೆ ತಾವು ಅವಕಾಶ ಕೊಡಬೇಕು.

(ಗೊಂದಲ)

ಪ್ರೊ॥ ಎ. ಲಕ್ಷ್ಮೀಸಾಗರ್.—ಮಾನ್ಯ ಮೊಯಿಲಿಯವರು ಪೂರ್ವಭಾವಿಯಾಗಿ ಹೇಳಿದರು......

(ಗೊಂದಲ)

ಅಧ್ಯಕ್ಷರು.—ತಾವು ತಮ್ಮ ತಮ್ಮ ಸ್ಥಳಗಳಿಗೆ ಹೋಗಿ. ತಾವುಗಳು ಈ ರೀತಿ ಮಾಡುವುದು ಸರಿಯಲ್ಲ. ನಾನು ರೂಲಿಂಗ್ ಕೊಡಬೇಕಾಗುತ್ತದೆ.

(ಗೊಂದಲ)

ಅಧ್ಯಕ್ಷರು.—ಈಗ ಸಭೆಯನ್ನು ಮುಂದೂಡಲಾಗಿದೆ.

(ಸದನವು ೨–೦೨ಕ್ಕೆ ಮುಂದೂಡಲ್ಪಟ್ಟಿತು)

(ಸದನವು ಪುನಃ ೬–೦೦ ಗಂಟೆಗೆ ಸಮಾವೇಶಗೊಂಡಿತು)

(ಮಾನ್ಯ ಅಧ್ಯಕ್ಷರು ಪೀಠವನ್ನಲಂಕರಿಸಿದರು)

(ಕಾಂಗ್ರೆಸ್ ಪಕ್ಷದ ಸದಸ್ಯರು ಅಧ್ಯಕ್ಷರ ಪೀಠದ ಮುಂದಿರುವ ಆವರಣದಲ್ಲಿದ್ದುಕೊಂಡು ಕ್ಷಮೆ ಕೇಳಬೇಕೆಂದು ಕೇಳುತ್ತಿದ್ದರು)

(ಗೊಂದಲ)

ಅಧ್ಯಕ್ಷರು.—ಎಲ್ಲರೂ ತಮ್ಮಗಳ ಸ್ಥಳಕ್ಕೆ ಬನ್ನಿ. ಅವರು ಅಂತಹ ಅಬ್ಜೆಕ್ಷನಲ್ ಪದಗಳನ್ನು ಏನಾದರೂ ಹೇಳಿದ್ದರೆ, ಅದನ್ನು ಎಕ್ಸ್‌ಪಂಜ್ ಮಾಡುತ್ತೇನೆ. ಮತ್ತೆ ಮಾನ್ಯ ಮುಖ್ಯಮಂತ್ರಿಗಳು ಹೇಳಿರುವಂತಹ ವಿಚಾರದಲ್ಲಿ ನಾಳೆ ರೂಲಿಂಗ್ ಕೊಡುತ್ತೇನೆ. ಈಗ ಸಭೆಯನ್ನು ನಾಳೆ ಬೆಳಿಗ್ಗೆ ೯–೦೦ ಗಂಟೆಗೆ ಮುಂದೂಡುತ್ತೇನೆ.

(ಸದನವು ೬–೦೨ಕ್ಕೆ ಮುಂದೂಡಲ್ಪಟ್ಟು ಮರುದಿನ ಬೆಳಿಗ್ಗೆ ೯–೦೦ ಗಂಟೆಗೆ ಸಮಾವೇಶಗೊಳ್ಳಲು ನಿರ್ಧರಿಸಿತು)